SAPTHAGIRI(KANNADA)
ILLUSTRATED MONTHLY
Volume:02, Issue:1, Pages:56
August-2022,Price Rs.5/-

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಆಗಸ್ಟ್ 2022
ಬೆಲೆ ರೂ. 5/-



19-08-2022
ಶ್ರೀಕೃಷ್ಣಾಷ್ಟಮಿ

**ತಿರುಪತಿ ಸಮೀಪದಲ್ಲಿರುವ ಪಾತಕಾಲ್ವ (ಪೇರೂರು ಬಂಡ) ಗ್ರಾಮದಲ್ಲಿ ನಿರ್ಮಿಸಿದ ವಕುಲಮಾತೆ ಆಲಯದಲ್ಲಿ ನಡೆದ ಮಹಾಸಂಪ್ರೋಕ್ಷಣೆಯ ದೃಶ್ಯಗಳು. ಈ ಕಾರ್ಯಕ್ರಮದಲ್ಲಿ ಆಂಧ್ರಪ್ರದೇಶದ ರಾಜ್ಯ ಮುಖ್ಯಮಂತ್ರಿ ಶ್ರೀ ಗೌ॥ ವೈ ಎಸ್. ಜಗನ್‌ಮೋಹನ್‌ರೆಡ್ಡಿ ಯವರು ರಾಷ್ಟ್ರ ಮಂತ್ರಿ ಶ್ರೀ ಪೆದ್ದಿರೆಡ್ಡಿ ರಾಮಚಂದ್ರಾ ರೆಡ್ಡಿ ಯವರು, ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ, ಐ.ಡಿ.ಇ.ಎಸ್. ತಿ.ತಿ.ದೇ. ಸಂಯುಕ್ತ ಕಾರ್ಯನಿರ್ವಹಣಾಧಿಕಾರಿಗಳು ಶ್ರೀ ವಿ. ವೀರಬ್ರಹ್ಮ ಐ.ಎ.ಎಸ್., ಶ್ರೀಮತಿ. ಎಸ್. ಭಾರ್ಗವಿ ಐ.ಎ.ಎಸ್., ಮತ್ತು ಇನ್ನಿತರ ಉನ್ನತಾಧಿಕಾರಿಗಳು ಪಾಲ್ಗೊಂಡರು.**

















# ಭಗವದ್ಗೀತೆ

ಅಧರ್ಮಾಭಿಭವಾತ್ಕೃಷ್ಣ ಪ್ರದುಷ್ಯಂತಿ ಕುಲಸ್ತ್ರಿಯಃ
ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣಸಂಕರಃ॥

(ಅಧ್ಯಾಯ - 1, ಶ್ಲೋಕ -40)

ಕೃಷ್ಣ, ಅಧರ್ಮದ ಆಕ್ರಮಣದಿಂದ ಕುಲೀನ ಹೆಂಗಸರು ಕೆಡುವರು, ಹೆಂಗಸರು ಕೆಟ್ಟರೆ ಸಮಾಜ ಬಣ್ಣಗೆಡುತ್ತದೆ.

ಕೃಷ್ಣ ಕೃಷ್ಣ ಗೋವಿಂದ ಕೃಷ್ಣ
ಗೋವಿಂದ ಗೋವಿಂದ ಗೋಪಾಲಕೃಷ್ಣ


ರಾಜಗೋಪಾಲ ರಮಣೀಯ ವೇಷ
ರಾಧಾವಲ್ಲಭ ಗೋಪಾಲ ಕೃಷ್ಣ
ಕಮಲಾವಲ್ಲಭ ಕಮಲಾಯತಾಕ್ಷ
ಕಂಸಮರ್ದನ ಗೋಪಾಲ ಕೃಷ್ಣ

ಗಜರಾಜ ರಕ್ಷಕ ಗಂಭೀರ ಹೃದಯ
ಗತಿಜಿತ ಗಜರಾಜ ಗೋಪಾಲಕೃಷ್ಣ
ಶ್ರೀಕೃಷ್ಣ ಮಾಂ ಪಾಹಿ ಕೇಶವಾನಂತ
ಶ್ರೀ ರುಕ್ಮಿಣೀನಾಥ ಗೋಪಾಲ ಕೃಷ್ಣ

ಭವ್ಯ ಗುಣಾಲಯ ಭವ ದುಃಖಹರ
ಭದ್ರಾದ್ರಿ ವಾಸ ಗೋಪಾಲಕೃಷ್ಣ
ಕೃಷ್ಣಹರೇ ಮುಗ್ಧ ಕೃಷ್ಣಹರೇ
ಬಾಲಕೃಷ್ಣ ಹರೇ ರಾಧಾ ಕೃಷ್ಣ ಹರೇ



# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

ತ್ರಿವಿಧ ಚಿದಚಿತ್ಸತ್ತಾಸ್ಥೇಮ ಪ್ರವೃತ್ತಿ ನಿಯಾಮಿಕಾ ವೃಷಗಿರಿವಿಭೋರಿಚ್ಛಾ ಸಾತ್ವಂ ಪರೈರಪರಾಹತಾ ।
ಕೃಪಣಭರಭೃತ್ ಕಿಂಕುರ್ವಾಣ ಪ್ರಭೂತಗುಣಾಂತರಾ ವಹಸಿ ಕರುಣೇ ವೈಚಕ್ಷಣ್ಯಂ ಮದೀಕ್ಷಣಸಾಹಸೇ ॥೭೧॥

ಹಿಂದಿನ ದಶಕದಲ್ಲಿ ಪ್ರಪನ್ನನ ವಿಷಯದಲ್ಲಿ ದಯಾಪ್ರವಾಹದಿಂದ ಉಂಟಾಗುವ ಅನುಕೂಲಗಳು ವರ್ಣಿಸಲ್ಪಟ್ಟವು. ಈ ದಶಕದಲ್ಲಿ ಪ್ರಪನ್ನನಿಗೆ ಪ್ರಪತ್ತಿ ಮಾಡುವುದಕ್ಕೆ ಮೊದಲೂ ಪ್ರಪತ್ತಿ ಮಾಡಿದ ಮೇಲೆ ಇಲ್ಲಿರುವವರೆಗೂ ಮತ್ತು ತದುತ್ತರಕಾಲದಲ್ಲಿಯೂ, ಮೋಕ್ಷವನ್ನು ಬಯಸದೆ ಇತರ ಫಲಗಳನ್ನು ಬಯಸುವವರ ವಿಷಯದಲ್ಲಿಯೂ ಮೋಕ್ಷಾರ್ಥವಾಗಿಯೇ ಭಕ್ತಿ ಯೋಗವೇ ಮೊದಲಾದವನ್ನು ಮಾಡುವವರ ವಿಷಯದಲ್ಲಿಯೂ ಈ ದಯಾದೇವಿಯಿಂದ ಆಗುವ ಅನುಕೂಲಗಳು ವರ್ಣಿಸಲ್ಪಡುವುವು. ಇದಕ್ಕೆ ಅನುಗುಣವಾಗಿ ಮೊದಲು ದಯಾದೇವಿಯ ಸ್ವರೂಪವು ಈ ದಶಕಾರಂಭದಲ್ಲಿ ನಿರೂಪಿಸಲ್ಪಡುವುದು ಆದ್ದರಿಂದ, ಸರ್ವಲೋಕಗಳೂ ದಯೆಯನ್ನೇ ಅವಲಂಭಿಸಿವೆಯೆಂದು ಹೇಳಬಹುದಾದುದರಿಂದಲೇ ಪ್ರಪನ್ನನು ತನ್ನ ರಕ್ಷಣೆಯು ಸಿದ್ಧವಾದುದೆಂದು ತಿಳಿದು ನಿರ್ಭಯನಾಗಿರಬಹುದೆಂಬೂದು ವ್ಯಕ್ತವಾಗುತ್ತದೆ.

ಹಿಂದಿನ ಪದ್ಯದಲ್ಲಿ ಪ್ರಪನ್ನನ ವಿಷಯದಲ್ಲಿ ದಯೆಯು ಎದುರುಗೊಳ್ಳುವುದನ್ನು ನೋಡಿ ಲೋಕವು ಆಶ್ಚರ್ಯಗೊಳ್ಳುವುದೆಂದು ತಿಳಿಸಿದರು. ಈ ಪದ್ಯದಲ್ಲಿ ಅದಕ್ಕಿಂತಲೂ ಆಶ್ಚರ್ಯಕರವಾದ ಸಾಹಸಕಾರ್ಯದಲ್ಲಿ ದಯಾದೇವಿಯು ತೊಡಗಿರುವಳೆಂದು ವರ್ಣಿಸುತ್ತಾರೆ.

ಪರರ ದುಃಖವನ್ನು ಹೋಗಲಾಡಿಸಬೇಕೆಂಬ (ಸಮರ್ಥನಾದವನ) ಇಚ್ಛೆಯೇ ದಯೆ. ಇದು ಪರರ ಹಿತವನ್ನು ಬಯಸುವುದರಲ್ಲಿಯೇ ಪರ್ಯವಸಾನ ಹೊಂದುವುದೆಂಬುದು ನಮ್ಮ ಸಿದ್ದಾಂತ. ಇಂತಹ ಇಚ್ಛೆಯೇ ಸಂಸಾರಿಗಳು,ಮುಕ್ತರು,ಪಿತೃರೆಂಬ ಮೂರು ವಿಧವಾದ ಚೇತನರ, ಪ್ರಕೃತಿ,ಕಾಲ,ಶುದ್ಧಸತ್ವವೆಂಬ ಮೂರು ವಿಧವಾದ ಅಚೇತನಗಳ ಸ್ವರೂಪ-ಸ್ಥಿತಿ-ಪ್ರವೃತ್ತಿಗಳ ನಿಯಾಮಿಕೆಯಾಗಿ ಇರುವುದು. ಅಂದರೆ ಪ್ರಂಪಚದಲ್ಲಿರುವ ಸಮಸ್ತ ಚೇತನಾಚೇತನವಸ್ತುಗಳ ಸರ್ವವಿಧವಾದ ವ್ಯವಹಾರಗಳೂ ಭಗವಂತನ ದಯೆಯಿಂದಲೇ ನಡೆಯುತಕ್ಕದ್ದೆಂದು ಭಾವವು. ಇಂತಹ ಭಗವದಿಚ್ಛೆಯನ್ನು ಯಾರೂ ತಡೆಯಲಾರರು. ಅವನು ಯಾರನ್ನಾದರೂ ರಕ್ಷಿಸಬೇಕೆಂದು ಇಚ್ಛಿಸಿದರೆ ಅದನ್ನು ತಡೆಯುವರು ಯಾರೂ ಇಲ್ಲ. ಅಲ್ಲದೆ ಈ ದಯೆಯು, ಯಾರಾದರೂ ತನ್ನಲ್ಲಿ ಶರಣಾಗತರಾದರೆ ಅವನ ಸಮಸ್ತ ಭಾರವನ್ನೂ ವಹಿಸಲು ಸಿದ್ಧವಾಗಿರುವಳು. ಈ ದಯೆಗೆ ಸಹಾಯ ಮಾಡಲು (ಭಗವಂತನ) ಜ್ಞಾನ, ಬಲ, ಐಶ್ವರ್ಯವೇ ಮೊದಲಾದ ಗುಣಗಳು ಸರ್ವದಾ ಸಿದ್ಧವಾಗಿರುವುವು. ಇಂತಹ ವೈಭವವುಳ್ಳ ದಯಾದೇವಿಯು ಅಪರಾಧ ಚಕ್ರವರ್ತಿಯೆನಿಸಿಕೊಂಡಿರುವ ಮಹಾಪರಾಧಿಯೂ ತನ್ನ ಪಾಪದಿಂದ ಸಮಸ್ತ ಲೋಕಗಳಲ್ಲಿರುವ ಪುಣ್ಯಗಳನ್ನೂ, ಭಸ್ಮ ಮಾಡುವಂತಹ ಸಾಮರ್ಥ್ಯವುಳ್ಳವಳೂ ಆದ ನನ್ನನ್ನೂ ಕಟಾಕ್ಷಿಸುವುದೆಂಬ ಅತ್ಯಂತ ಆಶ್ಚರ್ಯಕರವೇ ಸರಿ ಯಾವುದೊಂದು ವಿಧವಾದ ದೋಷವೂ ಇಲ್ಲದ ದಯಾದೇವಿಯು ನನ್ನನ್ನು ಕಟಾಕ್ಷಿಸಲು ತೊಡಗಿದಾಗ ಅತ್ಯಂತ ದೋಷಿಯಾದ ನನ್ನ ಸಂಬಂಧದಿಂದ ಎಲ್ಲಿ ಅವಳ ಸರ್ವ ನಾಶವಾಗುವುದೋ ಎಂಬ ಪರಿಸ್ಥಿತಿಯು ತನ್ನದೆಂದು ಆಚಾರ್ಯರು ನೈಚ್ಯಾನುಸಂಧಾನ ಮಾಡಿರುತ್ತಾರೆ. ಇದರಿಂದ, ನನ್ನನ್ನು ಕಟಾಕ್ಷಿಸುವುದೆಂಬುದು ನಿನ್ನನ್ನು ಬಿಟ್ಟರೆ ಮತ್ತೆ ಯಾರಿಂದಲೂ ಸಾಧ್ಯವಿಲ್ಲವೆಂಬುದೇ ಇದರ ತಾತ್ಪರ್ಯ. ಅಲ್ಲದೆ, ಈ ಪದ್ಯದಲ್ಲಿ ಮಾಡಿರುವ ನೈಚ್ಯಾನುಸಂಧಾನವು ನಮ್ಮಂಥವರು ಅನುಷ್ಠಿಸಲು ಮಾರ್ಗಪ್ರದರ್ಶಕವಾದುದೆಂದು ಸ್ಪಷ್ಟವಾಗುತ್ತದೆ. ಹಿಂದೆ ತಿಳಿಸಿದಂತೆ, ದಯೆಯ ಸ್ವರೂಪವೂ (ಇಚ್ಛಾ) ಈ ಪದ್ಯದಿಂದ ತಿಳಿಸದಂತಾಯಿತು.



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ


**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ, ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ,.(ಎಫ್.ಎ.ಸಿ.)
ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು, ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ-ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360



ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸ ಪತ್ರಿಕೆ

ಶ್ರೀ ಶುಭಕೃತ್ ನಾಮ ಸಂವತ್ಸರ ಶ್ರಾವಣ - ಭಾದ್ರಪದ ಮಾಸ ಸಂಚಿಕೆ

ಸಂಪುಟ : 02 ಆಗಸ್ಟ್ - 2022 ಸಂಚಿಕೆ : 01


## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ಭಾದ್ರಪದ ಮಾಸದ ಶುಕ್ಲಪಕ್ಷ | -ಶ್ರೀಮತಿ ಗಿರಿಜಾ ಎಸ್. ದೇಶಪಾಂಡೆ | 7 |
| ಲಕ್ಷ್ಮೀದೇವಿಯ ಸ್ವರೂಪ | - ಡಾ॥ ಎ. ಕುಮುದ | 8 |
| ಶ್ರೀ ಕೃಷ್ಣನ ಶಂಖ ಪಾಂಚಜನ್ಯ | - ಹನುಮಂತ ಮ. ದೇಶಕುಲಕರ್ಣಿ | 10 |
| ಸೌತಡ್ಕ ಶ್ರೀ ಮಹಾಗಣಪತಿ | -ಶ್ರೀಮತಿ. ಮಾಲಾ ಪ್ರಸಾದ್ | 12 |
| ಶ್ರೀ ಹರಿಕಥಾಮೃತ ಸಾರದಲ್ಲಿ ನಿರೂಪಿತವಾಗಿರುವ ಉಪಸನಾ ಕ್ರಮ | - ಡಾ॥ ರಾಮಚಂದ್ರ ದಾಸ್ ಸಿ.ಜೆ. | 14 |
| ಶ್ರೀಪ್ರಸನ್ನವೆಂಕಟದಾಸಾರ್ಯವಿರಚಿತ "ಸಲಹುವೆಂಕಟಾರಮಣ ದಯಾಂಬುಧಿ" | - ಡಾ॥ ಸುಭಾಸ ಕಾಖಂಡಕಿ | 16 |
| ಹರಿಕಥಾಮೃತ ಸಾರ ಮಹಿಮೆ ಬಲು ಅಪಾರ | -ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ | 18 |
| ನಾಡಿಗೆ ದೊಡ್ಡ ಹಬ್ಬ ನಾಗರ ಪಂಚಮಿ | - ಕೃಪೆ | 20 |
| ನೊಣವಿನಕೆರೆಯ ಸುಂದರ ದೇವಾಲಯಗಳು | - ಕೆಂಗೇರಿ ಚಕ್ರಪಾಣಿ | 22 |
| ಶ್ರೀವೆಂಕಟೇಶ್ವರ ಆಲಯ | - ದಿ॥ ಬಿ.ಎನ್.ಶ್ರೀನಿವಾಸನ್ | 25 |
| ಶ್ರೀ ಲಕ್ಷ್ಮೀ ಕ್ಷೇತ್ರ ಗೊರವನಹಳ್ಳಿ | - ಡಾ॥ ಸುಮನ ಬದರಿನಾಥ್ | 31 |
| ಪ್ರಾತಃ ಸಂಕಲ್ಪ ಗದ್ಯಂ | -ಶ್ರೀಮತಿ. ಆರ್. ಗೀತ | 34 |
| ಸಂಸ್ಕೃತ ಕಲಿಯೋಣ | - ಮಹಾಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ | 37 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ. ಪೂರ್ಣ ಪ್ರಸಾದ್ ಸಿದ್ಧಾಂತಿ | 38 |
| ಹರಿದಾಸ ಸಾಹಿತ್ಯ ಸಾಕಾರಮೂರ್ತಿ ಹೆಳವನಕಟ್ಟಿ ಗಿರಿಯಮ್ಮ | -ಶ್ರೀಧರ ರಾಯಸಂ | 39 |
| 108 ವೈಷ್ಣವ ದಿವ್ಯಕ್ಷೇತ್ರಗಳು - ತಿರುವೆಳ್ಳರೈ (ಶ್ವೇತಗಿರಿ) | -ಶ್ರೀಮತಿ. ಸೂರ್ಯವಂಶಿ | 40 |
| ತಿರುಮಲೆ ಕಾಲಾಮಾನಾಚರಣೆಗಳು | -ಶ್ರೀಮತಿ | 44 |
| ಆಳ್ವಾರುಗಳು ಕಂಡ ತಿರುವೇಂಗಡ | -ಎಂ.ಆರ್.ನರಸಿಂಹನ್ | 46 |
| ರಸಪ್ರಶ್ನೆಗಳು | - | 50 |
| ನೀತಿ ಕಥೆ - ಬೆಳದ ಬೆಳೆ ಚಿನ್ನಕ್ಕೂ ಮಿಗಿಲು | -ಡಾ॥ ಪ್ರದೀಪ್ ಕುಮಾರ್ ಹೆಬ್ರಿ | 51 |
| ಚಿತ್ರಕಥೆ - ಚೌತಿಯಂದು ಚಂದ್ರನನ್ನು ನೋಡಿದರೆ | - ಟಿ. ಶಿವಾಜಿ | 52 |


ಮುಖಚಿತ್ರ - ನವನೀತ ಕೃಷ್ಣ, ತಿರುಮಲೆ
ಹಿಂಬದಿಚಿತ್ರ - ಶ್ರೀ ಮಹಾಲಕ್ಷ್ಮೀ ಅಮ್ಮನವರು



24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org


ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ವೀಕ್ಷಿಸಬಹುದು.

| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

ಸಂಪಾದಕೀಯ



# ಹಬ್ಬ ಹರಿದಿನಗಳ ಮಹಾಪೂರ



ಶ್ರಾವಣಮಾಸ ಬಂತೆಂದರೆ ಎಲ್ಲೆಡೆ ಎಲ್ಲಿಲ್ಲದ ಸಂತೋಷ ಸಂಭ್ರಮಗಳ ಮಹಾಪೂರವೇ ಹರಿಯುತ್ತದೆ. ಹಿಂದೂ ಸಂಪ್ರದಾಯದ ಪ್ರಕಾರ ಶ್ರಾವಣ ಮಾಸವೆಂದರೆ ಒಂದು ತಿಂಗಳ ಕಾಲ ಸತತವಾಗಿ ಯಾವುದಾದರೊಂದು ಹಬ್ಬಗಳನ್ನು ಆಚರಿಸುವ ಪ್ರತೀತಿ. ನಮ್ಮ ಹಿರಿಯರಿಂದಲೂ ಹರಿದು ಬಂದಿದೆ. ಸಮಸ್ತ ಸೌಭಾಗ್ಯಗಳಿಗೂ ಮೂಲಮಹಾಲಕ್ಷ್ಮಿ. ಆಕೆಯ ಕೃಪೆಯಿಂದಲೆ ನಮಗೆ ಆಕರ್ಷಣೀಯವಾದ ರೂಪ ಲಭಿಸುತ್ತದೆ. ಆಕೆಯ ಕೃಪೆಯಿಂದಲೇ ನಾವು ವಿದ್ಯೆ,ಕುಲ,ವಿಖ್ಯಾತಿ ಮುಂತಾದ ಸಂಪತ್ತುಗಳನ್ನು ಹೊಂದುತ್ತೇವೆ.ಲಕ್ಷ್ಮೀಕಟಾಕ್ಷೆ ಮಾನವರೆಲ್ಲರಿಗೂ ಅವಶ್ಯಕ. ಆ ದೇವಿಯ ದಯೆಯಿದ್ದಲ್ಲಿಯೇ ಸರ್ವಾಭಿವೃದ್ಧಿ ಸರ್ವ ಸಂಪದಗಳು ಆಕೆಯ ಅನುಗ್ರಹಾಕಾಂಕ್ಷಿಗಳು ಆಕೆಯ ಪ್ರಾಣನಾಥನಾದ ಶ್ರೀಮಾನ್ ಮಹಾವಿಷ್ಣುವಿನ ಜನ್ಮ ನಕ್ಷತ್ರವಾದ ಶ್ರವಣ ನಕ್ಷತ್ರದ ಹೆಸರಿನಿಂದುದಿಸಿದ ಶ್ರಾವಣಮಾಸದಲ್ಲಿ ವಿಷ್ಣು ವಲ್ಲಭನನ್ನು ಭಕ್ತಿ ಶ್ರದ್ಧೆಗಳಿಂದ ಒಲಿಸಿ ಆಕೆಯ ಅನುಗ್ರಹಕ್ಕೆ ಪಾತ್ರರಾಗಿ ಧನ,ಕನಕ,ವಸ್ತು ವಾಹನಾದಿಗಳನ್ನು ಹೊಂದಬೇಕೆಂದು ಕೋರುತ್ತಾ ಈ ಮಾಸದಲ್ಲಿ ಆಚರಿಸಬೇಕಾದ ಪೂಜಾ ವಿಧಿಗಳನ್ನು ವಿವರಿಸುತ್ತಿದ್ದೇವೆ.

ಸಕಲ ಸೌಭಾಗ್ಯಗಳಿಗೂ,ಸಿರಿಸಂಪತ್ತುಗಳಿಗೂ,ಶುಭಕಾರ್ಯಗಳಿಗೂ ಆವಾಸ ಈ ಶ್ರಾವಣಮಾಸ ಹಾಗಾಗಿ ಸಂಪ್ರದಾಯಗಳನ್ನು ಪಾಲಿಸುವ ಪ್ರತಿ ಮನೆಯ ಮುಂದೆ ನೀರುಹಾಕಿ, ಸಾರಿಸಿ,ರಂಗೋಲಿ ಬಿಡಿಸಿ,ಮುಂಬಾಗಿಲಿಗೆ ಮಾವಿನ ತೋರಣ, ಹೊಸ್ತಿಲಿಗೆ ಅರಿಸಿನ-ಕುಂಕುಮಗಳಿಂದ ಶೋಭಿತವಾದ ಮನೆಗೆ ಘಲ್ಲೆನುವ ಒಳಕು ವಯ್ಯಾರದಿಂದ ಮಹಾಲಕ್ಷ್ಮಿ ಅಡಿಯಿಡುತ್ತಾಳೆ.ತಾಯಿಯ ಪಾದ ಸ್ಪರ್ಶದಿಂದ ಶಿಲಾಗೃಹ ಕನಕಗೃಹವಾಗಿ ಮಾರ್ಪಡುತ್ತದೆ. ಇನ್ನು ಆ ಮನೆಯಲ್ಲೆಂದಿಗೂ ಸಿರಿಸಂಪದಗಳಿಗೆ ಚ್ಯುತಿಯಿರದು.

ಈ ಮಾಸದಲ್ಲಿ ಬರುವ ಸೋಮ, ಮಂಗಳ, ಶುಕ್ರ, ಶನಿವಾರಗಳು ಎಷ್ಟೋ ಪವಿತ್ರವಾದವು. ಮಂಗಳಗೌರಿವ್ರತ, ನಾಗಪಂಚಮಿ, ವರಹಾಜಯಂತಿ, ಶ್ರೀವರಲಕ್ಷ್ಮಿ ವ್ರತ, ರಕ್ಷಾಬಂಧನ, ಅಮಾವಾಸ್ಯೆಯಂಥಹ ಹಬ್ಬಗಳು ಈ ಮಾಸದಲ್ಲೇ ಬರುತ್ತದೆ. ಮಂಗಳಕರೆಯಾದ ತಾಯಿ ಮಂಗಳಗೌರಿ. ಮದುವೆಯಾಗದ ಕನ್ಯೆಯರು ಗೌರಿಯನ್ನು ಪೂಜಿಸಿದರೆ ಒಳ್ಳೆಯ ವರ ದೊರಕುತ್ತಾನೆಂದೂ, ಮದುವೆಯಾದವರು ಈ ವ್ರತವನ್ನಾಚರಿಸಿದರೆ ಸೌಭಾಗ್ಯವುಂಟಾಗುವುದೆಂದೂ ಪ್ರತೀತಿ. ಕೋರಿದ ಇಷ್ಟಾರ್ಥಗಳು ನೆರವೇರುತ್ತವೆಂದು ನಂಬಿಕೆ, ಆದ್ದರಿಂದಲೇ ನೂತನ ವಧುಗಳು ಸೌಭಾಗ್ಯ ಸಿದ್ಧಿಗಾಗಿ ಈ ಮಾಸದ ಪ್ರತಿ ಮಂಗಳವಾರದಂದು ಈ ವ್ರತವನ್ನಾಚರಿಸುವುದು ಸಂಪ್ರದಾಯ. ಅರಿಸಿನ-ಕಂಕುಮ, ಮಂಗಳದ್ರವ್ಯ ಆಕಳ ತುಪ್ಪದಿಂದ ಬೆಳಗುವ ಜ್ಯೋತಿಯ ರೂಪದಲ್ಲಿ ಮಂಗಳಗೌರಿ ನೆಲೆಸಿರುತ್ತಾಳೆ. ಅದಕ್ಕೆಂದೇ ಈ ಮಾಸದಲ್ಲಿ ಮನೆಗೆ ಬರುವ ಯಾವುದೇ ಮುತ್ತೈದೆಯರಿಗೆ ಮಂಗಳ ದ್ರವ್ಯಗಳನ್ನು ಕೊಟ್ಟು ಅವರ ಆಶೀರ್ವಾದ ಪಡೆಯುವುದು ಶುಭಕರ.

ಹಿಂದೂಗಳ ಪ್ರಮುಖ ಹಬ್ಬಗಳಲ್ಲಿ ನಾಗಪಂಚಮಿಯೂ ಒಂದು. ಮದುವೆಯಾಗದ ಯುವತಿಯರು ಗರ್ಭಧಾರಣೆಯಲ್ಲಿ ಆತಂಕ ಎದುರಿಸುತ್ತಿರುವ ಮಹಿಳೆಯರು. ಕುಜದೋಷದಿಂದ ವಿವಾಹದಲ್ಲಿ ವಿಳಂಬವುಂಟಾಗುತ್ತಿರುವವರು. ಈ ಹಬ್ಬವನ್ನಾಚರಿಸಿದಲ್ಲಿ ಪರಿಹಾರಗಳು ಕೈಗೂಡುತ್ತವೆ. ಈ ದಿನದಂದು ಗೋಡೆಗಳ ಮೇಲೆ ಅರಿಸಿನ-ಕುಂಕುಮಗಳಿಂದ ನಾಗಮೂರ್ತಿಯನ್ನು ಬರೆದು ಇಲ್ಲವೇ ಮಣ್ಣಿನಿಂದ ಮಾಡಿದ ಸರ್ಪವಿಗ್ರಹಗಳನ್ನಾಗಲೀ ಪೂಜಿಸಬಹುದು. ಪಂಚಮಿಯಿಂದ ಈ ಸರ್ಪಪೂಜೆ ಮಾಡಿದವರಿಗೆ ಸರ್ಪಭಯ ಇರುವುದಿಲ್ಲವೆಂದು ನಂಬಿಕೆ. ಶ್ರಾವಣ ಶುದ್ಧ ಏಕಾದಶಿಗೆ ಪುತ್ರದಾಏಕಾದಶಿಯೆಂದು ಹೆಸರು. ಪುರಾತನ ರಾಜರು ಪುತ್ರಪ್ರಾಪ್ತಿಗಾಗಿ ಈ ವ್ರತವನ್ನಾಚರಿಸಿ ಫಲವನ್ನು ಹೊಂದಿದ್ದಾರೆ. ಹಾಗಾಗಿ ಈ ದಿನ ಶ್ರದ್ಧೆಯಿಂದ ವಿಷ್ಣುಪೂಜೆ ಮಾಡಿದಲ್ಲಿ ಸಂತಾನ ಪ್ರಾಪ್ತಿ ಖಚಿತವೆಂದು ಪುರಾಣ ಕಥೆ. ದಾಮೋದರ ದ್ವಾದಶಿಯೆಂದು ಹೆಸರುವಾಸಿಯಾಗಿರುವ ಶ್ರಾವಣ ಶುದ್ಧ ದ್ವಾದಶಿಯ ದಿನ ವಿಷ್ಣು ಪೂಜೆ, ವಿಷ್ಣು ಸಹಸ್ರನಾಮ ಪಾರಾಯಣ ಮಾಡಿದಲ್ಲಿ ಉನ್ನತಿ. ಶ್ರೀಮನ್ನಾರಾಯಣನು ವರಾಹರೂಪದಿಂದ ಅವತರಿಸಿದ ಶ್ರಾವಣ ಶುಕ್ಲ ತ್ರಯೋದಶಿಯಂದು ವರಾಹಸ್ವಾಮಿಯನ್ನು ಪೂಜಿಸಿ, ಆರ್ಚಿಸಿದಲ್ಲಿ ವಿಶೇಷ ಫಲಪ್ರಾಪ್ತಿಯಾಗುವುದು.

ದೇವಿಶಕ್ತಿಯನ್ನು ಸಂಪೂರ್ಣವಾಗಿ ಹೊಂದಿದ ಶ್ರಾವಣ ಹುಣ್ಣಿಮೆಯಂದು ರಕ್ಷಾಬಂಧನ, ದೋರ ಬಂಧನ ಜರುಗಿಸಲಾಗುತ್ತದೆ. ಆದಿ ಶಕ್ತಿಯನ್ನು ಗೌರವಿಸುವ ಮನೆಯಲ್ಲಿ ನಾದಿನಿ/ಸೋದರಿಯರ ಕೈಯಲ್ಲಿ ರಕ್ಷಾಬಂಧನವನ್ನು ಕಟ್ಟಿಸಿಕೊಳ್ಳುವ ಪ್ರತಿ ಸೋದರನಿಗೂ ದೇವತೆಗಳು ಸ್ವತಃ ರಕ್ಷಣೆಗೆ ನಿಂತು, ಬರುವ ಅನಿಷ್ಟಗಳನ್ನು ತೊಲಗಿಸಿ ಬೆಂಗಾವಲಾಗಿ ನಿಲ್ಲುತ್ತಾರೆಂದು ವಿಶ್ವಾಸ. ಹಯಗ್ರೀವ ಜಯಂತಿ ದಿನ ಸರ್ವವಿದ್ಯೆಗಳಿಗೂ ಪ್ರತಿಪಾದ್ಯನಾದ ಹಯಗ್ರೀವ ಮೂರ್ತಿಯನ್ನು ಆರಾಧಿಸುವುದರಿಂದ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ ವೃದ್ಧಿಯಾಗುತ್ತದೆ. ಶ್ರೀಕೃಷ್ಣ ಪರಮಾತ್ಮ ಆವಿರ್ಭವಿಸಿದ ದಿವ್ಯತಿಥಿಯೇ ಶ್ರೀಕೃಷ್ಣಾಷ್ಟಮಿ. ಈ ದಿನದಂದು ಕೃಷ್ಣನನ್ನು ಅರ್ಚಿಸಿದಲ್ಲಿ ಸಕಲ ಪಾಪ ಪರಿಹಾರವು ಧರ್ಮಾರ್ಥಕಾಮಮೋಕ್ಷ ಪ್ರಾಪ್ತಿ ಕಾರ್ಯಜಯ ಒದಗಿ ಬರುತ್ತದೆ.

ನಾವು ಈ ಹಬ್ಬಹರಿದಿನಗಳ ಮೂಲಕ ಬಂಧು-ಮಿತ್ರರೊಂದಿಗೆ ಒಂದಾಗಿ ಹಬ್ಬಗಳನ್ನು ಸಂಭ್ರಮದಿಂದ ಆಚರಿಸಿ,ಎಲ್ಲರ ಮನಸ್ಸನ್ನು ಒಗ್ಗೂಡಿಸಿ ಆ ಒಗ್ಗಟ್ಟಿನ ಸಹಾಯದಿಂದ ಶತ್ರುಗಳನ್ನು ಬಗ್ಗುಬಡಿಯಬಲ್ಲವೆಂಬ ಸತ್ಯವನ್ನು ಸಾಬೀತು ಪಡಿಸುತ್ತಾ, ಇಂದಿನ ಸಮಾಜಕ್ಕೆ ಬಹು ಮುಖ್ಯವಾಗಿ ಅಗತ್ಯವಾಗಿರುವ ಬಗ್ಗಟ್ಟು, ಸಮಾನತೆ,ಸೌಹಾರ್ದತೆ, ಮಾನವತಾ ಸುಗಂಧವನ್ನು ಎಲ್ಲೆಡೆ ಹರಡುತ್ತಾ, ಮಾನವಸಂಬಂಧಗಳನ್ನು ಬಲಪಡಿಸಿಕೊಳ್ಳೋಣ. ತನ್ಮೂಲಕ ಸಪ್ತಗಿರೀಶನಲ್ಲಿ ಎಲ್ಲರಿಗೂ ಶುಭವನ್ನೀಡೆಂದು ಪ್ರಾರ್ಥಿಸೋಣ..........

# ಭಾದ್ರಪದ ಮಾಸದ ಶುಕ್ಲಪಕ್ಷ

-ಶ್ರೀಮತಿ. ಗಿರಿಜಾ. ಎಸ್. ದೇಶಪಾಂಡೆ

ಭಾದ್ರಪದ ಮಾಸ ೧೨ ಮಾಸಗಳಲ್ಲಿ ೬ ನೇಯ ಮಾಸವಾಗಿದೆ. ಶ್ರಾವಣ ಮಾಸ ಬಂದಾಗ ಜಡತ್ವ ಮಾಯವಾಗಿ ಉಲ್ಲಾಸ ಮನೆ ಮಾಡುವಂತೆ ಭಾದ್ರಪದ ಮಾಸದಲ್ಲಿ ವಿಘ್ನವಿನಾಶಕನ ಆಗಮನದಿಂದ ನಮ್ಮ ವಿಘ್ನಗಳೆಲ್ಲ ನಿವಾರಣೆಯಾಗುತ್ತವೆ. ಈ ತಿಂಗಳ ಹುಣ್ಣಿಮೆಯಂದು ಪೂರ್ವಭಾದ್ರಪದ, ಉತ್ತರಭಾದ್ರಪದ ನಕ್ಷತ್ರ ಬರುವುದರಿಂದ ಈ ಮಾಸಕ್ಕೆ ಭಾದ್ರಪದ ಎಂದು ಕರೆಯುತ್ತಾರೆ. ವೇದದಲ್ಲಿ ಈ ಮಾಸಕ್ಕೆ 'ಈಶ' ಎಂದು ಕರೆದಿದ್ದಾರೆ. ಒಂದೊಂದು ಮಾಸಕ್ಕೆ ಒಂದೊಂದು ದೇವರಿರುವಂತೆ ಭಾದ್ರಪದ ಮಾಸದ ಅಧಿದೇವತೆ ಋಷಿಕೇಶ, ಎಂದರೆ ಸಾಕ್ಷಾತ್ ಶ್ರೀಮನ್ನಾರಾಯಣ. ಈ ಮಾಸ ದೇವತಾ ಕಾರ್ಯಗಳಿಗೆ ಮತ್ತು ಪಿತೃದೇವತೆಗಳಿಗೆ ಸಮರ್ಪಿತವಾದ ಅರ್ಥಪೂರ್ಣವಾದ ಮಾಸವಾಗಿದೆ. ಈ ಮಾಸದಲ್ಲಿ ಬರುವ ಪ್ರತೀ ಹಬ್ಬಗಳಿಗೆ ವಿಶೇಷ ಮಹತ್ವವಿದೆ. ಇನ್ನು ಶುಕ್ಲಪಕ್ಷ ಕೃಷ್ಣಪಕ್ಷದ ಮಹತ್ವ ತಿಳಿಯೋಣ. ಪ್ರತೀ ಮಾಸವನ್ನೂ ಎರಡು ಭಾಗವಾಗಿ ವಿಂಗಡಿಸಿದೆ. ಅಮಾವಾಸ್ಯೆಯ ಮರುದಿನದಿಂದ ಹುಣ್ಣಿಮೆವರೆಗಿನ ಅವಧಿಯನ್ನು ಶುಕ್ಲಪಕ್ಷ ಎಂದು ಕರೆದರೆ ಹುಣ್ಣಿಮೆ ದಿನದಿಂದ ಅಮಾವಾಸ್ಯೆವರೆಗಿನ ಕಾಲವನ್ನು ಕೃಷ್ಣಪಕ್ಷವೆಂದು ಕರೆಯುತ್ತೇವೆ. ಈ ಮಾಸದ ಶುಭ ಕಾರ್ಯಗಳೆಲ್ಲ ಶುಕ್ಲ ಪಕ್ಷದಲ್ಲಿ ಬರುತ್ತದೆ. ಭಾದ್ರಪದ ಮಾಸದ ವಿಶೇಷತೆ ಈ ಮಾಸದ ತೃತೀಯ ಅಥವಾ ತದಿಗೆಯಂದು ಸ್ವರ್ಣ ಗೌರಿ ಮತ್ತು ಗೌರಿ ವ್ರತ ಬರುವುದು. ಚೌತಿಯ ದಿನ ಗಣಪತಿಯ ಹಬ್ಬ, ಪಂಚಮಿಯಂದು ಋಷಿಪಂಚಮಿ, ಅಷ್ಟಮಿಯಂದು ಜೇಷ್ಟಾಗೌರಿ, ವಿಶ್ವಕರ್ಮ ದಿನಾಚರಣೆ, ಏಕಾದಶಿಯಂದು ತಿರುಪತಿ ವೆಂಕಟಾಚಲನ ರಥೋತ್ಸವ, ದ್ವಾದಶಿಯಂದು ವಾಮನ ಜಯಂತಿ ಕ್ಷೀರವ್ರುತಾರಂಭ ಆರಂಭವಾಗುತ್ತದೆ. ಅನಂತ ಪದ್ಮನಾಭವ್ರತ ಆಚರಿಸಲಾಗುತ್ತದೆ. ಈ ಮಾಸದ ಕೃಷ್ಣಪಕ್ಷದಲ್ಲಿ ಮಹಾಲಯ ಪಕ್ಷ ೧೫ ದಿನಗಳ ಕಾಲ ಪಿತೃಕಾರ್ಯಗಳು ಪ್ರಧಾನವಾಗಿ ನಡೆಯುತ್ತದೆ. ಭಾದ್ರಪದ ಮಾಸದ ಅಮಾವಾಸ್ಯೆಯಂದು ಮಹಾಲಯ ಅಮಾವಾಸ್ಯೆ ಆಚರಿಸಲಾಗುತ್ತದೆ. ಪ್ರತಿಯೊಂದು ಹಬ್ಬಕ್ಕೂ ಒಂದೊಂದು ಹಿನ್ನೆಲೆ ಮಹತ್ವವಿದೆ. ವೈಜ್ಞಾನಿಕ ಮಹತ್ವ ಕೂಡಾ ಇದೆ. ಮನೆ ಮಂದಿಯೆಲ್ಲಾ ಸೇರಿ ಆಚರಿಸುವ ಹಬ್ಬಗಳು ಮನಸ್ಸನ್ನು ಬೆಸೆಯುವ ಶಕ್ತಿ ಇರುತ್ತದೆ.

ಸ್ವರ್ಣಗೌರಿ ಕೈಲಾಸದಿಂದ ಭೂಲೋಕಕ್ಕೆ ಬರುವ ಮಾಸ ಇದಾಗಿದೆ. ತಾಯಿ ಗೌರಿಯ ಹಿಂದೆಯೇ ಮಗ ಗಣೇಶ ಬರುತ್ತಾನೆ. ಹೆಸರೇ ಸೂಚಿಸುವಂತೆ ಸ್ವರ್ಣ ಎಂದರೆ ಬಂಗಾರ. ಬಂಗಾರದ ಬಣ್ಣದಿಂದ ಹೊಳೆಯುವ ಗೌರಿಗೆ ಷೋಡೋಪಚಾರಗಳಿಂದ ಪೂಜೆ,ಆ ಪೂಜೆಯಿಂದ ಮಾಂಗಲ್ಯಭಾಗ್ಯ, ಐಶ್ವರ್ಯಲಭಿಸುತ್ತದೆ ಎನ್ನುವುದು ನಮ್ಮಲ್ಲಿ ಬಲವಾದ ನಂಬಿಕೆಯಿದೆ. ಗೌರಿ ಗಣೇಶದ ನಂತರ ಋಷಿಪಂಚಮಿ ವ್ರತ ಎಲ್ಲ ಋಷಿಗಳನ್ನು ನೆನೆಯುವ ದಿನವೇ ಋಷಿ ಪಂಚಮಿ. ಆ ಆಚರಣೆಯಿಂದ ಸಕಲ ಪಾಪಗಳೂ ನಿವಾರಣೆಯಾಗಿ ಐಶ್ವರ್ಯ ಪ್ರಾಪ್ತಿಯಾಗುವುದು ಎಂಬ ನಂಬಿಕೆಯಿದೆ. ಶುಕ್ಲ ಪಕ್ಷದ ದ್ವಾದಶಿಯಂದು ವಾಮನಜಯಂತಿ, ವಿಷ್ಣು ವಾಮನ ರೂಪ ತಾಳಿದ್ದು ವಿಶೇಷ ದಿನವಾಗಿದೆ. ಭಾದ್ರಪದ ಮಾಸದ ಕೃಷ್ಣಪಕ್ಷವನ್ನು ಪಿತೃಪಕ್ಷ, ಮಹಾಲಯ ಪಕ್ಷವೆಂದು ಕರೆಯುತ್ತಾರೆ. ಪಿತೃಗಳನ್ನು ಉದ್ದೇಶಿಸಿ ಮಾಡುವ ದಾನ ಧರ್ಮಗಳಿಗೆ ಹೆಚ್ಚಿನ ಪ್ರಧಾನ್ಯತೆ ಈ ಮಾಸದಲ್ಲಿ ನೀಡಲಾಗುತ್ತದೆ.ಗತಿಸಿದ ಪಿತೃಗಳನ್ನು ನೆನೆಯುವ ಪವಿತ್ರ ಕಾರ್ಯವನ್ನುಶ್ರದ್ಧೆಯಿಂದ ಈ ವೇಳೆ ಆಚರಣೆ ಮಾಡುವುದರಿಂದ ಪೂರ್ವಿಕರ ಸಂಪೂರ್ಣ ಆಶೀರ್ವಾದ ನಮಗೆ ದೊರೆಯುತ್ತದೆ.

ಭಾದ್ರಪದ ಮಾಸದಲ್ಲಿ ಗೌರಿ, ಗಣೇಶರ ಪೂಜೆಯ ಫಲ, ಜೇಷ್ಟಾ ಗೌರಿಯ ವರ, ಅನಂತ ಹಬ್ಬದ ಆಚರಣೆಯ ಫಲ,ಪಿತೃ ಪಕ್ಷದ ಹಿರಿಯರ ಆಶೀರ್ವಾದ ಪಡೆದು ನೆಮ್ಮದಿಯ ಜೀವನ ಬಯಸಿ ಬಾಳೋಣ.



# ಲಕ್ಷ್ಮೀ ದೇವಿಯ ಸ್ವರೂಪ

-ಡಾ|| ಎ. ಕುಮುದ
97319 03752

'ಲಕ್ಷ್ಮೀ' ಎಂಬ ಹೆಸರು ಕೇಳಿದೊಡನೆ ಸಾಮಾನ್ಯವಾಗಿ ಮೊದಲು ಮನಸ್ಸಿಗೆ ಬರುವುದು ಹಣ, ಕಾಸು, ಒಡವೆ, ವಸ್ತು, ಸಂಪತ್ತು, ಐಶ್ವರ್ಯ ಇತ್ಯಾದಿ. ಇವಕ್ಕೆಲ್ಲಾ ಅಧಿದೇವತೆ 'ಲಕ್ಷ್ಮೀ' ಎಂಬುದು ಸಾಮಾನ್ಯ ತಿಳುವಳಿಕೆ. ಈ ಜಗತ್ತಿನ ಸೃಷ್ಟಿಗೆ ಕಾರಣರಾದ ಪ್ರಕೃತಿ ಪುರುಷರು, ಲಕ್ಷ್ಮೀ-ನಾರಾಯಣರು. ಲಕ್ಷ್ಮೀದೇವಿ ವಿಶ್ವದ ಗರ್ಭವನ್ನು ತನ್ನಲ್ಲಿ ಧರಿಸಿದ ಜಗಜ್ಜನನಿ, 'ಲಕ್ಷ್ಮೀ'.

'ಸ್ವಂ ಸ್ವಾತ್ಮಭೂತಂ ರೂಪ ಶರೀರಂ ಯಸ್ಯ'

ಅಪ್ರಾಕೃತ ದೇಹವುಳ್ಳವರು ಸ್ವರೂಪರೆನಿಸುವರು.

'ಲಕ್ಷಣಂ, ಲಕ್ಷ್ಯಮಾತ್ಮಾ ಸ್ವರೂಪಮಿತಿ ಕಥ್ಯತೆ'

ಲಕ್ಷಣ, ಲಕ್ಷ್ಯ, ಆತ್ಮಾ ಇವಕ್ಕೆ ಸ್ವರೂಪವೆಂದು ಹೆಸರು.

ಮಹಾಲಕ್ಷ್ಮಿಯ ಹೆಸರಿನ ಜೊತೆಗೆ ಪ್ರಾರಂಭದಲ್ಲಿ 'ಶ್ರೀ' ಎಂಬ ಅಕ್ಷರವನ್ನು ಸೇರಿಸಿ ಶ್ರೀಲಕ್ಷ್ಮೀ , ಶ್ರೀಮಹಾಲಕ್ಷ್ಮೀ ಎಂದು ಬಳಸಲಾಗುತ್ತದೆ. ಶ್ರೀ ಅಥವಾ ಸಿರಿ ಎಂದರೆ ಸಂಪತ್ತು, ಐಶ್ವರ್ಯ, ಈಕೆ ಐಶ್ವರ್ಯದ ಅಧಿದೇವತೆ ಎಂದು ಸೂಚಿಸಲು 'ಶ್ರೀ' ಎಂಬುದನ್ನು ಸೇರಿಸಲಾಗಿದೆ. ಶ್ರೀ ಎನ್ನುವುದು 'ಶ್ರಿಜ್' ಎಂಬ ಧಾತುವಿನಿಂದ ಒದಗಿದೆ. ಈ ಧಾತುವಿಗೆ ಆಶ್ರಯಿಸುವುದು, ಸೇವಿಸುವುದು ಎಂದು ಅರ್ಥ, ಎಲ್ಲರೂ, ಎಲ್ಲಾ ಪ್ರಾಣಿಗಳೂ ಆಶ್ರಯಿಸುವುದು ಲಕ್ಷ್ಮಿಯನ್ನೇ, ಆದ್ದರಿಂದಲೇ,



'ಯಾ ದೇವಿ ಸರ್ವಭೂತೇಷು ಲಕ್ಷ್ಮೀರೂಪೇಣ ಸಂಸ್ಥಿತಾ'
ಎಂದು ಉಲ್ಲೇಖಿಸಲಾಗಿದೆ.

ಭಗವಂತನಾದ ನಾರಾಯಣನಿಗೆ ಪ್ರಿಯಳೂ, ಅನುರೂಪಳೂ, ಆದ ಸ್ವರೂಪ, ರೂಪ, ಗುಣ, ಐಶ್ವರ್ಯ, ಶೀಲ, ಮುಂತಾದ ಅತಿಶಯವಾದಿ ಅಗಣಿತ ಕಲ್ಯಾಣಗುಣಗಳ ಸಮೂಹವುಳ್ಳವಳು ಲಕ್ಷ್ಮೀದೇವಿ. ತಾವರೆ ವನವನ್ನೇ ಮನೆ ಮಾಡಿಕೊಂಡಿರುವಳು. ವಿಷ್ಣುವನ್ನೇಂದೂ ಅಗಲಿ ಇರದವಳು. ಸ್ವಲ್ಪವೂ ದೋಷವಿಲ್ಲದವಳು. ಮಹಾಲಕ್ಷ್ಮಿಗೆ ಎರಡು ರೂಪ. ಒಂದು ಜಂಗಮರೂಪ. ಇನ್ನೊಂದು ಸ್ಥಾವರರೂಪ, ಜಂಗಮ ರೂಪ 'ಶ್ರೀ', ಸ್ಥಾವರರೂಪ 'ಭೂ'. ಶ್ರೀದೇವಿ ಚಂಚಲೆ ಭೂದೇವಿ ಅಚಲ, ಅನಂತ.

'ಹಿರಣ್ಯವರ್ಣಾಂ ಹರಿಣೀಂ ಸುವರ್ಣ ರಜತಸ್ರಜಾಂ
ಚಂದ್ರಾ ಹಿರಣ್ಮಯೀಂ ಲಕ್ಷ್ಮೀ ಜಾತವೇದೋ ಮ ಆವಹ||'

ಶ್ರೀಸೂಕ್ತದಲ್ಲಿ ವಿವರಿಸಿರುವಂತೆ ಅವಳು ಬಂಗಾರದಂತೆ ಹೊಳೆಯುವ ಮೈಬಣ್ಣವುಳ್ಳವಳು. ಜಿಂಕೆಯಂತೆ ಚೆಲುವೆ ಬಂಗಾರ ಬಳ್ಳಿಗಳ ಮಾಲೆಯನ್ನು ತೊಟ್ಟವಳು. ಚಂದ್ರನಂತೆ ಕಂಗೊಳಿಸುವಳು. ಮನಸೆಳೆಯುವ ರೂಪವುಳ್ಳವಳು. ಇಂತಹ ಲಕ್ಷ್ಮೀಯನ್ನು ನನ್ನೆಡೆಗೆ ಬರಮಾಡು. ಓ ಜಾತವೇದ ಎಂದು ಪ್ರಾರ್ಥಿಸಲಾಗಿದೆ.

ಈ ಮಂತ್ರದ ಕನ್ನಡ ಭಾವಾನುವಾದ ಹೀಗಿದೆ.

ಸ್ವರ್ಣ ಕಾಂತಿಯ ಹರಿಣರೂಪಿಣಿ
ಸ್ವರ್ಣ ರಜತಾ ಪುಷ್ಪಮಾಲೆ ಗ
ಳನ್ನು ಧರಿಸಿದ ಚಂದ್ರಕಾಂತಿಯ ಸ್ವರ್ಣಮಯವಾದ||
ಚಿನ್ಮಯಳ ಭವದೂರ ಲಕ್ಷ್ಮಿಯ
ಮುನ್ನ ಕರೆಯಿಸು ಜಾತವೇದನೆ
ಚಿನ್ನ ಧೇನುವ ತುರಗ ಸತಿಸುತ ಪುರುಷರನು ಪಡೆವೆ||

ಇದು ಅಗ್ನಿಯನ್ನು ಕುರಿತಾದ ಪ್ರಾರ್ಥನೆ. ವೈದಿಕ ಮನೋಧರ್ಮದಲ್ಲಿ ಯಾವ ದೇವತೆಯನ್ನು ಬರಮಾಡಿ

ಅಸ್ಯ ಶ್ರೀಮಹಾಲಕ್ಷ್ಮೀ ಹೃದಯ ಸ್ತೋತ್ರ
ಮಹಾ ಮಂತ್ರಸ್ಯ ಭಾರ್ಗವ ಋಷಿಃ
ಅನುಷ್ಟುಪಾದಿ ನಾನಾಛಂದಾಂಸಿ
ಆದ್ಯಾದಿ ಶ್ರೀ ಮಹಾಲಕ್ಷ್ಮೀ ದೇವತಾ, ಶ್ರೀ
ಬೀಜಂ, ಹ್ರೀಂಶಕ್ತಿಃ, ಐಂ ಕೀಲಕಮ್,
ಶ್ರೀಮಹಾಲಕ್ಷ್ಮೀಪ್ರಸಾದಸಿದ್ಧ್ಯರ್ಥೇಜಪೇ ವಿನಯೋಗಃ

ಇತಿ ಶ್ರೀಲಕ್ಷ್ಮೀ ಹೃದಯಸ್ತೋತ್ರಂ



ಕೊಳ್ಳುವುದೂ ಅಗ್ನಿಯ ಮೂಲಕವೇ. ಆದ್ದರಿಂದ ಲಕ್ಷ್ಮೀಯೇ ಉದ್ದಿಷ್ಟ ದೇವತೆಯಾದರೂ ಅಗ್ನಿಯನ್ನು ಇಲ್ಲಿ ಬೇಡಲಾಗಿದೆ. ಈ ಮಂತ್ರಕ್ಕೆ ಶ್ರೀ ಮತ್ತು ಅಗ್ನಿ ಇಬ್ಬರೂ ದೇವತೆಗಳು. ಲಕ್ಷ್ಮೀದೇವಿಗೂ ಕಮಲದ ಹೂವಿಗೂ ಅವಿನಾಭಾವ ಸಂಬಂಧವಿದೆ. ಆಕೆಯ ಹಲವಾರು ಹೆಸರುಗಳು ಕಮಲದ ಹೂವಿಗೆ ಸಂಬಂಧಿಸಿದ್ದಾಗಿದೆ.

ಕಮಲ ಸುಗಂಧಿಯೆ ಕಮಲದಳ ನೇತ್ರೆಯೆ
ಕಮಲ ವಿಮಲ ಶೋಭಿತೆ
ಕಮನೀಯ ಹಸ್ತಪಾದ ಕಮಲ ವಿರಾಜಿತೆ
ಕಮಲೆ ಕಾಯೆ ಎನ್ನನು ॥

ಈ ಕೃತಿಯಲ್ಲಿ ಪುರಂದರದಾಸರು ಲಕ್ಷ್ಮೀದೇವಿಗೂ ಕಮಲಕ್ಕೂ ಇರುವ ಅನ್ಯೋನ್ಯ ಸಂಬಂಧವನ್ನು ನಿರೂಪಿಸಿದ್ದಾರೆ. ಇದೇ ರೀತಿ ಮಹಿಪತಿದಾಸರು ಶ್ಯಾಮಸುಂದರದಾಸರು ಗೋಪಾಲಕೃಷ್ಣವಿಠಲ ಅಂಕಿತರಾದ ಶ್ರೀಮತಿ ಅಂಬಾಬಾಯಿಯವರು ಕಮಲಕ್ಕೂ ಲಕ್ಷ್ಮಿಗೂ ಇರುವ ಸಂಬಂಧವನ್ನು ತಮ್ಮ ಕೃತಿಗಳನ್ನು ನಿರೂಪಿಸಿರುವುದನ್ನು ಕಾಣಬಹುದು. ಹರಿದಾಸರುಗಳು ಲಕ್ಷ್ಮೀದೇವಿಯನ್ನು ಕಮಲೆ ಪದ್ಮೆ, ಪದ್ಮಿನಿ, ಪದ್ಮಾಕ್ಷಿ, ಪದ್ಮಪ್ರಿಯೆ, ಪದ್ಮಸಂಭವೆ ಮುಂತಾದ ಹೆಸರುಗಳನ್ನು ಮಹಾಲಕ್ಷ್ಮಿಯ ಅಂಗಾಂಗಗಳಿಗೆ ಹೋಲಿಸಿದ್ದಾರೆ. ಪದ್ಮಿನಿ ಎಂದರೆ ಶ್ರೇಷ್ಠ ವರ್ಗದ ಸ್ತ್ರೀ ಎಂದು ಅರ್ಥೈಸಲಾಗಿದೆ. ಅಲ್ಲದೆ ದುರ್ಗಾ, ರುಕ್ಮಿಣಿ, ಸೀತೆ, ಅಕ್ಷರ,ಕುಟಿಲರಹಿತೆ, ರತ್ನಾಕರನ ಸುತೆ, ಚಂದ್ರಸಹೋದರಿ, ಮುಂತಾದ ಇನ್ನೂ ಅನೇಕ ಹೆಸರುಗಳೆಲ್ಲಾ ಆಕೆಯ ರೂಪ, ಕಾರ್ಯ ತಿಳಿಸುವ ಅನ್ವರ್ಥನಾಮಗಳು.

'ಲಕ್ಷ್ಮೀ' ಎಂಬ ಪದದ ಕೆಲವು ಅರ್ಥಗಳು ಈ ರೀತಿ ಇದೆ : 'ಲ' ಎಂದರೆ ಕೊಡುವವಳು, 'ಕ್ಷಿ' ಎಂದರೆ ಪ್ರೇರಿಸುವವಳು, 'ಮಿ' ಎಂದರೆ ಜ್ಞಾನ ಸ್ವರೂಪಳು.'ಲ' ಎಂದರೆ ಲಯ, 'ಕ್ಷಿ' ಎಂದರೆ ನಿವಾಸೆ, 'ಮಿ' ಎಂದರೆ ನಿರ್ಮಾಣ, ಅಂದರೆ ಶ್ರೀಹರಿಯ ವ್ಯಾಪಾರಗಳಾದ ಸೃಷ್ಠಿ, ಸ್ಥಿತಿ, ಲಯಗಳಲ್ಲಿ ಅವನ ಅನುವರ್ತಿಯಾಗಿರುವಳು. 'ಲ' - ವರುಣ 'ಕ್ಷ' ಕ್ಷೇತ್ರ ಅಂದರೆ ಕ್ಷೀರಸಾಗರ, ಮಿ - ನಿರ್ಮಾಣ ಅಂದರೆ ಅಲ್ಲಿ ಅವತರಿಸಿದವಳು ಲಕ್ಷ್ಮಿ, ಲ - ಸಮಾಧಾನಕ್ಕಾಗಿ, ಕ್ಷ- ನರಸಿಂಹದೇವರ ಬಳಿ ಪ್ರಹ್ಲಾದನನ್ನು 'ಮಿ' ಕಳುಹಿಸುತ್ತಾಳೋ ಅವಳು ಲಕ್ಷ್ಮಿ.

'ಅನಾದಿರ್ಭೂರ್ಭುವೋ' ಲಕ್ಷ್ಮಿ ಸುವೀರೋ ರುಚಿರಾಂಗದಃ

ಎಂಬಲ್ಲಿ 'ಲಕ್ಷ್ಮಿ' ಎಂಬುದು ಶ್ರೀಹರಿಯ ನಾಮವೆಂಬ ಉಲ್ಲೇಖವಿದೆ. ಅಂಬ್ರಣೀ ಸೂಕ್ತವು ಲಕ್ಷ್ಮಿದೇವಿಯ ಸ್ವರೂಪವನ್ನೂ ಶಕ್ತಿಯನ್ನು ವಿವರಿಸುವ ಒಂದು ಕೃತಿ. ಅಂಬ್ರಣೀ ಶಬ್ಧವಾಚ್ಯಳಾದ ಮಹಾಲಕ್ಷ್ಮಿಯು ವೇದಾಭಿಮಾನಿ. ಈಕೆ ಬ್ರಹ್ಮ,ರುದ್ರಾದಿಗಳ, ಸೃಷ್ಟಿ, ಸ್ಥಿತಿ, ಲಯಾದಿಗಳಿಗೆ ಕಾರಣಳು. ಜಗತ್ತಿನ ಎಲ್ಲಾ ವ್ಯಾಪಾರಗಳಿಗೂ ನಿಯಾಮಕಳು,ಮೋಕ್ಷದಾಯಕಳು,ಜೀವಿಗಳ ಯೋಗ್ಯತೆಗೆ ತಕ್ಕಂತೆ ದ್ರವ್ಯವನ್ನು ಅವರವರ ಮನೆಗಳಲ್ಲಿ ನೆಲೆಗೊಳಿಸುವಳು. ತ್ರಿಕಾಲ ಜ್ಞಾನ ಸಂಪನ್ನಳಾದ ಲಕ್ಷ್ಮೀದೇವಿಯ ಕಟಾಕ್ಷ ಹಾಗೂ ಆಶೀರ್ವಾದ ಬಲದಿಂದ ದಾರಿದ್ರ್ಯ, ರೋಗ ಹಸಿವೆ, ಅಪಮೃತ್ಯು ಭಯ, ಶೋಕ, ಮನೋವ್ಯಥೆಗಳು ನೀಗಿ ಕೀರ್ತಿ,ಯಶಸ್ಸು,ಸಂಪತ್ತು,ಆನಂದ, ಆಯುಷ್ಯ ವೃದ್ಧಿಯಾಗುತ್ತದೆ.

# ಶ್ರೀ ಕೃಷ್ಣನ ಶಂಖ ಪಾಂಚಜನ್ಯ

- ಹನುಮಂತ.ಮ. ದೇಶಕುಲಕರ್ಣಿ.

9480364915



ಸನಾತನ ಧರ್ಮದಲ್ಲಿ ಶಂಖ ಧಾರ್ಮಿಕ ಆಯೋಜನಗಳಲ್ಲಿ ವಿಶೇಷವೆಂದು ಪರಿಗಣಿಸಲಾಗುತ್ತದೆ. ವಿಜಯ,ಸಮೃದ್ಧಿ, ಸಂತೋಷ,ಶಾಂತಿ,ಖ್ಯಾತಿ,ಪ್ರತಿಷ್ಠೆ ಮತ್ತು ಲಕ್ಷ್ಮಿಯ ಸಂಕೇತವೆಂದು ಪರಿಗಣಿಸಲಾಗಿದೆ.ಶಂಖವನ್ನು ಊದಿದಂತೆ ಅದು ವಾತಾವರಣದಲ್ಲಿ ಸಕಾರಾತ್ಮಕ ಶಕ್ತಿಯನ್ನು ಹರಡುತ್ತದೆ ಎನ್ನುವ ನಂಬಿಕೆಯಿದೆ. ಇದರ ಶಕ್ತಿ ಮತ್ತು ಪವಾಡಗಳು ಮಹಾಭಾರತ ಮತ್ತು ಪುರಾಣಗಳಲ್ಲಿಯೂ ಕಂಡು ಬರುತ್ತವೆ.



## ಶಂಖದ ಪ್ರಕಾರಗಳು

ನೈಸರ್ಗಿಕವಾಗಿ ಅನೇಕ ರೀತಿಯ ಶಂಖ ಚಿಪ್ಪುಗಳಿವೆ. ಆದರೆ ಅವುಗಳಲ್ಲಿ 3 ಮುಖ್ಯ ಪ್ರಕಾರಗಳಿವೆ. ಅವುಗಳೆಂದರೆ ಬಲ-ಬದಿ ಶಂಖ, ಮಧ್ಯಂತರ ಶಂಖ ಮತ್ತು ಎಡ ಬದಿ ಶಂಖ ಎಂದು ಪರಿಗಣಿಸಲಾಗುತ್ತದೆ. ಈ ಎಲ್ಲದರಲ್ಲೂ ಪಾಂಚಜನ್ಯ ಶಂಖವನ್ನು ಅತ್ಯಂತ ಅಪರೂಪದ ಶಂಖ ಚಿಪ್ಪು ಎಂದು ಪರಿಗಣಿಸಲಾಗಿದೆ.

## ಪುರಾಣ ಪುಟಗಳಲ್ಲಿ ಪಾಂಚಜನ್ಯ

ಪಾಂಚಜನ್ಯ ಹಿಂದೂ ದೇವತೆ ವಿಷ್ಣುವಿನ ಶಂಖ. ಹರಿವಂಶದ ಪ್ರಕಾರ, ಕೃಷ್ಣನು ಪಾಂಚಜನ್ಯವೆಂಬ ಶಂಖವನ್ನು ಹೊಂದಿದ್ದಾನೆ ಎಂದು ವಿವರಿಸಲಾಗಿದೆ.ಇದು ಅವನ ನಾಲ್ಕು ಲಕ್ಷಣಗಳಲ್ಲಿ ಒಂದು ಕೌಮೋದಕಿ ಗದೆ, ಸುದರ್ಶನ ಚಕ್ರ ಆಯುಧ ಮತ್ತು ಪದ್ಮ ಹೂವು ಅವನ ಇತರ ಲಕ್ಷಣಗಳು.ಮೇಲಿನ ಎಡಗೈಯಲ್ಲಿ ವಿಷ್ಣು ಪಾಂಚಜನ್ಯವನ್ನು ಹಿಡಿದಿದ್ದಾನೆ. ಈ ಶಂಖವನ್ನು ಕುರುಕ್ಷೇತ್ರ ಯುದ್ಧದ ಅವಧಿಯಲ್ಲಿ ಬಳಸಲಾಯಿತು.

ವಾಲ್ಮೀಕಿ ರಾಮಾಯಣದ ಪ್ರಕಾರ, ಪುರುಷೋತ್ತಮನು ವಿಶ್ವಕರ್ಮನಿಂದ ನಿರ್ಮಿತ ಚಕ್ರವಾನ್ ಪರ್ವತದ ಮೇಲೆ ಪಾಂಚಜನ್ಯನೆಂಬ ದಾನವನನ್ನು ಕೊಂದು ಅವನಿಂದ ಪಾಂಚಜನ್ಯವೆಂಬ ಶಂಖವನ್ನು ತೆಗೆದುಕೊಂಡನು.

## ಮಹಾಭಾರತದಲ್ಲಿ ಬಳಕೆಯಾದ ಶಂಖದ ಹೆಸರುಗಳು

ಶ್ರೀಕೃಷ್ಣನ ಐದು ಮುಖದ ಶಂಖವೇ ಪಾಂಚಜನ್ಯ ಶಂಖ. ಸಮುದ್ರಮಂಥನದ ಸಮಯದಲ್ಲಿ ಹುಟ್ಟಿಕೊಂಡಿತು ಎಂದು ನಂಬಲಾಗಿದೆ. ಸಮುದ್ರಮಂಥನದಿಂದ ಪಡೆದ 14 ರತ್ನಗಳಲ್ಲಿ ಶಂಖ 6 ನೇ ಸ್ಥಾನದಲ್ಲಿದೆ.ಮಹಾಭಾರತದಲ್ಲಿ, ಶ್ರೀಕೃಷ್ಣನ ಬಳಿ ಪಾಂಚಜನ್ಯ, ಅರ್ಜುನನ ಬಳಿ ದೇವದತ್ತ, ಯುಧಿಷ್ಠಿರನ ಬಳಿ ಅನಂತ ವಿಜಯ, ಭೀಷ್ಮನ ಬಳಿ ಘಂಟ್ರಿಕಾ, ನಕುಲನ ಬಳಿ ಸುಘೋಷ್, ಸಹದೇವನ ಬಳಿ ಮಣಿಪುಷ್ಪಕ ಶಂಖವಿತ್ತು.

## ಪಾಂಚಜನ್ಯ ವಿಶೇಷತೆ

ಈ ಶಂಖದ ಶಬ್ದವು ಹಲವಾರು ಕಿಲೋಮೀಟರ್‌ಗಳವರೆಗೆ ಹೋಗುತ್ತದೆ. ಶ್ರೀಕೃಷ್ಣನ ಐದು ಮುಖದ ಶಂಖ ಚಿಪ್ಪಿನ ಶಬ್ದವು ಅನೇಕ ಕಿಲೋಮೀಟರ್‌ಗಳನ್ನು ತಲುಪುತ್ತಿತ್ತು ಎಂದು ಹೇಳಲಾಗುತ್ತದೆ.

ಮಹಾಭಾರತ ಯುದ್ಧದಲ್ಲಿ, ಶ್ರೀ ಕೃಷ್ಣನು ಪಾಂಡವ ಸೈನ್ಯದಲ್ಲಿ ತನ್ನ ಪಾಂಚ ಜನ್ಯ ಶಂಖದೊಂದಿಗೆ ಉತ್ಸಾಹವನ್ನು ಸಂವಹನ ಮಾಡಲಿಲ್ಲ, ಆದರೆ ಅದು ಕೌರವರ ಸೈನ್ಯದಲ್ಲಿ ಭಯ ವನ್ನು ಹರಡಿತು. ಅದರ ಶಬ್ದ ಸಿಂಹ ಘರ್ಜನೆಗಿಂತಲೂ ಭಯಾ ನಕವಾಗಿತ್ತು. ಈ ಶಂಖವನ್ನು ವಿಜಯ ಮತ್ತು ಖ್ಯಾತಿಯ ಸಂಕೇತವೆಂದು ಪರಿಗಣಿಸಲಾಗಿದೆ.

ಇದು 5 ಬೆರಳುಗಳ ಆಕಾರವನ್ನು ಹೊಂದಿದೆ. ಐದು ಮುಖದ ಶಂಖ ಚಿಪ್ಪುಗಳು ಇನ್ನೂ ಕಂಡು ಬಂದರೂ, ಅವೆಲ್ಲವೂ ಅದ್ಭುತವಲ್ಲ.ಮನೆ ವಾಸ್ತು ದೋಷಗಳಿಂದ ಮುಕ್ತವಾಗಿರಲು ಅವುಗಳನ್ನು ಸ್ಥಾಪಿಸಲಾಗಿದೆ. ಇದು ರಾಹು ಮತ್ತು ಕೇತುಗಳ ಅಡ್ಡಪರಿಣಾಮಗಳನ್ನು ಕಡಿಮೆ ಮಾಡುತ್ತದೆ.

### ಶಂಖಾಸುರ

ಪೌರಾಣಿಕ ಕಥೆಯ ಪ್ರಕಾರ, ಶಂಖಾಸುರನು ಪ್ರಭಾಸ ಸಾಗರದ ಅತಿ ಆಳದಲ್ಲಿ ಒಂದು ಬೃಹತ್ ಶಂಖದಲ್ಲಿ ವಾಸಿ ಸುತ್ತಿದ್ದ ಒಬ್ಬ ದುಷ್ಟ ಸಮುದ್ರ ರಾಕ್ಷಸನಾಗಿದ್ದನು ಅಥವಾ ಶಂಖದ ರೂಪದಲ್ಲಿದ್ದ ರಾಕ್ಷಸನಾಗಿದ್ದನು. ಅವನು ಕೃಷ್ಣ,ಬಲರಾಮ ಮತ್ತು ಸುಧಾಮರ ಗುರುಗಳಾದ ಸಾಂದೀಪನಿಯವರ ಮಗನಾದ ಪುನ ರ್ದತ್ತನನ್ನು ಅಪಹರಿಸಿ ಶಂಖದಲ್ಲಿ ಸೆರೆಯಿಟ್ಟನು. ತಮ್ಮ ಅಧ್ಯ ಯನವನ್ನು ಮುಗಿಸಿದ ಮೇಲೆ, ಕೃಷ್ಣ, ಬಲರಾಮ ಮತ್ತು ಸುಧಾ ಮರು ಅವರಿಗೆ ಇಷ್ಟವಾದ ಶಿಕ್ಷಣದ ದಕ್ಷಿಣೆಯನ್ನು ಕೇಳಲು ತಮ್ಮ ಗುರುಗಳ ಮನವೊಲಿಸಿದರು.

### ಗುರುದಕ್ಷಿಣೆಯಾಗಿ ಗುರುಪುತ್ರನನ್ನು ಬದುಕಿಸಿದ ಕೃಷ್ಣ

ನಿಮಗೆ ಗುರುದಕ್ಷಿಣೆಯಾಗಿ ಏನು ಬೇಕೆಂದು ಕೇಳಲು, ಆಗ ಗುರುಗಳು ತಮ್ಮ ಜೀವನದಲ್ಲಿ ನಡೆದ ದುರಂತ ಘಟನೆಯನ್ನು ವಿವರಿಸಿದರು. ತಮಗೆ ಒಬ್ಬ ಮಗನಿದ್ದ ಅವನು ಪ್ರಭಾಸ ತೀರ್ಥ ದಲ್ಲಿ ಸ್ನಾನ ಮಾಡುತ್ತಿದ್ದಾಗ ಒಬ್ಬ ರಾಕ್ಷಸ ನೀರಿನೊಳಗೆ ಎಳೆದು ಕೊಂಡು ಹೋದ ಅವನು ನನ್ನ ಮಗನನ್ನು ಕೊಂದು ಹಾಕಿರ ಬಹುದು ಎಂದು ಘಟನೆ ವಿವರಿಸಿದ್ದರು. ಸಾಂದೀಪನಿ ಗುರುಗಳು ಹೇಳಿದರು ಮಗನನ್ನು ಬದುಕಿಸಿ ಕರೆದುಕೊಂಡು ಬಂದರೆ ಅದೇ ನೀವು ನನಗೆ ಕೊಡುವ ಗುರುದಕ್ಷಿಣೆ ಎಂದು ಹೇಳಿದರು.

### ವರುಣನಿಂದ ಸುಳಿವು

ಬಲರಾಮ, ಕೃಷ್ಣರು ಗುರುಗಳ ಮಗನನ್ನು ಬದುಕಿಸಿ ತರುವ ಪ್ರತಿಜ್ಞೆ ಮಾಡಿ ಇಬ್ಬರೂ ವರುಣನ ಬಳಿಗೆ ಹೋದರು. ವರುಣನು ಹೇಳಿದ ಪಂಚಜನ, ಎಂಬ ರಾಕ್ಷಸನು ಶಂಖದಾಕಾರ ದಲ್ಲಿ ನೀರಿನಲ್ಲಿ ಓಡಾಡುತ್ತಿದ್ದಾನೆಂದು ಅವನೇ ಈ ಕೆಲಸ ಮಾಡಿ ದ್ದಾನೆಂದು ಹೇಳಿದನು.

ಅಪಹರಣದ ಬಗ್ಗೆ ಕೇಳಿದ ತನ್ನ ಗುರುವಿನ ಮಗನನ್ನು ಕರೆದುಕೊಂಡು ಬರಲು ಅವನು ರಾಕ್ಷಸರ ನಗರಕ್ಕೆ ಹೋದನು. ಕೃಷ್ಣನು ಕೋಪಗೊಂಡು ಸಾಂದೀಪನಿಯವರ ಮಗನನ್ನು ಕಾಪಾಡಲು ಸಮುದ್ರಕ್ಕೆ ಹಾರಿದನು. ಅಲ್ಲಿ ಆ ದೈತ್ಯ ರಾಕ್ಷಸನು ಶಂಖದಲ್ಲಿ ಮಲಗಿದ್ದನ್ನು ನೋಡಿದನು.

ಕೂಡಲೇ ಈ ಇಬ್ಬರು ನೀರಿನಲ್ಲಿ ಹೊಕ್ಕು ಆ ಪಂಚಜನ ಶಂಖದಾಕಾರದ ರಾಕ್ಷಸನನ್ನು ಹಿಡಿದು ಅವನ ದೇಹವನ್ನೆಲ್ಲ ಶೋಧಿಸಿದರು. ಕೃಷ್ಣನು ಶಂಖಾಸುರನನ್ನು ಕೊಲ್ಲಲು ಯಶಸ್ವಿ



ಯಾದ. ಚಿಪ್ಪು ಮಾತ್ರ ಉಳಿಯಿತು.ದೇಹ ಸಿಕ್ಕಲಿಲ್ಲ, ಮತ್ತು ಶಂಖ ವನ್ನು ತನಗಾಗಿ ತೆಗೆದುಕೊಂಡನು. ನಂತರ ಅವನು ಶಂಖಕ್ಕೆ ದಾನವನ ಹೆಸರಿಟ್ಟನು.

### ಯಮಲೋಕದಲ್ಲಿ ಶ್ರೀಕೃಷ್ಣ

ಕೃಷ್ಣನು ಈ ಶಂಖವನ್ನು ಊದಿದಾಗ ಅದು ಅವನ ಮುಂದಿನ ಎದುರಾಳಿಯ ಸಾವನ್ನು ಮುನ್ಸೂಚಿಸುತ್ತದೆ. ಇದನ್ನು ತಿಳಿದ ಶ್ರೀಕೃಷ್ಣನು ಅವನು ದೈತ್ಯನನ್ನು ಕೊಂದು ತನ್ನೊಂದಿಗೆ ಶಂಖವನ್ನು ಇಟ್ಟುಕೊಂಡನು. ನಂತರ ತನ್ನ ಗುರುವಿನ ಮಗ ಯಮಲೋಕಕ್ಕೆ ಹೋಗಿದ್ದಾನೆಂದು ತಿಳಿದಾಗ, ಅವನು ಕೂಡ ಯಮಲೋಕಕ್ಕೆ ಹೋದನು.

ಯಮಧೂತರು ಅವನನ್ನು ಒಳಗೆ ಬಿಡಲಿಲ್ಲ. ನಂತರ ಅವನು ಶಂಖದಿಂದ ಶಬ್ದವನ್ನು ಮಾಡಲು ಆರಂಭಿಸಿದನು. ಇದರಿಂದಾಗಿ ಯಮಲೋಕ ಅಲುಗಾಡಲಾರಂಭಿಸಿತು. ಯಮ ರಾಜನು ಸ್ವತಃ ಬಂದು ತನ್ನಲ್ಲಿದ್ದ ಗುರುವಿನ ಮಗನ ಆತ್ಮವನ್ನು ಶ್ರೀ ಕೃಷ್ಣನಿಗೆ ಹಿಂದಿರುಗಿಸಿದನು. ಭಗವಾನ್ ಶ್ರೀಕೃಷ್ಣನು, ಬಲ ರಾಮ ಮತ್ತು ಅವನ ಗುರುವಿನ ಮಗನೊಂದಿಗೆ ಮತ್ತೆ ಭೂಮಿಗೆ ಮರಳಿದನು.

ಪಾಂಚಜನ್ಯ ಶಂಖದ ಜೊತೆಗೆ ತನ್ನ ಗುರುಪುತ್ರನನ್ನು ಕ್ಷೇಮವಾಗಿ ಕರೆತಂದು ಗುರುಗಳಿಗೆ ಅರ್ಪಿಸಿದನು. ಗುರುಗಳು ಪಾಂಚಜನ್ಯವನ್ನು ಶ್ರೀ ಕೃಷ್ಣನಿಗೆ ಕೊಟ್ಟು ಇದು ನಿಮಗೆ ಸೇರ ಬೇಕಾಗಿದ್ದು ಎಂದು ಹೇಳಿದರು. ನಂತರ, ಗುರುವಿನ ಆಜ್ಞೆಯ ಮೇರೆಗೆ ಅವನು ಈ ಶಂಖವನ್ನು ಹಳೆಯ ಯುಗದ ಅಂತ್ಯಕ್ಕೆ ಹೊಂದಿಸಿ ಹೊಸ ಯುಗವನ್ನು ಪ್ರಾರಂಭಿಸಿದನು. ಅವರ ಮಗ ನನ್ನು ಗುರುದಕ್ಷಿಣೆಯಾಗಿ ಕೊಟ್ಟು ತಾವು ಮಥುರೆಗೆ ಹಿಂದಿ ರುಗಿದರು. ಆ ಶಂಖ, ಪಾಂಚಜನ್ಯ ಎಂಬ ಹೆಸರಿಂದ ಪ್ರಸಿದ್ಧ ಶಂಖವಾಗಿ ಕೃಷ್ಣನ ಬಳಿಯೇ ಉಳಿಯಿತು.

ಭಗವಾನ್ ಕೃಷ್ಣನು ಮಹಾಭಾರತ ಯುದ್ಧದ ನಂತರ ಪರಾಶರ ಋಷಿ ತೀರ್ಥಯಾತ್ರೆಯಲ್ಲಿ ಈ ಶಂಖವನ್ನು ಬಳಸಿ ದನು ಎನ್ನಲಾಗುತ್ತದೆ.



# ಸೌತಡ್ಕ ಶ್ರೀ ಮಹಾಗಣಪತಿ

ಶ್ರೀಮತಿ. ಮಾಲಾ ಪ್ರಸಾದ್
81053 65307



ನಮ್ಮ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯು ದೇವಾ ಲಯಗಳ ಬೀಡು ಎನಿಸಿಕೊಂಡಿದೆ. ಕುಕ್ಕೆ ಶ್ರೀಸುಬ್ರಹ್ಮಣ್ಯ ಸ್ವಾಮಿ, ಧರ್ಮಸ್ಥಳ ಶ್ರೀಮಂಜುನಾಥ, ಶ್ರೀರಾಮಕ್ಷೇತ್ರ, ಉಜಿ ರೆಯ ಸೂರ್ಯ.... ಹೀಗೆ ಹಲವಾರು ದೇವಾಲಯಗಳ ಬೀಡಾ ಗಿದೆ. ಹೀಗೆ ಇನ್ನೊಂದು ಶಕ್ತಿಯುಳ್ಳ ದೇವಸ್ಥಾನವೆಂದರೆ ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನ.

ಈ ಸೌತಡ್ಕ ದೇವಾಲಯವು ಬೆಳ್ತಂಗಡಿ ತಾಲೂಕಿನ ಕೊಕ್ಕಡ ಗ್ರಾಮದ ಸಮೀಪವಿದೆ. ಕುಕ್ಕೆ ಸುಬ್ರಹ್ಮಣ್ಯ ಹಾಗೂ ಧರ್ಮಸ್ಥಳದ ಮಾರ್ಗ ಮಧ್ಯೆ ಬರುತ್ತದೆ. ಧರ್ಮಸ್ಥಳದಿಂದ 16 ಕಿಲೋ ಮೀಟರ್ ಹಾಗೂ ಕುಕ್ಕೆ ಶ್ರೀಸುಬ್ರಹ್ಮಣ್ಯದಿಂದ 45 ಕಿಲೋ ಮೀಟರ್ ದೂರದಲ್ಲಿದೆ.


ಪ್ರಥಮ ಗಣಿಗಳಿಗೆ ಒಡೆಯನಾದ ಶ್ರೀಮಹಾಗಣ ಪತಿಯು ಇಲ್ಲಿ ಮೂಲ ದೇವರು. ಮಲೆನಾಡಿನಲ್ಲಿ ಪ್ರಕೃತಿ ರಮಣೀಯ. ಮಲೆನಾಡಿನ ಪ್ರಕೃತಿಯ ಸೊಬಗಿಗೆ ಮನ ಸೋಲದೆ ಇರುವವರೇ ಇಲ್ಲ. ಇಂತಹ ಹಚ್ಚ ಹಸುರಿನ ಪ್ರಕೃತಿ ಮಾತೆಯ ಮಧ್ಯೆ ಬಯಲೇ ಆಲಯವಾಗಿರುವ ಮಹಾಗಣಪತಿಯ ಕ್ಷೇತ್ರವಿದು. ಇಲ್ಲಿ ಗರ್ಭಗುಡಿ ಇಲ್ಲದೆ ಗಣಪನು ಮುಕ್ತ ಪ್ರದೇಶದಲ್ಲಿ ನಮಗೆ ದರ್ಶನ ನೀಡುತ್ತಾನೆ. ಅಂಕುರಾರ್ಪಣೆ ಇಲ್ಲಿ ಅಂಬರವೇ ಚಾವಣಿಯಾಗಿದ್ದು ಮರಗಿಡಗಳೇ ದೇವಸ್ಥಾನದ ಕಂಬಗಳಾಗಿವೆ. ಇದರಿಂದ ಭಕ್ತರು ಯಾವುದೇ ಹೊತ್ತಿನಲ್ಲಾದರೂ ಬಂದು ಗಣಪನ ದರ್ಶನ ಪಡೆಯ ಬಹುದು.

ಪಾರ್ವತಿ ಪುತ್ರನು ಇಲ್ಲಿ ಸಿದ್ಧಿ ಬುದ್ಧಿಯರೊಂದಿಗೆ ದರ್ಶನ ನೀಡುತ್ತಾನೆ. ಕಪ್ಪುಕಲ್ಲಿನ ಗಣಪನು ಸುತ್ತಲೂ ಗಂಟೆಗಳಿಂದ ಅಲಂಕೃತವಾಗಿದ್ದಾನೆ.

ಸ್ಥಳ ಪುರಾಣದ ಪ್ರಕಾರ ಇಲ್ಲಿ ಹಿಂದೆ ಈ ಪ್ರದೇಶವನ್ನು ಆಳುತ್ತಿದ್ದ ರಾಜಮನೆ ತನದವರ ಆರಾಧ್ಯದೈವವಾಗಿದ್ದು ಇಲ್ಲಿನ ಗಣಪನ ವಿಗ್ರಹ. ಆಗ ಆಲಯ ಬರೀ ರಾಜಮನೆತನದವರಿಗೆ ಮಾತ್ರ ಸೀಮಿತವಾಗಿತ್ತು. ನಂತರ ಯುದ್ಧದಲ್ಲಿ ಶತ್ರುಗಳು ಪ್ರಾಂತ್ಯ ವನ್ನು ಹಾಗೂ ದೇವಾಲಯವನ್ನು ತಮ್ಮ ಕೈವಶ ಮಾಡಿಕೊಂಡು ನಾಶಮಾಡಿದರು. ಅಂದಿನಿಂದ ಗಣಪನ ವಿಗ್ರಹವು ಅಜ್ಞಾತ ವಾಗಿ ಕಾಡಿನಲ್ಲಿ ಮುಚ್ಚಿತ್ತು. ಹಲವು ವರ್ಷಗಳ ಬಳಿಕ ಗೋಪಾಲಕರಿಗೆ ಗಣಪನ ವಿಗ್ರಹವು ಸಿಕ್ಕಿತು. ಅವರು ಇದನ್ನು ತುಂಬಾ ಭಕ್ತಿ ಭಾವದಿಂದ ಈ ಪ್ರದೇಶದಲ್ಲಿ ತಂದು ಪ್ರತಿಷ್ಠಾಪಿಸಿದರು. ಗೋಪಾಲಕರು ಸೌತೆಕಾಯಿಯನ್ನು ತಮ್ಮ ಜೀವನೋಪಾ ಯಕ್ಕಾಗಿ ಇಲ್ಲಿ ಬೆಳೆಯುತ್ತಿದ್ದರು. ಇಲ್ಲಿ ಬೆಳೆಯುತ್ತಿದ್ದ ಸೌತೆಕಾಯಿ ಯನ್ನು ದಿನನಿತ್ಯವೂ ನೈವೇದ್ಯ ಮಾಡುತ್ತಿದ್ದರು. ಈ ಕಾರಣ ದಿಂದಾಗಿ ಈ ಸ್ಥಳಕ್ಕೆ ಸೌತಡ್ಕ ಮಹಾಗಣಪತಿ ಎಂಬ ಹೆಸರು ಬಂತು.

ಹಲವು ದಿನಗಳ ಬಳಿಕ ಶ್ರೀಮಂತ ಬ್ರಾಹ್ಮಣರೊಬ್ಬರು ಇಲ್ಲಿ ದೇವಸ್ಥಾನವನ್ನು ಕಟ್ಟುವ ಆಲೋಚನೆಯಲ್ಲಿ ಇದ್ದಾಗ ಮಹಾಗಣಪನು ಅವರ ಕನಸಿನಲ್ಲಿ ಪ್ರತ್ಯಕ್ಷವಾಗಿ ನನಗೆ ಆಲಯವೆ ಬೇಡವೆಂದು ತಾನು ಮುಕ್ತ ವಾತಾವರಣದಲ್ಲಿಯೇ ಇರಲು ಇಚ್ಛಿಸುತ್ತೇನೆ ಎಂದು ಪೂಜೆ ಪುನಸ್ಕಾರಗಳು ಹೀಗೆ ಮುಂದುವರೆಯಲಿ ಎಂದು ಬ್ರಾಹ್ಮಣನಿಗೆ ಆದೇಶಿಸುತ್ತಾನೆ. ಅಂದಿನಿಂದ ಭಕ್ತಾದಿಗಳು ಇಲ್ಲಿ ದೇವಸ್ಥಾನವನ್ನು ನಿರ್ಮಿಸುವ ಕಾರ್ಯವನ್ನು ಕೈಬಿಟ್ಟರು.

ಭಕ್ತರು ಇಲ್ಲಿ ತಮ್ಮ ಕೋರಿಕೆಗಳನ್ನು ಮನಸ್ಸಿನಲ್ಲಿ ನೆನೆಸಿಕೊಂಡು ಒಂದು ಗಂಟೆಯನ್ನು ಕಟ್ಟಿದರೆ ಅವರ ಮನಸ್ಸಿನ ಇಚ್ಛೆಯೂ 45 ದಿನಗಳ ಒಳಗೆ ಈಡೇರುತ್ತದೆ ಎಂಬ ನಂಬಿಕೆಯಿದೆ. ಹರಕೆಯ ಗಂಟೆ ಇಲ್ಲಿನ ವಿಶೇಷ. ಇಲ್ಲಿನ ಮಹಾಗಣಪನು ಗಂಟೆ ಪ್ರಿಯನು. ಇದೇ ಕಾರಣದಿಂದ ಮಹಾ ಗಣಪನ ಎದುರುಗಡೆ ಮತ್ತು ಸುತ್ತಲೂ ನಾವು ವಿವಿಧಾಕಾರದ ಗಂಟೆಗಳನ್ನು ಇಲ್ಲಿ ಕಾಣಬಹುದು. ಸಂಕಷ್ಟಿ ಹಾಗೂ ಚೌತಿಗೆ ಸಾವಿರಾರು ಜನ ಭಕ್ತಾದಿಗಳು ಬಂದು ಇಲ್ಲಿ ಸೇರುತ್ತಾರೆ. ಪ್ರತಿದಿನ ಭಕ್ತಾದಿಗಳಿಗೆ ಅನ್ನದಾನವಿರುತ್ತದೆ. ಇಲ್ಲಿಂದ ಆರು ಕಿಲೋಮೀಟರ್ ದೂರದಲ್ಲಿ ಕಪಿಲಾ ನದಿಯು ಹರಿಯುತ್ತದೆ. ಮಲೆನಾಡಿನಲ್ಲಿರುವ ಈ ಪುಣ್ಯ ಕ್ಷೇತ್ರವು ನಮ್ಮ ಆಸೆಗಳನ್ನು ಈಡೇರಿಸುವುದರ ಜೊತೆಗೆ ಇಲ್ಲಿನ ಆಹ್ಲಾದಕರ ವಾತಾವರಣ ಮನಸ್ಸಿಗೆ ಮುದ ನೀಡುತ್ತದೆ.



# ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

**27-09-2022**
ಮಂಗಳವಾರ
ಹಗಲು: ತಿರುಚ್ಚಿ ಉತ್ಸವ ,
ಧ್ವಜಾರೋಹಣ,
ರಾತ್ರಿ: ದೊಡ್ಡಶೇಷವಾಹನ

**28-09-2022**
ಬುಧವಾರ
ಹಗಲು: ಚಿಕ್ಕಶೇಷವಾಹನ,
ರಾತ್ರಿ: ಹಂಸವಾಹನ.

**29-09-2022**
ಗುರುವಾರ
ಹಗಲು: ಸಿಂಹವಾಹನ
ರಾತ್ರಿ: ಮುತ್ತಿನಚಪ್ಪರವಾಹನ

**30-09-2022**
ಶುಕ್ರವಾರ
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**01-10-2022**
ಶನಿವಾರ
ಹಗಲು: ಪಲ್ಲಕ್ಕಿಯಲ್ಲಿ
ಮೋಹಿನೀ ಅವತಾರೋತ್ಸವ
ರಾತ್ರಿ: ಗರುಡವಾಹನ

**02-10-2022**
ಭಾನುವಾರ
ಹಗಲು: ಹನುಮದ್ವಾಹನ,
ಸಾ॥ ವಸಂತೋತ್ಸವಂ
ರಾತ್ರಿ: ಗಜವಾಹನ

**03-10-2022**
ಸೋಮವಾರ
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ.

**04-10-2022**
ಮಂಗಳವಾರ
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ

**05-10-2022**
ಬುಧವಾರ
ಹಗಲು: ಚಕ್ರಸ್ನಾನ
ರಾತ್ರಿ: ಧ್ವಜಾವರೋಹಣ

# ಶ್ರೀ ಹರಿಕಥಾಮೃತ ಸಾರದಲ್ಲಿ ನಿರೂಪಿತವಾಗಿರುವ ಉಪಾಸನಾ ಕ್ರಮ




– ಡಾ॥ ರಾಮಚಂದ್ರ ದಾಸ್ ಸಿ.ಜೆ.

94833 84584


ಶ್ರೀಪಾದರಾಜರಿಂದ ಶ್ರೀಗೋಪಾಲದಾಸರವರೆಗೆ ಮೂಡಿ ಬಂದ ದಾಸ ಸಾಹಿತ್ಯದಲ್ಲಿನ ಸಾರವನ್ನು ಅತ್ಯಂತ ವ್ಯವಸ್ಥಿತ ಮತ್ತು ಶಿಸ್ತು ಬದ್ಧವಾಗಿ, ಜ್ಞಾನ, ಭಕ್ತಿ ವೈರಾಗ್ಯಗಳು ಜಾಗೃತಗೊಳ್ಳುವ ರೀತಿಯಲ್ಲಿ ಶಾಸ್ತ್ರ ಹಾಗೂ ಕಾವ್ಯದ ಚೌಕಟ್ಟಿನಲ್ಲಿ ಸಿದ್ಧಾಂತದ ಅರಿವಿನ ಮೂಲಕ ಉಪಾಸನೆಯ ಮಾರ್ಗಗಳನ್ನು ನಿರೂಪಿಸುವ "ಶ್ರೀಹರಿಕಥಾಮೃತಸಾರ" ಗ್ರಂಥವನ್ನು ಶ್ರೀಜಗನ್ನಾಥದಾಸರು (1727 -1809) ರಚಿಸಿದ್ದಾರೆ

ಸಾಧನೆ ಮತ್ತು ಉಪಾಸನೆ ಇವೆರಡೂ ಒಂದಕ್ಕೊಂದು ಪೂರಕವಾದ ಅಂಶಗಳು ಜೀವರು ಭೂಮಿಯಲ್ಲಿ ಜನ್ಮ ತಾಳುವ ಕ್ರಿಯೆಯಿಂದ ಪ್ರಾರಂಭಿಸಿ, ಮರಣದ ನಂತರ ಪಿತೃಲೋಕ ಗಮನದವರೆಗೂ ಕರ್ಮಗಳಿಂದ ಬಂಧಿತರಾಗಿ ಆಯುಷ್ಯವನ್ನು ಉಪಭೋಗಿಸುತ್ತಿರುತ್ತಾರೆ. ಇಂತಹ ಸಮಯದಲ್ಲಿ ಸಂಚಿತ ಕರ್ಮಗಳನ್ನು ಕಳೆದುಕೊಂಡು ಸಾಧನೆ ಮಾಡಿಕೊಳ್ಳಲು ಭಕ್ತಿ ಪೂರ್ವಕವಾದ ಉಪಾಸನೆ ಅತ್ಯವಶ್ಯ.ಹೀಗೆ ಉಪಾಸನೆಯನ್ನು ಮಾಡುವಾಗ, ಜಗತ್ತಿನಲ್ಲಿ ನಡೆಯುತ್ತಿರುವ ಸಕಲ ಕಾರ್ಯಗಳಲ್ಲಿ ಭಗವಂತನ ವ್ಯಾಪ್ತತ್ವ ಮತ್ತು ಕತೃತ್ವವನ್ನು ಅರಿತು ಸಕಲಾಧಿಷ್ಠಾನಗಳಲ್ಲಿ ನಿಯಾಮಕನೆಂದರಿತ ಅನುಸಂಧಾನ ಪೂರ್ವಕ ಕ್ರಿಯೆಗಳೇ ಉಪಾಸನೆಯ ಮೂಲ ಆಧಾರ. ಈ ರೀತಿಯ ಉಪಾಸನೆ ಮಾಡುವುದಕ್ಕೆ ದೇಶ , ಕಾಲಗಳ ಮಿತಿ ಇಲ್ಲ.

**ಉಪಾಸನೆ ಎಂದರೆ,**

ಭಾಗವತ ತಾತ್ಪರ್ಯ ನಿರ್ಣಯದಲ್ಲಿ ಸ್ಕಂದ - 10, ಅಧ್ಯಾಯ - 3, ಶ್ಲೋಕ -38 ರಲ್ಲಿ

ಶೃಣ್ವನ್ ಗೃಣನ್ ಸಂಸ್ಮರಯಂಶ್ಚ ಚಿಂತಯನ್।
ನಾಮಾನಿ ರೂಪಾಣಿಚ ಮಂಗಲಾನಿತೇ ॥
ಕ್ರಿಯಾಸು ಯಸ್ತ್ವಚ್ಚರಣಾರದಿಂದಯೋ -।
ರಾವಿಷ್ಟಚಿತ್ತೋ ನಭವಾಯ ಕಲ್ಪತೆ ॥
ಯಸ್ಮಾನ್ನಾಮ ರೂಪಾದಯ। ಸಂತಿ ತಸ್ಮಾಚ್ಛೃಣ್ವನ್ ಗೃಣನ್।
ಕ್ರಿಯಾಸು ಕ್ರಿಯಮಾಣಾಸು ಪ್ರೇರಕತ್ವೇನ ಪೂಜ್ಯತ್ವೇನ ಚ ॥
ಸರ್ವಕ್ರಿಯಾಸು ಕತೃತ್ವ ಪೂಜ್ಯತ್ವೇನ ಜನಾರ್ಧನಂ ॥
ಯೇ ವೇತ್ತಿ ನೈತಿ ಸಂಸಾರ ತತ್ ಪ್ರಸಾದಾನ್ನ ಸಂಶಯ ॥
॥ ಇತಿ ಕ್ರಿಯಾ ಯೋಗೇ॥

ಮಾಡುತ್ತಿರುವ ಎಲ್ಲ ಉಪಾಸನಾ ಕ್ರಿಯೆಗಳಲ್ಲಿಯೂ ಒಳಗೆ ನಿಂತು ಮಾಡಿ,ಮಾಡಿಸುವವನೂ, ಆ ಉಪಾಸನೆಗಳನ್ನು ಸ್ವೀಕರಿಸುವವನೂ ಜನಾರ್ಧನನೇ, ಅವನೇ ಕರ್ತನೂ, ಅವನೇ ಪೂಜ್ಯನೂ ಎಂದು ಅನುಸಂಧಾನ ಪೂರ್ವಕವಾಗಿ ಚಿಂತಿಸುವ ಕಾರ್ಯವೇ (ಸಾತ್ವಿಕ) ಉಪಾಸನೆ ಎನ್ನಲಾಗುವುದು ಹರಿಕಥಾಮೃತಸಾರದಲ್ಲಿ,

ಮಲಗುವಾಗಲಿ ಏಳುವಾಗಲಿ।
ಕುಳಿತು ಮಾತಾಡುತಲಿ ಮನೆಯೊಳು।
ಕೆಲಸಗಳ ಮಾಡುತಲಿ ಮೈದೊಳೆವಾಗ ಮೆಲುವಾಗ ॥
ಕಲುಷದೂರನ ಸಕಲ ಠಾವಿಲಿ
ತಿಳಿಯೆ ತತ್ತನ್ನಾಮ ರೂಪದಿ
ಬಳಿಯಲಿಪ್ಪನು ಒಂದರೆಕ್ಷಣಾ ಬಿಟ್ಟಗಲನವರ ॥

ಎಂಬುದಾಗಿ ನಾಮಸ್ಮರಣ ಸಂಧಿಯಲ್ಲಿ, ಕರುಣಾಸಿಂಧುವಾದ ಭಗವಂತನು ಭಕುತರ ಯೋಗಕ್ಷೇಮದ ರಕ್ಷಣೆಯನ್ನು ಹೇಗೆ ಪ್ರೀತಿ ಪೂರ್ವಕವಾಗಿ ಮಾಡುತ್ತಿದ್ದಾನೆ ಎಂಬುದನ್ನು ಕೊಂಡಾಡಿದ್ದಾರೆ. ಗೀತೆಯಲ್ಲಿಯೂ ಸಹ ಶ್ರೀಕೃಷ್ಣನು,

ಅನನ್ಯಾಶ್ಚಿಂತಯಂತೋಮಾಂ, ಯೇ ಜನಾಃ ಪರ್ಯುಪಾಸತೆ।;
ತೇಷಾಂ ನಿತ್ಯಾಭಿಯುಕ್ತಾನಾಂ, ಯೋಗಕ್ಷೇಮಂ ವಹಾಮ್ಯಹಂ ॥
- ಎಂದಿದ್ದಾನೆ.

ಶ್ರೀವಾಸುದೇವನು ಜೀವರ ಸ್ವರೂಪ ದೇಹದಲ್ಲಿ, ಸರ್ವ ಪ್ರಾಣಿಗಳಲ್ಲಿ ಆಯಾಯ ರೂಪಗಳಿಂದ ಮತ್ತು ಹೆಸರುಗಳಿಂದ ಜಗತ್ತಿನ ಒಳ

ಹೊರಗೆ ವ್ಯಾಪ್ತನಾಗಿ ಪ್ರಕಾಶಿಸುತ್ತಿರುವನು. ಇಂತಹ ರೂಪಗಳಲ್ಲಿ ಭೇದ ವಿಲ್ಲವೆಂದು ಚಿಂತಿಸುವ ಕ್ರಿಯೆಯನ್ನು ದಾಸರು "ಬಿಂಬೋಪಾಸನೆ" ಎಂದಿದ್ದಾರೆ. ಭಗವಂತನು ಬಿಂಬರೂಪಿಯಾಗಿ ಸಕಲ ಜೀವರ ಹೃದಯ ದಲ್ಲಿಯೇ ನೆಲೆಸಿದ್ದಾನೆ, ಎಂದು ಬೃಹದಾರಣ್ಯಕ ಮತ್ತು ಕಾಠಕೋಪನಿಷ ದ್ಭಾಷ್ಯದಲ್ಲಿ ನಿರೂಪಿತವಾಗಿದೆ.

ಸ್ವಹೃದಿ ಸ್ಥಿತಂ, ಸ್ವ ನಿಯಾಮಕಂ, ಭಗವದ್ರೂಪಂ ಇತಿ ಬಿಂಬಃ (ಬೃ.ಉ.ಭಾ)
ಅಂಗುಷ್ಠಮಾತ್ರ ಪುರುಷೋ ಮಧ್ಯೆ ಆತ್ಮನಿ ತಿಷ್ಠತಿ।
ಈಶಾನೋ ಭೂತ ಭವ್ಯಸ್ಯ ನ ತತೋ ವಿಜುಗುಪ್ಸತೇ॥ (ಕಾ.ಉ.ಭಾ)

ಉಪಾಸನೆ ಎನ್ನುವುದು ಜ್ಞಾನಪೂರ್ವಕ ಕ್ರಿಯೆ. ಇದರಲ್ಲಿ ಎರಡು ವಿಧ,

1) ಬಹಿರುಪಾಸನೆ: ಬಾಹ್ಯದಲ್ಲಿ ಮಾಡುವ ಎಲ್ಲ ಕರ್ಮಗಳು

2) ಅಂತರುಪಾಸನೆ: ಆಂತರಿಕವಾಗಿ ಮನಸ್ಸಿನಿಂದ ಮಾಡುವ ಎಲ್ಲ ಕ್ರಿಯೆಗಳು.

ಇದಕ್ಕೆ ಒಂದು ನಿರ್ಧಿಷ್ಟವಾದ ವಿಧಿ ವಿಧಾನವಿದೆ. ಮೊದಲು ಶ್ರವಣ, ಮನನ ನಂತರ ಉಪಾಸನೆ, ಈ ಕ್ರಮಗಳಿದ್ದು, ಇದರಲ್ಲಿ ಅನೇಕ ವಿಧಗಳನ್ನು ಕಾಣಬಹುದು.

1) ಧ್ಯಾನೋಪಾಸನೆ

2) ಗುಣೋಪಾಸನೆ

3) ನಾದೋಪಾಸನೆ

4) ಇಂದ್ರಿಯಗತ ಪರಮಾತ್ಮನ ಉಪಾಸನೆ

5) ವ್ಯಾಪ್ತೋಪಾಸನೆ

6) ಸೃಷ್ಟಿ ಪ್ರಕರಣದಲ್ಲಿ ಉಪಾಸನೆ

ಎ) ಪ್ರಾಕೃತ

ಬಿ) ವೈಕೃತ

7) ಜನನ ಯಜ್ಞದಲ್ಲಿ ಉಪಾಸನೆ

8) ಸ್ಥಿತಿ ಯಜ್ಞದಲ್ಲಿ ಉಪಾಸನೆ

ಎ ) ಜೀವ ಹೋಮ

ಬಿ) ಆಯುಷ್ಯ ಹೋಮ

ಸಿ) ಕರ್ಮ ಹೋಮ

ಈ ಕರ್ಮ ಹೋಮದ ವಿವಿಧ ಹಂತಗಳಲ್ಲಿ ಭಗವಂತನ ಉಪಾಸನೆ ನಿರೂಪಿತವಾಗಿದೆ. ಜೀವರುಗಳು, ನಿತ್ಯ ನಿರಂತರವಾಗಿ ಮಾಡುವ ಎಲ್ಲ ರೀತಿಯ ಕರ್ಮಗಳಲ್ಲಿ ಭಗವಂತನ ಕರ್ತೃತ್ವ, ವ್ಯಾಪ್ತಿತ್ವ ಮತ್ತು ನಿಯಾಮಕತ್ವ ಮುಂತಾದವುಗಳ ಉಪಾಸನೆ ಮುಖ್ಯವಾಗಿದ್ದು, ಸಾಧನೆಗೆ ಪೂರಕವಾಗಿದೆ. ಇವುಗಳು ನಿವೃತ್ತ ರೂಪದಲ್ಲಿರಬೇಕು ಎಂಬುದು ಶಾಸ್ತ್ರಕಾರರ ಉಪದೇಶವಾಗಿದ್ದು ಅವು ಗಳು,



1) ಶ್ವಾಸೋಚ್ಛ್ವಾಸ, 2) ಸ್ನಾನ, 3) ಪೂಜೆ 4) ನೈವೇದ್ಯ, 5) ಭೋಜನ, 6) ಅಲಂಕಾರ, 7) ದಾನ, 8) ಗೃಹಸ್ಥಾಶ್ರಮ ಧರ್ಮ, 9) ಅಧ್ಯಯನ ಮತ್ತು ಅಧ್ಯಾಪನ, 10) ಸರ್ವ ಸಮರ್ಪಣೆ,

ಈ ಕ್ರಿಯೆಗಳೆಲ್ಲವೂ, ಜೀವರು ದೇಹಧಾರಣೆ ಮಾಡಿ ಭೂಮಿ ಯಲ್ಲಿರುವಾಗ ಮಾಡುವ ಕ್ರಿಯೆಗಳಲ್ಲಿನ ಉಪಾಸನಾ ಕ್ರಮಗಳಾಗಿದೆ.

ನಂತರದ "ಲಯ ಪ್ರಕರಣದಲ್ಲಿ" ಮರಣ ಯಜ್ಞದಲ್ಲಿಯೂ ಚಿಂತನೆ ಮಾಡಬೇಕು ಈ ಕ್ರಿಯೆಯಲ್ಲಿ ಜೀವರು ತಮ್ಮ ಸ್ಥೂಲ ದೇಹವನ್ನು ತೊರೆದು ಅವರವರ ಕರ್ಮಫಲದ ರೀತ್ಯ ಬೇರೆ ದೇಹಗಳನ್ನು ಹೊಂದುತ್ತಾರೆ. ಈ ಜೀವರ ಕುರಿತು, ಆ ಜನ್ಮದಲ್ಲಿ ಮಾತ್ರ ಸಂಬಂಧ ಹೊಂದಿರುವ ಜೀವರು ಅಂದರೆ ಮಕ್ಕಳು ಮುಂತಾದವರು ಮಾಡುವ ಕ್ರಿಯೆಗಳಿಗೆ ಅಪರ ಕರ್ಮ ಗಳೆಂದು ಕರೆಯುತ್ತಾರೆ.

ಕೊನೆಯದಾಗಿ ಇವೆಲ್ಲಕ್ಕೂ ವಿರುದ್ಧವಾಗಿ , ಎಲ್ಲ ಕರ್ಮಗಳನ್ನು ನಾನೇ ಮಾಡುತ್ತೇನೆ ಎನ್ನುವ ಮನಸ್ಥಿತಿ ಹಾಗೂ ಜೀವರಿಗೂ, ಭಗವಂತ ನಿಗೂ ಅಭೇದವನ್ನು ಹೇಳುವ ಅನ್ಯಥೋಪಾಸನೆಯನ್ನು 'ಅಸದು ಪಾಸನೆ' ಎನ್ನುತ್ತಾರೆ. ಇದು ದೈತ್ಯರು ಮಾಡುವ ಉಪಾಸನೆಯಾದ್ದರಿಂದ ಇದು ನಿಷಿದ್ಧ.

ಜೀವರ ಜನನದಿಂದ ಪ್ರಾರಂಭಿಸಿ, ಮರಣದ ಪರ್ಯಂತರ ನಡೆಯುವ ಎಲ್ಲ ಕ್ರಿಯೆಗಳು ಉಪಾಸನೆಯ ಚೌಕಟ್ಟಿನಲ್ಲಿ ಬರುತ್ತವೆ. ಇದನ್ನೇ ದಾಸರಾಯರು "ಶ್ರೀ ಹರಿಕಥಾಮೃತಸಾರ" ದಲ್ಲಿ ವಿವಿಧ ವಿಷಯಗಳಾಧರಿಸಿ ಬೇರೆ ಬೇರೆ ಸಂಧಿಗಳಲ್ಲಿ ಬಹಳ ಹೃದಯಂಗಮಯವಾಗಿ ನಿರೂಪಿಸಿದ್ದಾರೆ. ಇದರಲ್ಲಿ 988 ಭಾಮಿನೀಷಟ್ಪದಿ ಪದ್ಯಗಳಿದ್ದು, 32 ಸಂಧಿಗಳಲ್ಲಿ, ಶಾಸ್ತ್ರೀಯ ವಾಗಿ ಬೇರ್ಪಡಿಸಿ, ರಚಿಸಿದ್ದಾರೆ.

ಈ ಗ್ರಂಥದಲ್ಲಿ "ನಿರೂಪಿತವಾಗಿರುವ ಉಪಾಸನೆಯ ಕ್ರಮಗಳು " ಸಾಧಕನ ದೃಷ್ಟಿಯಿಂದ ಅತ್ಯಂತ ಉಪಯುಕ್ತ ಮತ್ತು ಪ್ರಮುಖವಾಗಿವೆ.



ಶ್ರೀ ಪ್ರಸನ್ನವೆಂಕಟ ದಾಸಾರ್ಯವಿರಚಿತ

# "ಸಲಹು ವೆಂಕಟರಮಣದಯಾಂಬುಧಿ"

ಧಾರಾವಾಹಿ

## ಆತ್ಮನಿವೇದನೆ ಕೀರ್ತನೆಯ ಒಳನೋಟ

– ಡಾ॥ ಸುಭಾಸ ಕಾಖಂಡಕಿ

79754 42458

ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಇದು "ಯೇನ್ಯೆ ಚಂದಾ ನಮ್ಮ ಮನೆಗೆ ಗೋವಿಂದ ಬಂದಾ" ಕೀರ್ತನೆಯಲ್ಲಿ ದಾಸರು ತಾವು ನಿತ್ಯ ಪೂಜಿಸುವ ಶ್ರೀದೇವಿ - ಭೂದೇವಿ ಸಹಿತ ಶ್ರೀನಿವಾಸದೇವರ ವಿಗ್ರಹಗಳಲ್ಲಿ ಶ್ರೀಹರಿಯನ್ನು ಆವ್ಹಾನಿಸಿದಾಗ ಕಂಡ ಶ್ರೀನಿವಾಸನ ದಿವ್ಯ ವರ್ಣನೆಯನ್ನು ಮಾಡುತ್ತ ಸ್ತುತಿಸಿರುವುದನ್ನು ಗಮನಿಸಿದ್ದೇವೆ. ಅದರ ಮುಂದುವರೆದ ಭಾಗವಾಗಿ ಈ ಕೀರ್ತನೆಯಲ್ಲಿ ತಾವು ಕಂಡ ಶ್ರೀನಿವಾಸನನ್ನು ವರ್ಣಿಸುತ್ತ ಆರ್ತರವ ಭಾವದಿಂದ 'ಸಲಹು ವೆಂಕಟರಮಣ' ಎಂದು ಸ್ತುತಿಸಿದ್ದಾರೆ.

ಸಲಹು ವೆಂಕಟರಮಣ ದಯಾಂಬುಧಿ
ಸಲಹು ವೆಂಕಟರಮಣ ॥ಪ॥

ಇಲ್ಲಿ ದಾಸರು ತಾವು ನಂಬಿದ ವೆಂಕಟೇಶನನ್ನು ಆರ್ತರವ ಭಾವದಿಂದ ಕೇಳುತ್ತಿದ್ದಾರೆ. "ದಯಾ ಸಮುದ್ರನಾದ ವೆಂಕಟೇಶನೇ!" ನಿನ್ನನ್ನು ನಂಬಿದ ಭಕ್ತರಾದ ನಮ್ಮನ್ನು ಸಲಹು ಎನ್ನುತ್ತ ತಾವು ಕಂಡ ವೆಂಕಟೇಶನ ಭುವನ ಮನೋಹರವಾದ ರೂಪವನ್ನು ವರ್ಣನೆ ಮಾಡುತ್ತಲೇ ಅವನಿಗೆ ಶರಣು ಹೋಗಿದ್ದಾರೆ.

**ನುಡಿ - ೧ ರಲ್ಲಿ**

ಮಸ್ತಕದೊಳೊಪ್ಪುವ ಮಾಣಿಕ ಮುಕುಟದ
ಕಸ್ತೂರಿನಾಮದ ಚೆಲುವ
ವಿಸ್ತರ ಕದಪಿಲಿ ಹೊಳೆವ ಕುಂಡಲ ಪ್ರಾ - 1
ಶಸ್ತವದನ ಜಗಜ್ಜೀವಾ ॥೧॥

ದಿವ್ಯವಾದ ನಿನ್ನ ಮಸ್ತಕ, ಮಾಣಿಕ್ಯದ ಮುಕುಟದಿಂದ ಶೋಭಿಸಿದರೇ, ನೀನು ಧರಿಸಿದ ಕಸ್ತೂರಿ ನಾಮಗಳು ನಿನ್ನ ಚೆಲುವಿನಿಂದ ಅವೇ ಕಂಗೊಳಿಸುತ್ತಿವೆ. ನಿನ್ನ ವಿಸ್ತಾರವಾದ ಕದಪುಗಳಲ್ಲಿ ಹೊಳೆಯುವ ಕರ್ಣ-ಕುಂಡಲಗಳು, ನಿನ್ನ ಚೆಲುವಿನ ವದನಕ್ಕೆ ಅಲಂಕಾರ ಪೂರಿತವಾಗಿವೆ ಎಂದು ವರ್ಣಿಸುತ್ತ, ಇಡಿ ಜಗತ್ತನ್ನೆ ಪೊರೆಯುವ ಜಗನ್ನಿಯಾಮಕನಾದ ವೇಂಕಟೇಶನೇ! ನಮ್ಮನ್ನು ಸಲಹು ಎಂದು ಪ್ರಾರ್ಥಿಸಿದ್ದಾರೆ.

**ನುಡಿ - ೨ ರಲ್ಲಿ**

ಎಳೆನಗೆ ತಿಂಗಳ ಕಾಂತಿಲಿ ಹೃತ್ತಾಪ ।
ಕಳೆವ ಕರುಣಿ ಸಿರಿಕಾಂತ ॥
ಗಳದೊಳು ವನಮಾಲೆ ವೈಜಯಂತಿ ಪದಕ ।
ಗಳೊಲೆವ ಮಂಗಳ ಮೂರ್ತಿಮಂತ ॥೨॥

"ಚಂದ್ರಮನಂತೆ, ತಿಂಗಳ ಕಾಂತಿಯ ಬೆಳಕಿನಂಥ, ನಿನ್ನ ಎಳೆ ನಗುವಿನಿಂದ, ಭಕ್ತರ-ತಾಪಗಳನ್ನು ಕಳೆವ ಕರುಣಾನಿಧಿಯಾದ ಲಕ್ಷ್ಮೀಕಾಂತನಾದ ಶ್ರೀನಿವಾಸನೇ! ನಿನ್ನ ರೂಪವನ್ನು ಏನೆಂದು ವರ್ಣಿಸಲಿ? ನಿನ್ನ ಕೊರಳೊಳು ಇದ್ದ ವೈಜಂತಿ ಮಾಲೆ ನಿನ್ನ ಮಂಗಳಕರವಾದ ರೂಪಕ್ಕೆ ಕಾಂತಿಯನ್ನು ಹೆಚ್ಚಿಸಿಕೊಂಡಿದೆ. ಅಂಥಹ ಮಂಗಳಮೂರ್ತಿಯಾದ ಸಿರಿಕಾಂತನೇ ನಮ್ಮನ್ನು ಸಲಹು ಎಂದಿದ್ದಾರೆ ದಾಸರು ಮುಂದಿನ ನುಡಿಗಳಲ್ಲಿ ಭಗವಂತವನನ್ನು ಅಲಂಕರಿಸಿದ ವಸ್ತ್ರಾಭರಣಗಳನ್ನು ಬಹಳ ಅಮೂಲ್ಯವಾದ ನುಡಿಗಳಿಂದ ವರ್ಣಿಸಿದ ದಾಸರಿಗೆ ಭಗವಂತನನ್ನು ಅಲಂಕರಿಸಿದ ವಸ್ತ್ರಾಭರಣಗಳ ಪುಣ್ಯಕ್ಕೆ ಸಾಟಿಯಿಲ್ಲ ಎನಿಸಿದೆ ಅಂತಲೇ -

"ಮುತ್ತಿನ ಸರ ಸರಪಳಿ ಭುಜ ಕೀರ್ತಿಯು
ಎತ್ತಿದ ಶಂಖಾರಿಪಾಣೇ
ರತುನ ಮೇಲೊಡ್ಯಾಣ ಕಂಕಣಮುದ್ರೆ
ಒತ್ತೆ ಅಭಿಯವರದನೇ ॥3॥

"ನಿನ್ನ ಮನೋಹರವಾದ ಕೊರಳನ್ನು ಅಲಂಕರಿಸಿದ ಮುತ್ತಿನಸರ,ಎತ್ತರವಾದ ಭುಜಗಳಲ್ಲಿ ರಾಜಿಸುವ ಶಂಖ - ಚಕ್ರಗಳು, ಚಕ್ರಪಾಣಿಯಾದ ನಿನ್ನ ತೆಳುವಾದ ಸೊಂಟಕ್ಕೆ ಶೋಭಿಸುವ ಬಂಗಾರದ ಒಡ್ಯಾಣ ನಂಬಿದವರನ್ನು ಅನವರತ ರಕ್ಷಿಸುತ್ತೇನೆ ಎಂಬ ಅಭಯ ನೀಡುವ ಕೈಗಳಲ್ಲಿ ಮನೋಹರವಾದ ಕಂಕಣ ಮುದ್ರೆ, ಇಂಥ ಭವ್ಯ ಮನೋಹರ ರೂಪಕನಾದ ಹೇ ! ಶ್ರೀಹರಿಯೇ! ನಮ್ಮನ್ನು ಸಲಹು" ಎಂದಿದ್ದಾರೆ. ದಾಸರು

ಉಟ್ಟು ಪೊಂದಟ್ಟಿ ಕಠಾರಿ ಕಟ್ಟಿರುವ ।
ದುಷ್ಟರ ರಣಜೀತವೀರ ॥
ಇಟ್ಟ ವಜ್ರದ ಕಾಲಂದಿಗೆ ಪಾವುಗೆ ।
ಮೆಟ್ಟಿದ ಸುರರ ಮಂದಾರ ॥4॥

ಇಲ್ಲಿ ದಾಸರು ಬರಿ ಭಗವಂತನ ಮನೋಹರ ರೂಪವನ್ನು ಮಾತ್ರ ವರ್ಣಿಸುತ್ತಿಲ್ಲ. ಅವತಾರದ ಕಾರಣ ಪುರುಷನಾದ ಶ್ರೀಹರಿಯು ದುಷ್ಟರ ಸಂಹಾರಕ್ಕಾಗಿ ಅವನೆತ್ತಿದ ಕಠಾರಿಯನ್ನು ವರ್ಣಿಸುವಲ್ಲಿ, ಅವನುಟ್ಟ ಪಿತಾಂಬರದ ಕಟ್ಟಿನಲ್ಲಿ ಶೋಭಿಸುವ ಕಠಾರಿಯನ್ನು ಕೂಡ, ಅವನು ಅವತಾರ ಪುರುಷ ಎಂದು ಉಲ್ಲೇಖಿಸಿದಂತಿದೆ. ಆ ಕಠಾರಿ ಕೂಡ ಅವನ ಅಲಂಕಾರಕ್ಕೆ ಶೋಭಿಸುವಂತಿದೆ. ಇಲ್ಲಿ ದುಷ್ಟರನ್ನು ಶಿಕ್ಷಿಸುವುದಷ್ಟೇ ಅಲ್ಲ.ತನ್ನನ್ನು ನಂಬಿದ ಸುರರಿಗೆ ಮಂದಾರ ಪುಷ್ಪದಂತೆ ತಂಪನ್ನು ನೀಡುವವ ಎಂದು ವರ್ಣಿಸಿ ಅಂಥಾ ವರ್ಣಾತೀತವಾದ ಶ್ರೀಹರಿಯೇ ನಮ್ಮನ್ನು ಸಲಹು ಎಂದು ಪ್ರಾರ್ಥಿಸಿದ್ದಾರೆ.

**ಇನ್ನು ಕೊನೆಯ ನುಡಿಯಲ್ಲಿ**

ಅಗರ ಚಂದನ ಕಪ್ಪುರ ಕೇಶರ ಸುರ - 1
ಬಿಗಳಿಗೆ ಅತಿಪ್ರೀಯ ಅಂಗ
ಮಘುಮಘಿಸುವ ಮಲ್ಲಿಗೆ ಸಂಪಿಗೆಯ ಮಾ -1
ಲೆಗಳ ಪ್ರಸನ್ವೇಂಕಟ ರಂಗಾ ॥5॥

"ವಿಧ-ವಿಧವಾದ ಆಭರಣಗಳಿಂದ ಅಲಂಕಾರಿತ ನಾದ ಶ್ರೀನಿವಾಸನು,ಅಗರ-ಚಂದನ-ಕರ್ಪೂರದ ಸುವಾಸನೆಯನ್ನು ಹೊಂದಿ ದೇವಾನು ದೇವತೆಗಳನ್ನು ಮೋಹಗೊಳಿಸುವಂತಿದೆ. ಅದರೊಡನೆ ಮಲ್ಲಿಗೆ ಸಂಪಿಗೆಯ ಮಾಲೆಗಳನ್ನು ಧರಿಸಿದ ಶ್ರೀಹರಿಯ ರೂಪ ಇಡಿ ಜಗತ್ತನ್ನೇ ಅಲ್ಹಾದಗೊಳಿಸುವಂತಿದೆ. ಅಂಥಹ ಮೋಹಕ ರೂಪವುಳ್ಳ ವೇಂಕಟೇಶನೆ ನಮ್ಮನ್ನು ಸಲಹು" ಎಂದು ಅನನ್ಯವಾಗಿ ಪ್ರಾರ್ಥಿಸಿದ್ದಾರೆ ದಾಸರು.

**॥ಹರೇ ಶ್ರೀನಿವಾಸಾ॥**



## ಅನ್ನ ದಾನಾತ್ ಪರಂ ನಾಸ್ತಿ

ವಾಲಿದಃ ತೃಪ್ತಿ ಸಮಾಪ್ನೋತಿ । ಸುಖಮಕ್ಷಯ್ಯಯನ್ನದಃ ॥

ಮಧ್ಯ ಕಾಲೀನ ಜಗತ್ತಿನ ಶ್ರೇಷ್ಠ ನಿಬಂಧಕಾರ ಹೇಮಾದ್ರಿ ಪಂಡಿತ ತನ್ನ "ಚತುರ್ವರ್ಗ ಚಿಂತಾಮಣಿ"ಯ ದಾನಕಾಂಡದ ನಾಲ್ಕನೆಯ ಅಧ್ಯಾಯದಲ್ಲಿ ದಾನದ ಫಲಗಳನ್ನು ಶ್ರುತಿಸ್ಮೃತಿಗಳ ಆಧಾರಗಳಲ್ಲಿ ವಿವರಿಸುತ್ತ ಹೇಳುವ ಮಾತು - ನೀರನ್ನು ದಾನ ಮಾಡಿದರೆ ತೃಪ್ತಿ ದೊರೆಯುತ್ತದೆ. ಅನ್ನದಾನ ಮಾಡಿದರೆ ಅಕ್ಷಯವಾದ ಸುಖ ದೊರೆಯುವುದು. ಗೀತೆಯಲ್ಲಿ ಶ್ರೀಕೃಷ್ಣ ಇವೆರಡರ ನಡುವಣ ಸಂಬಂಧವನ್ನೂ ಜೀವರೊಡನೆ ಇವೆರಡಕ್ಕೂ ಇರುವ ಸಂಬಂಧವನ್ನೂ ಇನ್ನೂ ಸ್ಪಷ್ಟವಾಗಿ ತಿಳಿಯಪಡಿಸಿದ್ದಾನೆ -

ಅನ್ನಾದ್ಭವಂತಿ ಭೂತಾನಿ । ಪರ್ಜನ್ಯಾ ದನ್ನ ಸಂಭವಃ ॥

ಜೀವಿಗಳೆಲ್ಲವೂ ಅನ್ನದಿಂದ ಆಗುತ್ತವೆ. ಅನ್ನವು ನೀರಿನಿಂದ ಉತ್ಪನ್ನವಾಗುತ್ತದೆ.ಕಾಲಗತಿಯಲ್ಲಿ ಬಹಳ ಮುಂದೆ ಬಂದಿದ್ದೇವೆ. ಪರ್ಜನ್ಯದಿಂದ ಸಹಜವಾಗಿ ಉಂಟಾಗತಕ್ಕ ಆಹಾರವನ್ನು ವರ್ಜಿಸಿ, ನೀರನ್ನು ಬಳಸಿ ಮನುಷ್ಯ ಪ್ರಯತ್ನವನ್ನೂ ಹಾಕಿ ಅನ್ನವನ್ನು ಉತ್ಪಾದಿಸುತ್ತಿದ್ದೇವೆ.ಇಂತಲ್ಲಿಯೇ ದಾನದ ಪ್ರಾಧಾನ್ಯ ಉಂಟಾಗುತ್ತದೆ. ಅನ್ನ ನೀರಿನಷ್ಟು ಉಚಿತ - ಫ್ರೀ - ಅಲ್ಲ. ಆದ್ದರಿಂದಲೇ ಅದನ್ನು ಇತರರಿಗೆ ನೀಡಿ ತಾವು ಉಣ್ಣಬೇಕು. ಅಲ್ಲಿಯೂ ಮೂಲ ಸೂತ್ರ ಭಗವದ್ಗೀತೆಯದೇ -

ಭುಂಜತೇ ತ್ವೇ ತ್ವಘಂ ಪಾಪಾಯೇ ಪಚಂತ್ಯಾತ್ಮ ಕಾರಣಾತ್

ಯಾವ ಪಾಪಿಗಳು ತಮಗಾಗಿ ಮಾತ್ರವೇ (ತಮ್ಮ ಶರೀರ ಪೋಷಣೆಗೆ ಮಾತ್ರವೇ) ಅಡಿಗೆ ಮಾಡಿಕೊಳ್ಳುವರೋ ಅವರು ಪಾಪವನ್ನೇ ಉಣ್ಣುತ್ತಾರೆ (ದೋಷ ಭಾಗಿಗಳಾಗುತ್ತಾರೆ)

ಈಶಾವಾಸ್ಯದ ಮೊದಲ ಮಂತ್ರವೂ ಇಂತಹ ಉದಾತ್ತ ಅಭಿಪ್ರಾಯವನ್ನೇ ವಿವರಿಸುವಂತಹದ್ದು. ಪೂರ್ತಿ ಮಂತ್ರ ಇಲ್ಲಿ ಉದ್ದಿಷ್ಟವೇ.

ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್
ತೇನ ತ್ಯಕ್ತೇನ ಭುಂಜೀಥಾಃ ಮಾಗೃಧಃ ಕಸ್ಯ ಸ್ವಿದ್ಧನಂ

- ಈ ಜಗವೆಲ್ಲ ಈಶನಿಂದ ಆವರಿಸಲ್ಪಟ್ಟಿದೆ. ಚಲಿಸುವ ಪ್ರತಿ ಅಣುವಿನಲ್ಲಿಯೂ ಆತ ಅಂತರ್ಯಾಮಿ. ಆತ ಕೊಟ್ಟದ್ದನ್ನು (ನಿನಗೆ ಬಿಟ್ಟದ್ದನ್ನು) ಸ್ವೀಕರಿಸು. ದುರಾಸೆಯನ್ನು ಬಿಡು. ಧನವು ಯಾರದೂ ಅಲ್ಲ.)

ಸ್ವಾಮಿ ದರ್ಶನಕ್ಕೆಂದು ತಿರುಮಲೆಗೆ ಬರುವ ಯಾತ್ರಿಕರಿಗೆ ಕ್ಷುದ್ಬಾಧೆಯನ್ನು ತಪ್ಪಿಸಲು ದಾನಿಗಳ ಮುಕ್ತ ಹಸ್ತದ ನೆರವಿನಿಂದ ಅನ್ನದಾನ ಯೋಜನೆಯಲ್ಲಿ ಮತ್ತೊಂದು ಮಹತ್ವದ ಮೆಟ್ಟಿಲನ್ನು ಪರಿಕಲ್ಪಿಸಿದೆ. ತಿರುಮಲೆಯಲ್ಲಿ ಒಂದೇ ಬಾರಿಗೆ ಸಾವಿರ ಮಂದಿ ಊಟ ಮಾಡಲು ಅವಕಾಶವಾಗುವ ನಾಲ್ಕು ಕೋಣೆಗಳ ನೂತನ ಭೋಜನಾಲಯವನ್ನು ನಿರ್ಮಿಸಿ ಉದ್ಘಾಟಿಸಲಾಗಿದೆ. ಇಲ್ಲಿನ ಪಾಕಶಾಲೆ ಏಷ್ಯಾಖಂಡದಲ್ಲಿಯೇ ಅತಿ ದೊಡ್ಡ ಪಾಕಶಾಲೆಯೆಂಬ ಘನತೆಯನ್ನು ಪಡೆದಿದೆ. "ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆವ ಧನ್ಯಭಾವ"- ತಿ.ತಿ.ದೇವಸ್ಥಾನಗಳಿಗೆ - ದಾನಿಗಳ ದಾನಕ್ಕೆ ಭಕ್ತರ ಸತ್‌ಪಾತ್ರವನ್ನು ಕಲ್ಪಿಸಿ - ಸರ್ವತ್ರ ಸಮತಾ ಭಾವವನ್ನು ಹರಡುವಂತಾಗಿದೆ.



ಧಾರಾವಾಹಿ

# ಹರಿಕಥಾಮೃತಸಾರ ಮಹಿಮೆ ಬಲು ಅಪಾರ

-ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ ಕಾಖಂಡಕಿ

8059436752

**ಹಿಂದಿನ ಸಂಚಿಕೆಯಲ್ಲಿ...**

ಹರಿಕಥಾಮೃತಸಾರ ಭಗವಂತನ ಗುಣವರ್ಣನೆ ಇದೆ. ಗ್ರಂಥ ಕರ್ತೃ ಶ್ರೀಜಗನ್ನಾಥದಾಸರ ಜೀವನ ಚರಿತ್ರೆ ಓದಿದ್ದೀರಿ. ಹಾಗೇ ಅಹಂಕಾರ ಅಳಿದ ಮೇಲೆ ಗುರುಗಳ ಮತ್ತು ಭಗವಂತನ ಅನುಗ್ರಹದಿಂದ ಮೇರು ಗ್ರಂಥ ರಚನೆ ಮಾಡಿದ ಮಹಾ ಮಹಿಮರು.

**ಮುಂದುವರಿದ ಭಾಗ....**

ಶ್ರೀಜಗನ್ನಾಥದಾಸರು ಹರಿಕಥಾಮೃತಸಾರದ ಮೊದಲ ಮಂಗಳಾಚರಣೆ ಸಂಧಿಯಲ್ಲಿ ಗ್ರಂಥದ ಆರಂಭದಲ್ಲಿ ನಿರ್ವಿಘ್ನ ಸಮಾಪ್ತಿಗಾಗಿ ಹಾಗೂ ಮಂಗಳಾಚರಣೆ ಎನ್ನುವುದು ಶಾಸ್ತ್ರ ವಿಧಿ.

"ಹರಿಕಥಾಮೃತಸಾರ ಗುರುಗಳ /
ಕರುಣಾದಿಂದಾಪನಿತು ಪೇಳುವೆ/
ಪರಮ ಭಗವದ್ಭಕರಿದನಾದರದಿ
ಕೇಳುವುದು" ಎಂದಿದ್ದಾರೆ.

ಅಪೌರಷೇಯನಾದ ಭಗವಂತನ ಗುಣಗಳ ಬಗ್ಗೆ ಗುರುಗಳು ಹೇಳಿದುದರಲ್ಲಿ ಯಥಾಮತಿಗೆ ತಿಳಿದಷ್ಟು ಹೇಳುವೆನು. ಶ್ರೇಷ್ಟ ವಿಷ್ಣು ಭಕ್ತರಾದ ತಾವೆಲ್ಲರೂ ಉಪೇಕ್ಷಿಸದೇ ಭಕ್ತಿ ಮತ್ತು ಆದರದಿಂದ ಕೇಳಿ ಎಂದಿದ್ದಾರೆ. ಇದನ್ನು ಪಠನೆ ಮಾಡುವರು ಪ್ರತಿ ಸಂಧಿ ಹೇಳಿದ ನಂತರ ಈ ಪಲ್ಲವಿಯನ್ನು ಅನ್ನಲೇಬೇಕು. ಏಕೆಂದರೆ ನಾವು ಮಾಡುವ ಪ್ರತಿ ಕರ್ಮ ನನ್ನದಲ್ಲ ಎಂಬ ಭಾವ,ಇಂತಹ ಗುರುಗಳ ವಾಣಿ ನಮಗೆ ನೆನಪಿಸಿ ಕೊಡುತ್ತದೆ.

ಮಂಗಳಾಚರಣೆ ಸಂಧಿಯಲ್ಲಿ ಒಂದು ವಿಶೇಷವಿದೆ. ಈ ಸಂಧಿಯಲ್ಲಿ ೧೩ ನುಡಿಗಳು ಇವೆ. ಅಜ್ಞಾನವೆಂಬ ಕತ್ತಲೆಯನ್ನು ತೊಲಗಿಸುವ ದೀಪ.ದೀಪ ಸಂಖ್ಯಾ ಶಸ್ತ್ರಾದಲ್ಲಿ, 13 ಸಂಖ್ಯೆಯನ್ನು ತಿಳಿಸುತ್ತದೆ. ದೀಪದಲ್ಲಿ ಭಗವಂತನ ರೂಪಗಳು ಹೀಗಾಗಿ ಹರಿಕಥಾಮೃತಸಾರದ ಚಿಂತನ ಮಂಥನ ಮಾಡಿದಾಗ ಮತಿಗೆ ನಿಲಕದಷ್ಟು ಸ್ಥಿಮಿತವಿಲ್ಲದ ನೂತನವಾಗಿ ವಿಷಯಗಳು ತಿಳಿಯುತ್ತದೆ.

ಸರ್ವೋತ್ತಮನಾದ ಶ್ರೀಹರಿಯ, ದಶಾವತಾರದ ಐದನೇ ಅವತಾರವಾದ ನರಸಿಂಹ ದೇವರ ಸ್ತುತಿ ಮತ್ತು ರಮಾ ದೇವಿ, ಬ್ರಹ್ಮ ವಾಯು, ಸರಸ್ವತಿ ಹಾಗೂ ಭಾರತಿದೇವಿಯನ್ನು ಸ್ತುತಿಸಿ, ಬಳಿಕ ಭಗವಂತನ ಇನ್ನೊಂದು ರೂಪವಾದ ವೇದ ವ್ಯಾಸ ಮತ್ತು ಶ್ರೀಮದಾಚಾರ್ಯರರು, ಸ್ಮರಿಸಿ (ಹರಿದಾಸ ಸಾಹಿತ್ಯದ ಬೀಜ ಬಿತ್ತಿದವರು.) ಮನೋನಿಯಾಮಕ ರುದ್ರ ದೇವರು ಹಾಗೂ ಇಂದ್ರಾದಿಗಳ ಸ್ತುತಿಸಿ ಕೊನೆಗೆ ೧೩ ನೇ ನುಡಿಯಲ್ಲಿ ಎಲ್ಲ ದೇವತೆಗಳ ಸ್ಮರಣೆಯ ಕಾರಣ ತಿಳಿಸಿದ್ದಾರೆ.

ತಾರತಮ್ಯೋಕ್ತ ದೇವತೆಗಳು ಎಂದರೆ, ಅವರವರ ಯೋಗ್ಯಾನುಸಾರ ಶ್ರೇಷ್ಟತೆಯನ್ನು ಹೊಂದಿರುತ್ತಾರೆ. ಹೀಗಾಗಿ ಎಲ್ಲ ದೇವತೆಗಳಲ್ಲಿಯೂ ಅವರ ಅಂತರ್ಗತನಾಗಿ ಶ್ರೀಹರಿ ಕಾರ್ಯ ಕಾರಣನಾಗುತ್ತಾನೆ. ಉದಾಹರಣೆಗೆ ಹೇಳಬೇಕಾದರೆ ಒಂದೇ ಕುಟುಂಬದಲ್ಲಿ ಒಂದೇ ತಾಯಿಯ ಗರ್ಭದಿಂದ ಹುಟ್ಟಿದ ಮಕ್ಕಳ ಸಾಮರ್ಥ್ಯ ಮತ್ತು ಬುದ್ಧಿ ಶಕ್ತಿ ಹೇಗೆ ಬೇರೆ ಬೇರೆ ಇರುತ್ತದೆಯೋ ಹಾಗೇ ಬ್ರಹ್ಮಾದಿ ದೇವತೆಗಳಲ್ಲಿಯೂ ಅವರವರ ಯೋಗ್ಯತೆ ಮತ್ತು ಶ್ರೇಷ್ಟತೆ ಬೇರೆ ಬೇರೆ ಇರುತ್ತದೆ. ಉದಾಹರಣೆಗೆ ಹೇಳಬೇಕಾದರೆ,

ಈಗಿನ ಕಲಿಯುಗದ ಪ್ರತಿ ರೋಗದ ವಿಶೇಷ ಅನುಭವ ಪರಿಣಿತಿ ಹೊಂದಿದ ಡಾಕ್ಟರ್ ಹಾಗೇ, ಭಗವಂತನ ಸೃಷ್ಟಿಯಲ್ಲಿ ಪ್ರತಿಯೊಬ್ಬ ದೇವತೆಯೂ ಮತ್ತು ಅಸುರ ದೇವತೆಯೂ, ಸೃಷ್ಟಿಯಾದಿಯಾಗಿ ನಮ್ಮ ಇಂದ್ರೀಯಗಳಿಗೆ ನಿಯಾಮಕರಾಗಿದ್ದಾರೆ.

**ಮೊದಲ ನುಡಿಯಲ್ಲಿ**

ಶ್ರೀರಮಣಿಕರಕಮಲಪೂಜಿತ //

ಚಾರುಚರಣಸರೋಜ ಬ್ರಹ್ಮ ಸಮೀರವಾಣಿ ಫಣೀಂದ್ರ ವೀಂದ್ರ ಭವೇಂದ್ರ ಮುಖವಿನುತ //

ನೀರಜಭವಾಂಡೋದಯ ಸ್ಥಿತಿ / ಕಾರಣನೆ ಕೈವಲ್ಯ ದಾಯಕ //

ನಾರಸಿಂಹನೆ ನಮಿಪೆ ಕರುಣಿಪುದೆಮಗೆ ಮಂಗಳವಾ//

ಭಗವಂತನು ಕೊನೆಗೆ ಲಯ ನೀಡಿ ಮೋಕ್ಷ ನೀಡುವ ನರಸಿಂಹ ದೇವರನ್ನು ಮೊದಲು ಸ್ಮರಿಸಿದ್ದಾರೆ.

ಶ್ರೀಹರಿಯು ಬ್ರಹ್ಮ, ವಾಯುದೇವರು, ಸರಸ್ವತಿ, ಭಾರತಿದೇವಿಯರು, ಶೇಷ, ಗರುಡ, ರುದ್ರ, ಇಂದ್ರ ಮೊದಲಾದವರಿಂದ ಶೃತಿ, ಸ್ಮೃತಿ ಪುರಾಣಗಳಲ್ಲಿ ಹೇಳಿದಂತೆ ಸ್ತುತಿಸಲ್ಪಡುತ್ತಾನೆ. ಶ್ರೀಹರಿಯನ್ನು ಲಕ್ಷ್ಮಿ ತನ್ನ ಕರಗಳಿಂದ ಪೂಜೆ ಮಾಡುತ್ತಿದ್ದರೆ ಬ್ರಹ್ಮಾದಿದೇವತೆಗಳು ಸ್ತೋತ್ರ ಮಾಡುತ್ತಿರುತ್ತಾರೆ. ಇದೊಂದು ವಿಶಿಷ್ಟತ್ವ ಹೊಂದಿದೆ.

ಜಗುದದರನತಿ ವಿಮಲಗುಣರೂ/

ಪಗಳನಾಲೋಚನದಿ ಭಾರತ /

ನಿಗಮತತಿಗಳ ತಿಕ್ರಮಿಸಿ ಕ್ರಿಯಾವಿಶೇಷಗಳ//

ಬಗೆ ಬಗೆಯ ನೂತನವ ಕಾಣುತ//

ಮಿಗೆ ಹರುಷದಿಂ ಪೊಗಳಿ ಹಿಗ್ಗುವ/

ತ್ರಿಗುಣಮಾನಿ ಮಹಾಲಕುಮಿ ಸಂತೈಸಲನು ದಿನವು//

ಮೂಲ ಪ್ರಕೃತಿಗೆ ಅಭಿಮಾನ ದೇವತೆ ಲಕ್ಷ್ಮಿ.ಇವಳು ಪ್ರಕೃತಿಯಲ್ಲಿ

ಶ್ರೀ,ಭೂ,ದುರ್ಗಾರೂಪದಿಂದ ಸತ್ವ ರಜ ತಮೋ ಗುಣಗಳಿಗೆ ನಿಯಾಮಕ ಆಗಿದ್ದಾಳೆ. ಭಗವಂತನು ಜಗತ್ತನ್ನು ತನ್ನ ಉದರದಲ್ಲಿ ಇಟ್ಟು ಕೊಂಡವನು.ಪರಮಾತ್ಮನ ಅನಂತವಾದ ಗುಣಗಳನ್ನು ಕೊನೆಗಾಣದೆ ನಿತ್ಯ ವಿಶೇಷವಾಗಿ ಕಾಣುತ್ತಾ ಸ್ತುತಿಸುತ್ತಾಳೆ.

ಇನ್ನೂ ನಾಲ್ಕನೇ ನುಡಿಯಲ್ಲಿ ಬ್ರಹ್ಮದೇವರ ಸ್ತುತಿಸಿ, ವಾಯುದೇವರ ಸ್ಮರಣೆ ಮಾಡುತ್ತಾರೆ. ಏಕೆಂದರೆ ನಾವುಗಳು ಏನಾದರೂ ಒಂದು ಸೇವೆ ಮಾಡಿದರೆ ಹೇಳಿಕೊಳ್ಳುತ್ತೇವೆ ಅಥವಾ ಬೇಸರಿಸುತ್ತೇವೆ. ಆದರೆ ವಾಯುದೇವರು ಹೇಳಿ ಕೊಳ್ಳದೇ ಮತ್ತು ಬೇಸರಿಸದೇ ನಿತ್ಯ ಜೀವನದಲ್ಲಿ ವಾಯು ದೇವರು ಪ್ರತಿಯೊಬ್ಬನಲ್ಲಿ 21600 ಶ್ವಾಸ ಜಪ ಮಾಡುತ್ತಾ, ಬಿಂಬರೂಪಿ ಭಗವಂತನ ಸೇವೆ ಅನವರತ ಮಾಡುತ್ತಾರೆ. ಭಗವಂತ ವಾಯುದೇವರ ಮೂಲಕ ಸಾತ್ವಿಕರಿಗೆ ಸುಖ, ಮೋಕ್ಷವನ್ನು ಮತ್ತು ಮಿಶ್ರರಿಗೆ ಸುಖದುಃಖವನ್ನು ಅಧಮ ಜನರಿಗೆ ಅಪಾರವಾಗಿ ಕೊನೆಯಿಲ್ಲದ ದುಃಖವನ್ನು ಕೊಡುತ್ತಾನೆ.

ಹಾಗೇ ವೇದಗಳ ಸಮೂಹಕ್ಕೆ ಅಭಿಮಾನಿ ದೇವತೆಯಾದ ನಿರ್ಮಲ ಜ್ಞಾನವುಳ್ಳ ಸರಸ್ವತಿಯಲ್ಲಿ, ನಮಗೆ ಸನ್ಮತಿ ಕರುಣಿಸು ಎಂದಿದ್ದಾರೆ. ರುದ್ರದೇವರನ್ನು, ಇಂದ್ರನನ್ನು, ಋಷಿಗಳಿಗೆ ಪಿತೃಗಣ ನೆನೆದಿದ್ದಾರೆ. ಶ್ರೀಮದಆಚಾರ್ಯರ ಪಂಚಭೇದಾತ್ಮಕದಲ್ಲಿ ಅನಿರುದ್ಧಾದಿ ಪ್ರಪಂಚದಲ್ಲಿ ಭಗವಂತ ರೂಪಗಳನ್ನು ತಿಳಿಸಿದ್ದಾರೆ. ೨೫ ತತ್ವಗಳು, ೨೫ ರೂಪಗಳು ಹೇಳಿದ್ದಾರೆ. ನಂತರ ಸಕಲ ಯತಿಗಳ ಸಮೂಹ ಮತ್ತು ಕೊನೆ ನುಡಿಯಲ್ಲಿ...

ಪರಿಮಳವು ಸುಮನದೊಳಗನಲ

ನರಣಿಯೊಳಗಿಪ್ಪಂತೆ ದಾಮೋದರನು ಬ್ರಹ್ಮಾದಿಗಳ ಮನದಲಿ ತೋರಿ ತೋರದಲೆ//

ಇರುತಿಹ ಜಗನ್ನಾಥವಿಠಲನ ಕರುಣ

ಪಡೆವ ಮುಮುಕ್ಷು ಜೀವರು/

ಪರಮ ಭಾಗವತರನು ಕೊಂಡಾಡುವುದು ಪ್ರತಿದಿನವು//

ಅಂದರೆ ಹೂವಿನೊಳಗಿನ ಸುಗಂಧ ಆಗ್ರಾಣ ಮಾಡಿದಾಗಲೇ ಸುಗಂಧದ ಸತ್ಯ ಗೊತ್ತಾಗುವುದು, ಕಟ್ಟಿಗೆಯಲ್ಲಿ ಬೆಂಕಿಯಿದೆ. ಆದರೆ ಘರ್ಷಣೆಯಿಂದ ಕಾಣುವುದು.ಹಾಗೇ ಪ್ರತಿಯೊಬ್ಬ ಜೀವಿಯಲ್ಲಿಯೂ ಜ್ಞಾನ ಇರುತ್ತದೆ.

ಸದ್ಗ್ರಂಥ ಪಠಣೆ, ಭಗವದ್ಭಕ್ತರ ಸಂಗ ಪಾಠ, ಪ್ರವಚನ ಇದ್ದರೆ ಮಾತ್ರ ಭಗವಂತನ ದಯೆಯಿಂದ ಜ್ಞಾನೋದಯವಾಗಿ ಸಜ್ಜೀವಿಯಾಗುತ್ತಾನೆ.

ಮುಂದಿನ ಭಾಗದಲ್ಲಿ ಕರುಣಾಸಂಧಿ (ಶ್ರೀ ಹರಿಯ ಕರುಣೆ ಬಗ್ಗೆ)

(ಮುಂದುವರಿಯುವುದು...)



# ನಾಡಿಗೆ ದೊಡ್ಡ ಹಬ್ಬ ನಾಗರ ಪಂಚಮಿ

- ಕೃಪೆ

ಹಿಂದೂ ಧರ್ಮವು ಸತ್ಯವನ್ನು ಹುಡುಕುವುದರ ಸುತ್ತ ನೆಲೆಗೊಂಡಿರುವ ಒಂದು ನಂಬಿಕೆಯಿದೆ. ಎಲ್ಲರಿಗೂ ಜೀವನವನ್ನು ಮತ್ತು ಪ್ರಕೃತಿಯ ಶಕ್ತಿಗಳನ್ನು ಪೂಜಿಸುವ ಒಂದು ಮಾರ್ಗವಾಗಿ ಪ್ರಾಚೀನ ಕಾಲದಿಂದಲೂ ನಡೆದು ಬಂದಿದೆ. ಈ ಹಬ್ಬವನ್ನು ಇದೇ ಕಾಲದಲ್ಲಿ ಆಚರಿಸುವ ಕಾರಣವೆಂದರೆ ಮಳೆಗಾಲದಲ್ಲಿ ಹಾವಿನ ಬಿಲದಲ್ಲಿ ನೀರು ತುಂಬಿ ಅವುಗಳು ಹೊರಬರುವ ಕಾರಣ ಜನರಿಗೆ ಅಪಾಯ ಹೆಚ್ಚು, ಅದರಿಂದ ಅವುಗಳಿಂದ ರಕ್ಷಣೆಗಾಗಿ ಹಾವಿಗೆ ಪೂಜಿಸುವ ಪದ್ಧತಿ ಬಂದಿದೆ.

ನಾಗರ ಪಂಚಮಿ ಶ್ರಾವಣ ಮಾಸದ ಮೊದಲ ಹಬ್ಬವಾಗಿದೆ. ಇದನ್ನು ಶ್ರಾವಣಮಾಸದ ಶುಕ್ಲಪಕ್ಷ ಪಂಚಮಿಯಂದು ನಾಗರಪಂಚಮಿ, ಅದರ ಮೊದಲಿನ ದಿನ ಚೌತಿಯಂದು, ನಾಗರ ಚೌತಿಯನ್ನು ಆಚರಿಸುತ್ತಾರೆ. ಈ ದಿನದಂದು ನಾಗರ ದೇವತೆಗಳನ್ನು ಭಕ್ತಿ ಪೂರ್ವಕವಾಗಿ ಪೂಜಿಸಲಾಗುತ್ತದೆ. ಪೂಜೆಯ ಅಂಗವಾಗಿ ದೇವಸ್ಥಾನ, ಹಾಗೂ ಹುತ್ತಗಳಿಗೆ, ನಾಗರ ಕಲ್ಲುಗಳಿಗೆ ಪೂಜೆಸಲ್ಲಿಸುತ್ತಾರೆ. ನಾಗಪ್ಪ ನಿಂದ ರಕ್ಷೆ ಕೇಳಿ ಕೆಡಕುಗಳಿಂದ ತಮ್ಮನ್ನು ರಕ್ಷಿಸು ಎಂದು ಬೇಡಿಕೊಂಡು ಜನರು ಹಾಲನ್ನು ಹಾಕಿ ವಿವಿಧ ರೀತಿಯಿಂದ ಪೂಜಿಸುತ್ತಾರೆ. ಚೌತಿಯಂದು ಉಪವಾಸವಿದ್ದು ಅಂದು ಪೂಜೆಗೆ ಹಸಿ ಕಡಲೆ, ಹಸಿ ಚಿಗಳಿ,ತಂಬಿಟ್ಟನ್ನು ಉಪಯೋಗಿಸುವರು. ಅಣ್ಣ, ತಂಗಿಯರು ಇಬ್ಬರೂ ಸೇರಿ ಈ ಹಬ್ಬವನ್ನು ಆಚರಿಸುತ್ತಾರೆ. ಶಿವನ ಆರಾಧಕರಿಗೆ ನಾಗಪಂಚಮಿ ಅತೀ ಮುಖ್ಯವಾದ ಹಬ್ಬವಾಗಿದೆ. ಮರ, ಬಳ್ಳಿ ಕಲ್ಲು ಮತ್ತಿತರ ವಸ್ತುಗಳಿಂದ ಮಾಡಿದ ಹಾವಿನ ವಿಗ್ರಹಗಳಿಗೆ ಹಾಲಿನಿಂದ ಪೂಜಿಸುತ್ತಾರೆ. ಶೇಷನಾಗನ ಬೆಂಬಲದಿಂದ ಇಡೀ ಭೂಮಿ ಸಮ ತೋಲನದಲ್ಲಿದೆ ಎಂದು ನಂಬಲಾಗುತ್ತದೆ. ಚೌತಿ, ಪಂಚಮಿಯಂದು ನಾಗದೇವನನ್ನು ಪೂಜಿಸಿದರೆ ಅಪಾಯಕಾರಿ ಹಾವುಗಳಿಂದ ರಕ್ಷಣೆ ದೊರೆಯ ಅದೆ ಎಂಬ ನಂಬಿಕೆ ಜನರಲ್ಲಿದೆ.

**ನಾಗಪಂಚಮಿಯ ಕಥೆ :**

ಒಂದು ಊರಿನಲ್ಲಿ ಒಬ್ಬ ತಂಗಿ ಅವಳಿಗೆ ನಾಲ್ಕು ಜನ ಅಣ್ಣಂದಿರಿದ್ದರು.ಮನೆಯಲ್ಲಿ ನಾಗಪಂಚಮಿಯಂದು ಪೂಜೆ ತಯಾರಿಯಲ್ಲಿರುವಾಗ ನಾಗರಹಾವೊಂದು ಬಂದು ಕಚ್ಚಿ ನಾಲ್ಕು ಜನ ಸಹೋದರರನ್ನು ಬಲಿ ತೆಗೆದುಕೊಂಡಿತು. ಆಗ ತಂಗಿಯು ಸಹೋದರರಿಲ್ಲದೇ ನಾನು ಹೇಗೆ ಇರಲಿ ಒಬ್ಬ ಅಣ್ಣನನ್ನಾದರೂ ಬದುಕಿಸು ಎಂದು ನಾಗದೇವನನ್ನು ಪ್ರಾರ್ಥಿಸುತ್ತಾಳೆ. ಆಗ ನಾಗ ದೇವನು ಒಬ್ಬ ಅಣ್ಣನನ್ನು ರಕ್ಷಿಸುತ್ತಾನೆ, ನಂತರ ಅಣ್ಣತಂಗಿ ಸಂಭ್ರಮದಿಂದ ಹಬ್ಬವನ್ನು ಆಚರಿಸಿದರು.

**ಪುರಾಣ ಕಥೆ :**

ಜನಮೇಜಯ ರಾಜ ತನ್ನ ತಂದೆ ಪರೀಕ್ಷಿತನ ಸಾವಿಗೆ ಸರ್ಪವೇ ಕಾರಣವೆಂದು ತಿಳಿದು ಭೂಲೋಕದಲ್ಲಿ ಸರ್ಪಕುಲ ನಾಶಮಾಡಲು ಸರ್ಪಯಜ್ಞ ಮಾಡಲು ಹೊರಡುತ್ತಾನೆ. ಆದರೆ ಅದೇ ಸಂದರ್ಭದಲ್ಲಿ ಸರ್ಪಗಳಿಗೆ ದೂರ ಬಂಧುವಾದ ಆಸ್ತಿಕ

ಋಷಿಯು ಸರ್ಪ ಯಾಗ ಮಾಡುವ ಜನಮೇಜಯನನ್ನು ತನ್ನ ಒಳ್ಳೆಯ ಕಾರ್ಯದಿಂದ ಪ್ರಸನ್ನಗೊಳಿಸಿ ಸರ್ಪ ಯಾಗ ನಡೆಸದಿರಲು ವಿನಂತಿಸಿ ಕೊಳ್ಳುತ್ತಾನೆ. ಪ್ರಾಣಿಹಿಂಸೆ ಮಹಾಪಾಪವೆಂದು ತಿಳಿ ಹೇಳಿದಾಗ ಸರ್ಪಯಜ್ಞ ನಿಲ್ಲಿಸಿದ ದಿನ ನಾಗ ಪಂಚಮಿಯಾಗಿತ್ತು.

**ವೈಶಿಷ್ಟ್ಯ:**

ನಾಗಪಂಚಮಿ ಸಾತ್ವಿಕತೆ ಗ್ರಹಿಸಲು ಉಪಯುಕ್ತ ಕಾಲ. ಪಂಚಪ್ರಾಣಿಗಳೇ ಪಂಚನಾಗಗಳಾಗಿವೆ. ನಾಗರಪಂಚಮಿ ದಿನದಂದು ವಾತಾವರಣವು ಸ್ಥಿರವಾಗಿರುತ್ತದೆ. ಸಾತ್ವಿಕತೆಯನ್ನು ಗ್ರಹಿಸಲು ಇದು ಯೋಗ್ಯ ಉಪಯುಕ್ತ ಕಾಲವಾಗಿದೆ.

**ಚೌತಿಯ ಉಪವಾಸದ ಮಹತ್ವ :**

ಐದು ಯುಗದ ಹಿಂದೆ ಸತ್ಯೇಶ್ವರಿ ಎಂಬ ದೇವತೆ ಅವಳಿಗೆ ಒಬ್ಬ ಸಹೋದರನಿದ್ದನು. ಸತ್ಯೇಶ್ವರನು ಚೌತಿಯಂದು ಮರಣ ಹೊಂದಿದನು. ಆ ಸಹೋದರನ ಸಾವಿಗೆ ಸತ್ಯೇಶ್ವರಿಯು ಉಪವಾಸವಿದ್ದು ಸತ್ಯೇಶ್ವರನು ನಾಗರೂಪದಲ್ಲಿ ಸಹೋದರಿಗೆ ಕಾಣಲು ಅವಳು ಉಪವಾಸದಿಂದ ನಾಗ ದೇವನ ಪೂಜೆ ಮಾಡಲಾಗಿ ನಾಗದೇವನು

**ಶ್ರಾವಣಮಾಸದ ಶುಕ್ಲಪಕ್ಷ ಪಂಚಮಿಯಂದು ನಾಗರಪಂಚಮಿ. ಈ ದಿನದಂದು ನಾಗರ ದೇವತೆಗಳನ್ನು ಭಕ್ತಿ ಪೂರ್ವಕವಾಗಿ ಪೂಜಿಸಲಾಗುತ್ತದೆ. ಪೂಜೆಯ ಅಂಗವಾಗಿ ದೇವಸ್ಥಾನ, ಹಾಗೂ ಹುತ್ತಗಳಿಗೆ, ನಾಗರ ಕಲ್ಲುಗಳಿಗೆ ಪೂಜೆ ಸಲ್ಲಿಸುತ್ತಾರೆ. ನಾಗಪ್ಪನಿಂದ ರಕ್ಷೆ ಕೇಳಿ ಕೆಡಕುಗಳಿಂದ ತಮ್ಮನ್ನು ರಕ್ಷಿಸು ಎಂದು ಬೇಡಿಕೊಂಡು ಜನರು ಹಾಲನ್ನು ಹಾಕಿ ವಿವಿಧ ರೀತಿಯಿಂದ ಪೂಜಿಸುತ್ತಾರೆ.**



ಸಹೋದರನ ರೂಪದಲ್ಲಿ ನಿನಗೆ ಸಹಾಯ ಮಾಡುವೆನೆಂದು ಅವಳಿಗೆ ವಚನ ನೀಡುವುದರಿಂದ ಅಂದಿನ ದಿನ ಸ್ತ್ರೀಯರು ಚೌತಿಯ ಉಪವಾಸ ಮಾಡಿ ಅಂದು ಮತ್ತು ನಾಗ ಪಂಚಮಿಯಂದು ತನಿ ಎರೆಯುತ್ತಾರೆ.

ಉತ್ತರ ಕರ್ನಾಟಕದಲ್ಲಿ ಅಣ್ಣ ತಂಗಿಯ ಹಬ್ಬವನ್ನಾಗಿ ಅನೇಕ ತರಹದ ಉಂಡೆ ಮಾಡಿ ಪೂಜಿಸುವುದಲ್ಲದೇ ತವರಿನಿಂದ ಹೆಣ್ಣುಮಕ್ಕಳನ್ನು ಸಹೋದರನು ಕರೆ ತಂದು ಹಬ್ಬ ಆಚರಿಸುತ್ತಾರೆ. ಜೋಕಾಲಿ ಕಟ್ಟಿ ಜೀಕಿ ಸ್ಪರ್ಧೆ ಏರ್ಪಡಿಸಿ ಆಡುತ್ತಾರೆ. ಅದೇ ರೀತಿ ಈ ವರ್ಷವೂ ನಾಗಪಂಚಮಿ ಚೌತಿಯ ತನಿಎರೆದು ಪಂಚಮಿ ಹಬ್ಬವಾಚರಿಸಿ ಪ್ರಾಣಿ ರಕ್ಷಣೆಗೆ ಮಹತ್ವ ನೀಡೋಣ.




## ಹೆಲ್ಮೆಟ್ ತಪ್ಪದೇ ಧರಿಸಬೇಕು



**ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.**

**ಹೆಲ್ಮೆಟ್ ಧರಿಸಿ ವಾಹನ ನಡೆಸಿ**

ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕಿನ ನೊಣವಿನಕೆರೆಯು ತಿಪಟೂರಿನಿಂದ ಸುಮಾರು 13 ಕಿ.ಮೀ. ದೂರದಲ್ಲಿ ಹಾಗೂ ತುರುವೇಕೆರೆಯಿಂದ ಸುಮಾರು 12 ಕಿ.ಮೀ. ದೂರದಲ್ಲಿರುವ ಗ್ರಾಮ. ನೊಣವಿನಕೆರೆಯಲ್ಲಿರುವ ಬೃಹತ್ ಕೆರೆಯಿಂದ ಪ್ರಸ್ತುತ ಗ್ರಾಮಕ್ಕೆ ನೊಣವಿನಕೆರೆಯೆಂದು ಹೆಸರು ಬಂದಿದೆ. ಇಲ್ಲಿರುವ ದೊಡ್ಡ ಕೆರೆಯನ್ನು ನೊಳಂಬ ರಾಜನಿಂದ ನಿರ್ಮಿತವಾಗಿದ್ದು ನೊಣಂಬನ ಕೆರೆಯೆಂಬ ಹೆಸರು ನಂತರ ನೊಣವಿನಕೆರೆಯಾಗಿದೆ. ಇದಕ್ಕೆ ಪೂರಕವಾಗಿ ನೊಳಂಬ ವಾಸ್ತು ಶಿಲ್ಪದಿಂದ ಕೂಡಿದ 9-10 ನೇ ಶತಮಾನಕ್ಕೆ ಸೇರುವ ಪಂಚಶಿವನ ದೇವಾಲಯಗಳಿವೆ. ಕರ್ನಾಟಕ ವಾಸ್ತುಶಿಲ್ಪ ಹಾಗೂ ಮೂರ್ತಿಶಿಲ್ಪಗಳ ಸಾಮ್ರಾಜ್ಯಕ್ಕೆ ನೊಳಂಬ ಅರಸರ ಕೊಡುಗೆ ಅಮೂಲ್ಯವಾದುದು. ಪ್ರಸ್ತುತ ಅನಂತಪುರ ಜಿಲ್ಲೆಯ ಮಡಕಶಿರಾ ತಾಲ್ಲೂಕಿನ ಹೆಂಜೇರು (ಹೇಮಾವತಿ)ಯನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದ ಪಲ್ಲವರ ಒಂದು ಶಾಖೆಯಾದ ನೊಳಂಬರು ಹೇಮಾವತಿ, ಅರಳಗುಪ್ಪೆ, ನೊಣವಿನಕೆರೆ, ತಂಡಗ, ಬರಗೂರು, ಆವನಿ, ನಂದಿ, ಧರ್ಮಪುರಿ ಮುಂತಾದ ಕಡೆ ನಿರ್ಮಿಸಿರುವ ದೇವಾಲಯಗಳು ಈಗಲೂ ನೋಡಲು ಲಭ್ಯವಿವೆ. ನೊಳಂಬರ ದೇವಾಲಯಗಳು ಸರಳವಾಗಿದ್ದರೂ ಅದರಲ್ಲಿರುವ ಮೂರ್ತಿಶಿಲ್ಪಗಳು ಬಹಳ ಸತ್ವಯುತವಾಗಿರುತ್ತವೆ. ವಿಶ್ವವಿಖ್ಯಾತವಾದ ಅರಳು ಗುಪ್ಪೆಯ ನೊಳಂಬ ನಟರಾಜ, ಉಮಾಮಹೇಶ್ವರ, ಹೇಮಾವತಿಯ ದೊಡ್ಡೇಶ್ವರ ದೇವಾಲಯ ಹಾಗೂ ಸಿದ್ದೇಶ್ವರ ದೇವಾಲಯಗಳ ಮೂರ್ತಿ ಶಿಲ್ಪಗಳು ಬಹಳ ಮನೋಹರವಾಗಿವೆ.

ನೊಣವಿನಕೆರೆಯಲ್ಲಿ ಐದು ಶಿವ ದೇವಾಲಯಗಳು, ಶ್ರೀವೇಣುಗೋಪಾಲಸ್ವಾಮಿ ದೇವಾಲಯ, ಶ್ರೀಬೇಟೆರಾಯ ಸ್ವಾಮಿ ದೇವಾಲಯ ಮುಂತಾದ ದೇವಾಲಯಗಳಿವೆ.

**ವೇಣುಗೋಪಾಲ ಸ್ವಾಮಿ ದೇವಾಲಯ:**

ನೊಣವಿನಕೆರೆಯಲ್ಲಿರುವ ಪ್ರಮುಖ ದೇವಾಲಯವು ಶ್ರೀವೇಣುಗೋಪಾಲಸ್ವಾಮಿ ದೇವಾಲಯವಾಗಿರುವುದು. ದೇವಾಲಯವು ಊರಿನ ನಡುವೆ ಇದ್ದು ಇದು ಮೂಲತಃ ಹೊಯ್ಸಳರ ಕಾಲದ ತ್ರಿಕೂಟಾಚಲ ದೇವಾಲಯವಾಗಿದೆ. ದೇವಾಲಯದ



# ನೊಣವಿನಕೆರೆಯ ಸುಂದರ ದೇವಾಲಯಗಳು

- ಕೆಂಗೇರಿ ಚಕ್ರಪ್ರಾಣಿ
94483 86886

ನವರಂಗದ ಮುಂದೆ ವಿಜಯನಗರ ಅರಸರ ಕಾಲದ ಮುಖ ಮಂಟಪವನ್ನು ಸೇರಿಸಲಾಗಿದೆ. ದೇವಾಲ ಯಕ್ಕೆ ಸುಂದರ ವಾದ ಪ್ರವೇಶದ್ವಾರವಿದ್ದು ಅಂದವಾದ ರಾಜ ಗೋಪುರವಿದೆ. ಮೂರು ಗರ್ಭಗುಡಿಗಳನ್ನು ಹೊಂದಿರುವ ಈ ದೇವಾಲಯದಲ್ಲಿ ಮೂಲ ಗರ್ಭಗುಡಿಯಲ್ಲಿ ಜನಾರ್ದನನ ಸೊಗಸಾದ ಶಿಲ್ಪವಿದೆ (ಜನಾರ್ದನ - ಚಕ್ರ , ಶಂಖ, ಗದಾ, ಪದ್ಮ) ಉತ್ತರ ಗರ್ಭಗುಡಿ ಯಲ್ಲಿ ಯೋಗಾನರಸಿಂಹ ಹಾಗೂ ದಕ್ಷಿಣ ಗರ್ಭಗುಡಿಯಲ್ಲಿ ಕೊಳಲುಗೋಪಾಲಕೃಷ್ಣನ ಆಕರ್ಷಕ ಮೂರ್ತಿಗಳಿವೆ. ಯೋಗಾನರಸಿಂಹನ ಮೂರ್ತಿಯು ಯೋಗ ಪಟ್ಟಿಯನ್ನು ಹಾಕಿಕೊಂಡು ಕುಳಿತಿದ್ದು, ಪ್ರಭಾವಳಿ ಯಲ್ಲಿ ದಶಾವತಾರದ ಶಿಲ್ಪಗಳಿವೆ. ವೇಣುಗೋಪಾಲ ಸ್ವಾಮಿಯು ಸುಮಾರು 5 ಅಡಿ ಗಳಷ್ಟು ಎತ್ತರವಿದ್ದು ಸೂಕ್ಷ್ಮ ಕೆತ್ತನೆಗಳಿಂದ ಅಲಂಕೃತ ಗೊಂಡಿದ್ದು ತ್ರಿಭಂಗಿಯಲ್ಲಿದೆ. ಕೊಳಲು ನುಡಿಸುತ್ತಿರುವ ಗೋಪಾಲನ ಮುರಳಿಯ ನಾದಕ್ಕೆ ಮನಸೋತು ತಲ್ಲೀನ ರಾಗಿರುವ ಗೋಪಾಲಕರು ಹಾಗೂ ಗೋವುಗಳ ಶಿಲ್ಪಗಳನ್ನು ದೇವನ ಸುತ್ತಲೂ ಚಿತ್ರಿಸಲಾಗಿದೆ. ಈ ಮೂರು ಗರ್ಭಗುಡಿ ಗಳನ್ನು ಸೇರಿಸುವ ನವರಂಗದಲ್ಲಿ ನಾಲ್ಕು ಕಂಬಗಳಿದ್ದು ಹೊಯ್ಸಳರ ಶೈಲಿಯಲ್ಲಿ ತಿರುಗಣೆಗಳಿಂದ ತಯಾರಿಸಲಾಗಿದೆ. ನವರಂಗದ ಮಧ್ಯದ ಭುವನೇಶ್ವರಿಯು ಪದ್ಮದಿಂದ ಕೂಡಿದೆ. ಈ ದೇವಾಲಯದ ಮತ್ತೊಂದು ಆಕ ರ್ಷಣೆ ಇಲ್ಲಿರುವ ಉತ್ಸವ ಮೂರ್ತಿಗಳು,ಶ್ರೀದೇವಿ,ಭೂದೇವಿ ಸಹಿತವಿರುವ ಜನಾರ್ದನನ ಮೂರ್ತಿ ನೋಡಲು ಬಹಳ ಸುಂದರವಾಗಿವೆ. ನೊಣವಿನ ಕೆರೆಯ ವೇಣುಗೋಪಾಲಸ್ವಾಮಿಯ ಬ್ರಹ್ಮ ರಥೋತ್ಸವವು ಚೈತ್ರ-ವೈಶಾಖ ಮಾಸದಲ್ಲಿ (ಏಪ್ರಿಲ್-ಮೇ ತಿಂಗಳು) ಮೃಗಶಿರಾ ನಕ್ಷತ್ರ ಬರುವ ದಿನದಿಂದ ಆರಂಭಗೊಂಡು ಪಾಂಚರಾತ್ರಾ ಗಮ ರೀತ್ಯಾ ಒಂಬತ್ತು ದಿನ ಬಹಳ ಅದ್ದೂರಿಯಾಗಿ ನೆರವೇರು ತ್ತದೆ.

ಚರಮೂರ್ತಿಯಾದ ಶ್ರೀದೇವಿ-ಭೂದೇವಿ ಸಹಿತ ಜನಾರ್ದನನನ್ನು ವಿಶೇಷವಾಗಿ ಪುಷ್ಪಮಾಲೆಗಳಿಂದ ಅಲಂಕ ರಿಸಲಾಗುತ್ತದೆ. ಮೊದಲ ದಿನ ಉತ್ಸವ ಮಂಟಪಕ್ಕೆ ಗರುಡ ಪಟವನ್ನು ಕಟ್ಟುವ ಮೂಲಕ ಉತ್ಸವದ ಅಂಕುರಾರ್ಪಣೆ ಯಾಗುತ್ತದೆ. ನಂತರ ಅವಭೃತ, ಸ್ನಾನ, ನಂತರದ ದಿನಗಳಲ್ಲಿ ಕ್ರಮವಾಗಿ ಚಂದ್ರಮಂಡಲ ರಥೋತ್ಸವ, ಶೇಷವಾಹನೋ ತ್ಸವ,ಕಲ್ಯಾಣೋತ್ಸವ,ವೈರಮುಡಿ ಉತ್ಸವ, ಬಣ್ಣದ ಗರು ಡೋತ್ಸವ ಹಿತ್ತಾಳೆ ಗರುಡೋತ್ಸವ, ಪಲ್ಲಕ್ಕಿ ಉತ್ಸವ ಗಜೇಂದ್ರ ಮೋಕ್ಷೋತ್ಸವ,ಗಜವಾಹನೋತ್ಸವ, ಸಿಂಹವಾಹನೋತ್ಸವ, ಕೊನೆಯ ದಿನ ಅಶ್ವವಾಹನೋತ್ಸವ ಹಾಗೂ ಅಂಜನೇಯ ಉತ್ಸವ ಮುಂತಾದ ಕಾರ್ಯಕ್ರಮಗಳು ಬಹಳ ಪಾಂಗಿತವಾಗಿ ನೆರವೇರುವುದು.

ರಥೋತ್ಸವ ಆರಂಭವಾದ ದಿನದಿಂದ ಏಳನೆಯ ದಿನ ಬ್ರಹ್ಮರಥೋತ್ಸವವು ಬಹಳ ವಿಶೇಷವಾಗಿ ನೆರವೇರುವುದು. ಜನಾರ್ದನ ಸ್ವಾಮಿಗೆ ಬೆಂಗಳೂರು, ಮೈಸೂರು, ತುಮಕೂರು, ಹಾಸನ, ಮಂಡ್ಯ ಮುಂತಾದ ಕಡೆಗಳಲ್ಲಿ ಮನೆಒಕ್ಕಲುಗಳಿದ್ದು, ಆ ಶುಭದಿನ ಸಾವಿರಾರು ಭಕ್ತರ ಸಮ್ಮುಖದಲ್ಲಿ ವೈಭವದ ರಥೋ ತ್ಸವ ಜರುಗುತ್ತದೆ. ಉತ್ಸವ ಮಂಟಪದ ಗರುಡಪಟ ತೆಗೆಯು ವುದು ಹಾಗೂ ಧ್ವಜ ಅವರೋಹಣದ ಮೂಲಕ ಒಂಬತ್ತು ದಿನಗಳ ವೈಭವದ ಉತ್ಸವಕ್ಕೆ ತೆರೆ ಬೀಳುತ್ತದೆ. ಶ್ರೀವೇಣುಗೋಪಾಲ ಸ್ವಾಮಿಗೆ ಗೋಕುಲಾಷ್ಟಮಿಯಂದು ವಿಶೇಷ ಬೆಣ್ಣೆ ಅಲಂಕಾರ ಮಾಡಲಾಗುತ್ತದೆ. ಆ ದಿನ ಸಂಜೆ ಉತ್ಸವ ಮೂರ್ತಿಗೆ ಭಕ್ಷ್ಯಗ ಳಿಂದ ಅಲಂಕರಿಸಲಾಗುತ್ತದೆ ಹಾಗೂ ನರಸಿಂಹ ಜಯಂತಿಯ ದಿನ ಶ್ರೀಯೋಗಾನರಸಿಂಹ ಸ್ವಾಮಿಗೆ ಪಂಚಾಮೃತ ಅಭಿಷೇಕ ಹಾಗೂ ಪೂಜಾ ಕೈಂಕರ್ಯಗಳು ಬಹುಪಾಂಗಿತವಾಗಿ ನೆರ ವೇರುತ್ತದೆ. ನವರಾತ್ರಿಯ ಒಂಬತ್ತು ದಿನಗಳು ವಿಶೇಷ ಅಲಂಕಾ ರಗಳು, ಆಳ್ವಾರರ ತಿರುನಕ್ಷತ್ರ, ಸಂಕ್ರಾಂತಿ ಉತ್ಸವ ಹಾಗೂ ಬೌದ್ಧ ಪೌರ್ಣಮಿಯ ದಿನ ವಸಂತೋತ್ಸವಗಳು ಬಹುಪಾಂಗಿತ ವಾಗಿ ನೆರವೇರುವುದು.

ಈ ದೇವಾಲಯವನ್ನು ಕ್ರಿ.ಶ 1998 ರಲ್ಲಿ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ತಾನ ಟ್ರಸ್ಟ್, ಸ್ಥಳೀಯ ಭಕ್ತರು ಹಾಗೂ ಅಮ್ಮಸಂದ್ರ ಸಿಮೆಂಟ್ ಕಾರ್ಖಾನೆಯ ಮಾಲೀಕರುಗಳ ಸಹಕಾರದಿಂದ ಮೂಲ ಸ್ವರೂಪಕ್ಕೆ ಧಕ್ಕೆ ಬಾರದಂತೆ ಜೀರ್ಣೋ ದ್ಧಾರ ಮಾಡಲಾಗಿದೆ.

**ಬೇಟೆರಾಯಸ್ವಾಮಿ ದೇವಾಲಯ :**

ನೊಣವಿನಕೆರೆಯಲ್ಲಿ ಮತ್ತೊಂದು ಪ್ರಮುಖ ದೇವಾಲಯ ಈ ದೇವಾಲಯವೂ ಸಹ ಊರಿನ ನಡುವೆ ಇದ್ದು ಬಹಳ ಭಕ್ತ ರನ್ನು ಹೊಂದಿದೆ. ವಿಜಯನಗರ ಅರಸರ ಕಾಲಕ್ಕೆ ಸೇರುವ ಈ ದೇವಾಲಯವು ಕೊನೇರಿ ಅಯ್ಯಂಗಾರ್ ಎಂಬುವವರಿಂದ ನಿರ್ಮಿತವಾಗಿದೆ. ಈ ದೇವಾಲಯದ ನವರಂಗದ ಕಂಬದ





ಮೇಲೆ ಗಡ್ಡ ಬಿಟ್ಟು ಟೋಪಿ ಧರಸಿ ಕೈಮುಗಿದು ನಿಂತಿರುವ ಪುರುಷನ ವಿಗ್ರಹ ವನ್ನು ಈ ದೇವಾಲಯದ ಸ್ಥಾಪಕರಾದ ಕೊನೇರಿ ಅಯ್ಯಂಗಾರ್‌ರ ಶಿಲ್ಪ ವೆಂದು ಗುರುತಿಸಲಾಗಿದೆ. ದೇವಾಲಯವು ಗರ್ಭಗೃಹ ಅಂತರಾಳ, ನವ ರಂಗ, ಮುಖ ಮಂಟಪಗಳನ್ನು ಹೊಂದಿರುವ ಬೃಹತ್ ರಚನೆಯಾಗಿದೆ. ಗರ್ಭ ಗುಡಿಯಲ್ಲಿ ಬೇಟೆರಾಯಸ್ವಾಮಿ ಎಂದು ಕರೆಯುವ ಸುಂದರವಾದ ವೆಂಕ ಟೇಶ್ವರನ ಶಿಲ್ಪವಿದೆ. ಈ ದೇವಾಲಯದಲ್ಲಿ ಅಲಮೇಲುಮಂಗಮ್ಮ ದೇವಿ, ಸುದ ರ್ಶನ ಆಳ್ವಾರುಗಳ ಮೂರ್ತಿಗಳೂ ಸಹ ಇದೆ. ನವರಂಗದ ಒಂದು ಸ್ತಂಭದ ಮೇಲೆ ಪತ್ನಿ ಸಹಿತನಾಗಿರುವ ವಿಜಯನಗರದ ದೊರೆ ಶ್ರೀಕೃಷ್ಣ ದೇವ ರಾಯನ ಶಿಲ್ಪವಿದೆ.

ನೊಣವಿನಕೆರೆಯ ಬೇಟೆರಾಯಸ್ವಾಮಿ ಬ್ರಹ್ಮ ರಥೋತ್ಸವವು ಯುಗಾದಿಯಾಗಿ 20 ದಿನಗಳ ನಂತರ ಬರುವ ಶ್ರವಣ ನಕ್ಷತ್ರದಲ್ಲಿ ಪಾಂಚ ರಾತ್ರಾಗಮ ರೀತ್ಯಾ ಬಹು ವೈಭವದಿಂದ ನಡೆಯುವುದು. ಧ್ವಜಾರೋಹಣ ದೊಂದಿಗೆ ಪ್ರಾರಂಭವಾಗುವ ಸ್ವಾಮಿಯ ರಥೋತ್ಸವದಲ್ಲಿ ಚಂದ್ರಮಂಡಲ ರಥೋತ್ಸವ, ಶೇಷವಾಹನೋತ್ಸವ, ಕಲ್ಯಾಣೋತ್ಸವ, ವೈರಮುಡಿಉತ್ಸವ, ಗರುಡೋತ್ಸವ, ಗಜೇಂದ್ರಮೋಕ್ಷ, ಪಲ್ಲಕ್ಕಿ ಉತ್ಸವ, ಕುದುರೆಉತ್ಸವ, ಕೊನೆ ಯದಾಗಿ ಆಂಜನೇಯ ಉತ್ಸವ ಮುಂತಾದ ಉತ್ಸವಗಳು ಬಹು ಶಿಸ್ತುಬದ್ಧ ವಾಗಿ ನೆರವೇರುವುದು.ಕೊನೆಯ ದಿನ ಧ್ವಜ ಅವರೋಹಣದೊಂದಿಗೆ ಅದ್ದೂರಿಯ ರಥೋತ್ಸವವು ಮುಕ್ತಾಯವಾಗುವುದು.ಮಾಘ ಶುದ್ಧ ರಥಸಪ್ತ ಮಿಯಲ್ಲಿ ಬೇಟೆರಾಯಸ್ವಾಮಿಗೆ ವಿಶೇಷ ತೇರು ಹಾಗೂ ಅದಕ್ಕೆ ಎರಡು ದಿನ ಮುಂಚೆ ಗರುಡೋತ್ಸವ, ಶೇಷವಾಹನೋತ್ಸವ ಹಾಗೂ ಆಂಜನೇಯ ಉತ್ಸವ ಗಳು ವಿಶೇಷವಾಗಿ ಜರುಗುವುವು. ಪ್ರತಿ ಪೌರ್ಣಮಿಯ ದಿನ ಸತ್ಯ ನಾರಾಯಣ ಪೂಜೆಯೂ ಸಹ ನೆರವೇರುವುದು. ಅಲ್ಲದೆ ವೈಕುಂಠ ಏಕಾದಶಿಯಂದು ಸ್ವಾಮಿಗೆ ವಿಶೇಷ ದಿನ. ಬೆಳಗ್ಗೆ ನಾಲ್ಕು ಗಂಟೆಯಿಂದಲೇ ಆರಂಭವಾ ಗುವ ಪೂಜಾ ಕೈಂಕರ್ಯಗಳು ಬಹು ಪಾಂಗಿತವಾಗಿ ನೆರವೇರುವುದು. ವೈಕುಂಠ ದ್ವಾರದ ಮುಖೇನ ಸ್ವಾಮಿಯ ದರ್ಶನವನ್ನು ಸಾವಿರಾರು ಭಕ್ತಾದಿಗಳು ಆಗಮಿಸಿ ಬೇಟೆರಾಯಸ್ವಾಮಿಯ ಕೃಪಾಶೀರ್ವಾದಕ್ಕೆ ಪಾತ್ರರಾಗುವರು.

**ಹೀಗೆ ಬನ್ನಿ:**

ನೊಣವಿನಕೆರೆಯು ತುರುವೇಕೆರೆ - ತಿಪಟೂರು ರಸ್ತೆಯಲ್ಲಿದೆ. ಬೆಂಗ ಳೂರಿನಿಂದ ಬರುವ ಪ್ರವಾಸಿಗರು ಬೆಂಗಳೂರು-ಕುಣಿಗಲ್, ಯಡಿಯೂರು- ತುರುವೇಕೆರೆ ಕ್ರಾಸ್, ತುರುವೇಕೆರೆ, ನಂತರ ತಿಪಟೂರು ರಸ್ತೆಯನ್ನು ಸೇರಿ ನೊಣವಿನಕೆರೆಯನ್ನು ಸೇರಬಹುದು.(ತುರುವೇಕೆರೆಯಿಂದ ನೊಣವಿನ ಕೆರೆಯು ಸುಮಾರು 12 ಕಿ.ಮೀ. ದೂರವಿರುತ್ತದೆ ಹಾಗೂ ತಿಪಟೂರಿನಿಂದ 13 ಕಿ.ಮೀ. ದೂರದಲ್ಲಿರುತ್ತದೆ.





ಧಾರಾವಾಹಿ

# ಶ್ರೀ ವೇಂಕಟೇಶ್ವರಸ್ವಾಮಿ ಆಲಯ

- ಇಂಗ್ಲೀಷ್ ಮೂಲ : ಡಾ॥ ಎನ್.ರಮೇಶನ್

- ಕನ್ನಡಾನುವಾದ : ದಿ॥ ಬಿ.ಎನ್. ಶ್ರೀನಿವಾಸನ್

## ಪ್ರಾಚೀನ ಕಾಲದ ಸಾಹಿತ್ಯದಲ್ಲಿ ಶ್ರೀವೆಂಕಟೇಶ್ವರಸ್ವಾಮಿ ಆಲಯ (ಕ್ರಿ.ಶ. ಮೊದಲ ಶತಮಾನದಿಂದ 9ನೇ ಶತಮಾನದವರೆಗೆ)

### ಸಾಹಿತ್ಯಾಧಾರದಲ್ಲಿನ ಪ್ರಾಚೀನಕಾಲ

ಪ್ರಾಚೀನ ತಮಿಳು ಸಾಹಿತ್ಯದಲ್ಲಿ ತಿರುಮಲೆಯ ಪವಿತ್ರ ದೇವಾಲಯವನ್ನು ವೆಂಗಡಮ್ ಎಂಬ ಹೆಸರಿನಿಂದ ಗುರುತಿಸಲಾಗಿದೆ. ಇದು ಸಾಧಾರಣವಾಗಿ ಬೆಟ್ಟಕ್ಕೆಂದೇ ಗುರುತಾದರೂ, ಬಹುಪಾಲು ಈ ಬೆಟ್ಟದ ಆಸುಪಾಸಿಗೂ ಅನ್ವಯವಾಗಿದೆ. ಪ್ರಾಚೀನ ತಮಿಳು ಸಾಹಿತ್ಯದಲ್ಲಿ ವೆಂಗಡ ಅಥವಾ ವಡವೆಂಗಡವೆಂಬುದು, ತಮಿಳು ಮಾತನ್ನು ಆಡುವ ಜನಪ್ರದೇಶದ ಉತ್ತರದ ಗಡಿ ಎನ್ನಲಾಗಿತ್ತು. ತಮಿಳು ಸಾಹಿತ್ಯದಲ್ಲಿ ತಮಿಳು ಮಾತನಾಡುವ ಜನ ಉತ್ತರದಲ್ಲಿ ವೆಂಗಡದಿಂದ ದಕ್ಷಿಣಕ್ಕೆ ಕುಮಾರಿ (ಕನ್ಯಾಕುಮಾರಿ)ವರೆಗೆ ಪೂರ್ವ ಪಶ್ಚಿಮಗಳಲ್ಲಿನ ಸಮುದ್ರಗಳ ನಡುವೆಯ ಭೂಭಾಗದವರೆಂದು ಗುರುತಿಸಿದೆ. ಹೀಗಾಗಿ ಬಹು ಹಿಂದಿನ ಕಾಲದಲ್ಲಿಯೇ ತಮಿಳು ಮಾತ ನಾಡುವ ಜನ ತಮಿಳರಲ್ಲದ ಜನವನ್ನು ಸೇರಲು ವೆಂಗಡವನ್ನು ದಾಟಿ ಹೋಗಬೇಕಾಗಿದ್ದಿತು.

ವೆಂಗಡದ ಉತ್ತರಕ್ಕೆ ಇದ್ದ ಜನರು ವಡುಕು ಭಾಷಿಗರೆಂದು ತಮಿಳಿನ ಪ್ರಾಚೀನ ಸಾಹಿತ್ಯಕ್ಕೆ ತಿಳಿದಿದ್ದು,ಈ ಭೂಭಾಗದ ರಾಜಕುಮಾರರನ್ನು ವಡುಕು ರಾಜಕುಮಾರರೆಂದು (ವಡುಕರ್ ಪೆರುಮಗನ್) ಎಂದು ಗುರುತಿಸಿದ್ದರು. ಕಡೇ ಪಕ್ಷ ಒಬ್ಬನಾದರೂ ವಡುಕು ಪೆರುಮಗನ್ ಎಂದು ಕರೆಸಿಕೊಂಡದ್ದು ಕಂಡುಬರುತ್ತದೆ. ಅದರಂತೆ ಎರುಮೈ ಎಂಬ ಈತ ಈಗಣ ಉತ್ತರ ಮೈಸೂರು ಮತ್ತದರ ಹಲಭಾಗಗಳನ್ನು ಆಳಿರಬೇಕೆಂದು ಈ ಉಲ್ಲೇಖವಿರುವ ಸಂದರ್ಭ ಸೂಚಿಸುತ್ತದೆ.ವಡುಗರನಾಡಿಗೆ ಸೇರುವ ರಸ್ತೆಯನ್ನು ವಡಗೂರ್‌ಮುನ್ನೈ ಎಂದು ತಮಿಳು ಸಾಹಿತ್ಯ ಸೂಚಿಸುವುದು. ಇದು ವಡಗುನಾಡಿನ ರಾಜಮಾರ್ಗದಲ್ಲಿನ ತಮಿಳು ಪ್ರಾಂತ್ಯದ ಹೊರ ಉಕ್ಕಡವಾಗಿರಬೇಕು.

ಪ್ರಾಚೀನ ತಮಿಳು ವ್ಯಾಕರಣ ತೋಲ್‌ಕಾಪ್ಪಿಯಂ ಪ್ರಕಾರ ವೆಂಗಡಂ ಎಂಬುದು ಬೆಟ್ಟದ ಹೆಸರು. ಸಂಗಂ ಕಾಲದ ಕವಿ ಮಾಮೂಲನಾರನೂ ಬೆಟ್ಟವನ್ನು ಇದೇ ಹೆಸರಿನಿಂದ ಗುರುತಿಸಿದ್ದಾನೆ. ಮಾಮೂಲ ನಾರನು ಬೆಟ್ಟದ ಮೇಲಿನ ಉತ್ಸವ ಜಾತ್ರೆಗಳನ್ನು ಹೆಸರಿಸುತ್ತಾನೆ. ಇದರಿಂದಾಗಿ ಇಲ್ಲಿ ಒಂದು ಆಲಯ ಇದ್ದಿರಬೇಕು.ಇಲ್ಲಿ ತೋಲ್‌ಕಾಪ್ಪಿಯವಾಗಲೀ, ಮಾಮೂಲನಾರನಾಗಲೀ, ಆಲಯದ ಹೆಸರನ್ನಾಗಲೀ ತಿರುವೆಂಗಡ ಮುಡೈಯಾನ್‌ನನ್ನಾಗಲಿ ಅಥವಾ ಈ ಹೆಸರಿನ ಯಾವುದೇ ಪರ್ಯಾಯ ಹೆಸರನ್ನಾಗಲೀ ಅಥವಾ ಇನ್ನಾವುದೇ ದೇವರ ಯಾವ ಹೆಸರನ್ನಾಗಲೀ ತಿಳಿಸುವುದಿಲ್ಲ.ಆದರೆ ತಮಿಳಿನ ಮತ್ತೊಂದು ಕೃತಿ ಶಿಲಪ್ಪದಿಕಾರಂ ವೆಂಗಡದ ಬೆಟ್ಟದ ಮೇಲಿನ ದೇವರ ವಿವರಣೆ ನೀಡುತ್ತದೆ. ಇದು ವಿಷ್ಣುವೇ ಎನ್ನಬೇಕು.

## 2. ಸಂಗಂ ಸಾಹಿತ್ಯದಲ್ಲಿ ತಿರುಮಲೆ

ತಮಿಳಿನ ಪ್ರಾಚೀನ ಸಾಹಿತ್ಯ ಸಂಗಂ ಸಾಹಿತ್ಯ ಹಲವಾರು ಕವನ ಸಂಗ್ರಹಗಳದ್ದಾಗಿದ್ದು, ಒಂದು ಕಾಲದಲ್ಲಿ ತಮಿಳು ನಾಡಿನಲ್ಲಿ ಅತ್ಯಂತ ಪ್ರಸಿದ್ಧವಾಗಿದ್ದಿತು.ಸಂಗಂ ಸಾಹಿತ್ಯವನ್ನು ಮೂರು ಭಾಗಗಳನ್ನಾಗಿಸಿದ್ದು, ಪ್ರತಿಯೊಂದೂ ಒಬ್ಬ ಹಿರಿ ಕವಿಯನ್ನು ಆಶ್ರಯಿಸಿತ್ತು. ಈ ಕವನಗಳ ಪ್ರಕೃತಿಯನ್ನು ಗಮನಿಸಿದರೆ ಅವುಗಳ ಕರ್ತೃಗಳ ಪ್ರತಿಭಾ ಶೈಲಿಗಳು ಪ್ರಕಟವಾಗುವಂತಿವೆ. ಹೀಗಾಗಿ ಇಡೀ ಸಂಗಂ ಸಾಹಿತ್ಯ ಕಾವ್ಯ ಸಂಗ್ರಹಗಳಾಗಿದ್ದು ವಿವಿಧ ರೀತಿಯ ಕಾಲ.ಛಂದಸ್ಸುಗಳಲ್ಲಿ ಪ್ರಕಟಗೊಂಡಿವೆ ಎನ್ನಬಹುದು.

ತಮಿಳಿನಲ್ಲಿ ಭಾರತ ಕಾವ್ಯವನ್ನು ರಚಿಸಿದ ಪ್ರಾಚೀನ ಕವಿಯೆಂದು ಪೆರುಂದೇವನಾರ್ ಹೆಸರು ಕೇಳಿ ಬರುತ್ತದೆ. ಈತ ತಮಿಳು ಸಾಹಿತ್ಯದಲ್ಲಿ ಸಾಮಾನ್ಯವಾಗಿ ಕಂಡುಬರುವ ಇತರ ಪೆರುಂದೇವನಾರುಗಳಗಿಂತ ಬೇರೆಯಾದವನು. ಈತ ಬಹು ಪ್ರಾಚೀನ ಕವಿಯಾಗಿದ್ದು ಎಟ್ಟು ತೊಗೈ ಸಂಗ್ರಹವನ್ನು ರಚಿಸಿದ್ದೇ ಅಲ್ಲದೇ ಅಂದಿಗೆ ಈ ಭೂ ಭಾಗದಲ್ಲಿ ಪೂಜೆಗೊಳ್ಳುತ್ತಿದ್ದ ಎಲ್ಲ ದೇವರುಗಳ ಪ್ರಾರ್ಥನಾ ಪದ್ಯಗಳನ್ನೂ ರಚಿಸಿದ. ಇದರ ಕಾಲವನ್ನು ಖಚಿತವಾಗಿ ನಿರ್ಧರಿಸಲಾಗಿಲ್ಲವಾದರೂ ಕ್ರಿಸ್ತ ಶಕದ ಆರಂಭದಲ್ಲಿರಬೇಕೆಂದು ಬಹುತೇಕ ಒಪ್ಪಲಾಗಿದೆ. 10ನೇ ಶತಮಾನದ ಪಾಂಡ್ಯ ರಾಜ ತಲೈಯಲಂಗಣಮ್ ವಿಜೇತನಿಗೂ ಮೊದಲಿನದಿರಬಹುದೆಂದು ಊಹಿಸಬಹುದಷ್ಟೆ.

ಈ ಕಾಲದ ಸಂಗಂ ಸಾಹಿತ್ಯದ ಹಲವಾರು ಕವನ ಸಂಗ್ರಹಗಳಲ್ಲಿ ತಿರುಪತಿಯನ್ನು ವೆಂಗಡವೆಂದು ಹೆಸರಿಟ್ಟು ಕರೆಯಲಾಗಿದೆ. ತೊಲ್‌ಕಾಪ್ಪಿಯದಂತೆಯೇ ಇಲ್ಲಿಯೂ ತಿರುಪತಿಯನ್ನು ತಮಿಳು ಮಾತನಾಡುವ ಜನರ ಪ್ರಾಂತ್ಯದ ಉತ್ತರದ ಗಡಿಯೆಂದು ಗುರುತಿಸಲಾಗಿದೆ.

ಹಿಂದೆಯೇ ಉಲ್ಲೇಖಗೊಂಡಿರುವ ತಲೈಯಲಂಗಣಮ್ ವಿಜೇತ ರಾಜ ಪಾಂಡ್ಯನೊಡನೆ ತಿರುಪತಿಯನ್ನು ಹೆಸರಿಸುವ ಇನ್ನಿಬ್ಬರು ಕವಿಗಳನ್ನು ಗುರುತಿಸಬಹುದು. ಕಲ್ಲಾಡನಾರ್ ಹಾಗೂ ನಕ್ಕೀರಾರ್, ವೆಂಗಡದ ಸುತ್ತಣ ಪ್ರಾಂತ್ಯದ ದೊರೆ ಪುಳ್ಳಿಯನ್ನು ಪ್ರಸಿದ್ಧ ಅಹನಾನೂರು ಕವಿತೆಯ 83 ನೆಯ ಪದ್ಯ ಹೆಸರಿಸುತ್ತದೆ. ಈ ಪದ್ಯದಲ್ಲಿ ಅವನನ್ನು ಇಳೈಜರ್ ಪೆರುಮಗನ್ ಎನ್ನಲಾಗಿದೆ.ಈ ಸಂದರ್ಭದಲ್ಲಿ ಬಳಸಲಾದ ತಮಿಳು ಪದ-ಕಳ್ವ-ಎಂದರೆ ಬೇಸಾಯಗೊಳ್ಳದ ಭೂಮಿಯಾಗಿರಬೇಕು.

ತಾತ್ಪರ್ಯವೆಂದರೆ ಈ ಉಲ್ಲೇಖವು ಪ್ರಾಯಶಃ ವ್ಯಾಪಕವಾದ ಬೇಸಾಯ ನಡೆಯದಿದ್ದ ಸ್ಥಿತಿಯನ್ನು ಸೂಚಿಸುತ್ತದೆ.ಇದೇ ಕವಿಯು ರಚನೆಯ ಅಹನಾನೂರಿನ 209ನೇ ಪದ್ಯದಲ್ಲಿ ಪುಳ್ಳಿಯನ್ನೂ ಅವನ ವೆಂಗಡವನ್ನೂ ಮತ್ತೆ ಹೆಸರಿಸಿ,ಪುಳ್ಳಿಯ ನಾಡಿನಿಂದ ಉತ್ತರಕ್ಕೆ ಹೋಗಬೇಕಾದರೆ ಈ ಬೆಟ್ಟದಲ್ಲಿಯ ಇಕ್ಕಟ್ಟಾದ ದಾರಿಯ-ಸುರಂಗದ ಮೂಲಕ ಹೋಗಬೇಕು ಎಂದು ಹೇಳುತ್ತಾನೆ.

ನಕ್ಕೀರಾರ್ ತಮಿಳಿನ ಪ್ರಾಚೀನ ಪ್ರಸಿದ್ಧ ಕವಿಯಾಗಿ ಅವನ ಬಗ್ಗೆ ಅನೇಕ ಕಥೆಗಳೂ ಹರಡಿವೆ.ಅವನು ವೆಂಗಡವೆಂದು ಹೇಳದಿದ್ದರೂ ವೆಂಗಡ ಸುತ್ತಮುತ್ತಲಲ್ಲಿ ವೆಂಗಡದ ಪ್ರಭಾವವನ್ನು ಗುರುತಿಸಿದ್ದಾನೆ.ಈಗಣ ಗೂಡೂರು ತಾಲ್ಲೂಕಿನ ರೆಡ್ಡಿಪಾಳಯಂ ಒಮ್ಮೆ ಪವತ್ತಿರಿಯಾಗಿ ತರೈಯನ್‌ನ ರಾಜ ಧಾನಿಯಾಗಿದ್ದಿತು. 253 ನೇ ಪದ್ಯದಲ್ಲಿ ನಕ್ಕೀರಾರ್ ಮತ್ತೆ ವಡುಕೂರ್ ಪೆರು ಮಗನಾದ ಎರುಮೈಯ ಬಗ್ಗೆ ಹೇಳುತ್ತಾನೆ.ಈ ಎರುಮೈಯನ್ನು ವಡುಕೂರು ದೊರೆಯೆಂದು ಇತರ ಅನೇಕ ಕವಿಗಳು ಬೇರೆ ಬೇರೆ ಪದ್ಯಗಳಲ್ಲಿ ಗುರುತಿಸಿದ್ದಾರೆ. ನಕ್ಕೀರಾರನು ತನ್ನ ಪದ್ಯದಲ್ಲಿ ವಡುಕೂರು ರಾಜನ ಪ್ರಾಂತ್ಯ ಆಯಿರಿ ನದಿಯ ಪ್ರಾಂತ್ಯದಲ್ಲಿದೆಯೆಂದೂ,ಈ ನದಿಯನ್ನು ದಾಟುವುದರಿಂದ ತಮಿಳು ಪ್ರಾಂತ್ಯದಿಂದ ವಡುಕರ ನಾಡನ್ನು ಸೇರಬಹುದೆಂದೂ ಹೇಳುತ್ತಾರೆ. ಅಯಿರಿಯು ಈಗಣ ಕರ್ನಾಟಕದ ಹಗರಿ ನದಿಯಾಗಿದ್ದಿರಬೇಕು. (ಆಂಧ್ರದ ಆದೋನಿಯ ಬಳಿಯದು) ಇದು ನಂತರದ ಕಾಲದಲ್ಲಿ ತಮಿಳರ ಹಾಗೂ ಉತ್ತರದ ಇತರರ ನಡುವಿನ ಗಡಿಯಾಗಿದ್ದಿತು.


**ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ**

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್ ಫೋನ್, ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

- ಕಾರ್ಯನಿರ್ವಹಣಾಧಿಕಾರಿ

ಗಣಪತಿಯನ್ನು ಕುರಿತು ತಿಳಿಯದವರೇ ಇಲ್ಲ. ಆ ಬಾಲಗೋಪಾಲರ ಆರಾಧ್ಯ ದೈವವಾದ ಗಣಪತಿಯು ಒಬ್ಬನೇ ಆದರೂ ಆತನ ಭಕ್ತರು ಮಾತ್ರ ಕೋಟ್ಯಾನುಕೋಟಿ. ಇವರೆಲ್ಲರ ಕೋರಿಕೆಗಳನ್ನು ಗಣಪತಿಯು ಒಂದೊಂದು ರೂಪದಲ್ಲಿ ನೆರವೇರಿಸುತ್ತಿರುತ್ತಾನೆ. ಗಣಪತಿಗಿರುವ ಹದಿನಾರು ವಿವಿಧ ರೂಪಗಳಲ್ಲಿ ಒಂದೊಂದು ರೂಪವು ಭಕ್ತರಿಗೆ ಒಂದೊಂದು ಫಲವನ್ನು ಅನುಗ್ರಹಿಸುತ್ತಾನೆ. ಬಾಲಗಣಪತಿಯಿಂದ ಮೊದಲ್ಗೊಂಡು ಊರ್ಧ್ವ ಗಣಪತಿಯ ರೂಪಗಳವರೆಗೆ ನಿತ್ಯವು ನಮಗೆದುರಾಗುವ ಅನೇಕ ಸಮಸ್ಯೆಗಳಿಗೆ ಪರಿಹಾರ ಸೂಚಿಸುತ್ತಾನೆ. ಷೋಡಶ (16) ಗಣಪತಿಗಳನ್ನು ಆರಾಧಿಸಿದರೆ ದೊರೆಯುವ ಫಲಗಳು ಅಷ್ಟಿಷ್ಟಲ್ಲ ವಿನಾಯಕ ಚೌತಿ ಹಬ್ಬದ ಸಂದರ್ಭದಲ್ಲಿ ಈ ಷೋಡಶ ಗಣಪತಿಗಳ ಸಮಾಹಾರ ನಿಮಗಾಗಿ....





## ಬಾಲ ಗಣಪತಿ

ಬುದ್ಧಿ ವಿಕಾಸಕ್ಕಾಗಿ ಈ ಧ್ಯಾನ ಶ್ಲೋಕವನ್ನು ನಿತ್ಯವೂ 32 ಸಲ ಪಠಿಸಿ, 21 ನಮಸ್ಕಾರಗಳನ್ನು ಮಾಡಬೇಕು.

## ತರುಣ ಗಣಪತಿ

ಈ ದೇವರ ಧ್ಯಾನ ಶ್ಲೋಕವನ್ನು ನಿತ್ಯವೂ 32 ಸಲ ಪಠಿಸಿದರೆ ಕಾರ್ಯ ಸಾಧನೆಗೆ ಅಗತ್ಯವಾದ ದೀಕ್ಷೆ ಹಾಗೂ ಮನೋಧೈರ್ಯ ವೃದ್ಧಿಯಾಗಿ ಸಿದ್ಧಿ ಲಭಿಸುತ್ತದೆ.






## ಭಕ್ತ ಗಣಪತಿ

ಈ ದೇವರ ಆರಾಧನೆಯಿಂದ ಉಪಾಸಕರಲ್ಲಿ ಭಕ್ತಿ ಭಾವ ವೃದ್ಧಿಯಾಗಿ ಸಿದ್ಧಿಲಭಿಸುತ್ತದೆ.

## ವೀರ ಗಣಪತಿ

ಈ ಸ್ವಾಮಿಯ ಧ್ಯಾನ - ಆರಾಧನೆಯ ಮೂಲಕ ಭಕ್ತರಿಗೆ ಧೈರ್ಯ - ಶೌರ್ಯಗಳು ಲಭಿಸುತ್ತವೆ.






## ಶಕ್ತಿ ಗಣಪತಿ

ಈ ದೇವರ ಆರಾಧನೆಯಿಂದ ಆತ್ಮಸ್ಥೈರ್ಯ ಲಭಿಸುತ್ತದೆ.

## ದ್ವಿಜ ಗಣಪತಿ

ಈ ಸ್ವಾಮಿಯ ಆರಾಧನೆಯಿಂದ ಸಮಗ್ರವಾಗಿ ಆಲೋಚಿಸುವ ಶಕ್ತಿ ಲಭಿಸುತ್ತದೆ.





## ಸಿದ್ಧಿ ಗಣಪತಿ

ಈ ಸ್ವಾಮಿಯ ಆರಾಧನೆಯಿಂದ ಧ್ಯಾನದಿಂದ ಸಕಲ ಕಾರ್ಯಗಳಲ್ಲಿ ಸಿದ್ಧಿ ಲಭಿಸುತ್ತದೆ.

## ಉಚ್ಛಿಷ್ಟ ಗಣಪತಿ


ಈ ಸ್ವಾಮಿ ಮಂತ್ರ ಮೂರ್ತಿಯಾಗಿದ್ದು ಅದಷ್ಟು ವೇಗದಲ್ಲಿ ಕೋರಿಕೆಯನ್ನು ನೆರವೇರಿಸುತ್ತಾನೆ.





## ವಿಘ್ನ ಗಣಪತಿ

ಈ ಸ್ವಾಮಿಯ ಆರಾಧನೆಯಿಂದ ವಿಘ್ನಗಳು ತೊಲಗಿ ಯಶಸ್ಸು ಲಭಿಸುತ್ತದೆ.



## ಕ್ಷಿಪ್ರ ಗಣಪತಿ

ಈ ಸ್ವಾಮಿಯ ಆರಾಧನೆಯಿಂದ ಬೇಗನೆ ಇಷ್ಟಾರ್ಥಗಳು ಸಿದ್ಧಿಸುತ್ತವೆ.




## ಶ್ರೀ ಲಕ್ಷ್ಮೀ ಗಣಪತಿ

ಈ ಸ್ವಾಮಿಯ ಆರಾಧನೆಯಿಂದ ಭಕ್ತರಿಗೆ ವಿಶೇಷವಾದ ಧನ - ಧಾನ್ಯ ಸಮೃದ್ಧಿ ಲಭಿಸುತ್ತದೆ.



## ಹೇರುಂಭ ಗಣಪತಿ

ಈ ಸ್ವಾಮಿಯ ಆರಾಧನೆಯಿಂದ ಪ್ರಯಾಣಗಳಲ್ಲಾಗುವ ಗಂಡಾಂತರಗಳಿಂದ ರಕ್ಷಿಸಲ್ಪಡುತ್ತಾರೆ.



## ಮಹಾ ಗಣಪತಿ

ಈತ ಭಕ್ತರ ಪಾಲಿಗೆ ಕಾಮಧೇನುವಾಗಿದ್ದು ಸಕಲ ಸಂಕಷ್ಟಗಳಿಂದ ಗ್ರಹ ಬಾದೆಗಳಿಂದ ಭಕ್ತರನ್ನು ವಿಮುಕ್ತಿಗೊಳಿಸುವ ಮಹಾದೇವನಾಗಿರುವನು.

## ವಿಜಯ ಗಣಪತಿ




ಈ ಸ್ವಾಮಿಯ ಆರಾಧನೆಯಿಂದ ಭಕ್ತರಿಗೆ ಎಲ್ಲ ಕಡೆಗಳಲ್ಲೂ ಜಯವಾಗುತ್ತದೆ.



## ನೃತ್ತ ಗಣಪತಿ

ಕಲ್ಪವೃಕ್ಷದ ಕೆಳಭಾಗದಲ್ಲಿರುವ ಈ ಸ್ವಾಮಿಯ ಆರಾಧನೆ ಯಿಂದ ಸಂತೃಪ್ತಿ ಹಾಗೂ ಮನಶ್ಯಾಂತಿ ದೊರೆಯುತ್ತದೆ.

## ಊರ್ದ್ವ ಗಣಪತಿ



ಈ ಸ್ವಾಮಿಯ ಆರಾಧನೆಯಿಂದ ಮಹಾ ಪಾಪಗಳಿಂದ ಬಾದೆಗಳಿಂದ ಕಾರಾಗೃಹ ಶಿಕ್ಷೆಯಿಂದ ವಿಮುಕ್ತಿ ದೊರೆಯುತ್ತದೆ.

ಚಿತ್ರ ಸೌಜನ್ಯಗಳು :- ಕಂದುಕೂರಿ ವೆಂಕಟಸತ್ಯ ಬ್ರಹ್ಮ ಚಾರ್ಯ

# ಶ್ರೀ ಲಕ್ಷ್ಮೀ ಕ್ಷೇತ್ರ ಗೊರವನ ಹಳ್ಳಿ

-ಡಾ।। ಸುಮನ ಬದರಿನಾಥ್



ಕರ್ನಾಟಕ ರಾಜ್ಯ ಪ್ರಕೃತಿ ಸೌಂದರ್ಯದ ಆಡುಂ ಬೊಲವಾಗಿರುವಂತೆ ದೇವಾಲಯಗಳ ನೆಲೆ ವೀಡೂ ಆಗಿದೆ. ಶಿವ, ವಿಷ್ಣು, ದೇವಿ ದೇವಾಲಯಗಳು ನಾಡಿನಾದ್ಯಂತ ಹರಡಿದ್ದು ಭಕ್ತರನ್ನು ತಮ್ಮೆಡೆಗೆ ಆಕರ್ಷಿ ಸುತ್ತಿವೆ. ಭಕ್ತರು ಈ ಕ್ಷೇತ್ರಗಳಿಗೆ ಯಾತ್ರೆ ಬಂದು ದೇವ ದರ್ಶನದಿಂದ ಧನ್ಯರಾಗುತ್ತಾರೆ. ಕೃತಾರ್ಥರಾದೆವೆಂದು ಭಾವಿಸುತ್ತಾರೆ. ಅಂತಹುದೊಂದು ದಿವ್ಯ ಕ್ಷೇತ್ರ ಶ್ರೀಲಕ್ಷ್ಮೀ ದೇವಿ ನೆಲಸಿರುವ ಗೊರವನಹಳ್ಳಿ.



ಮಹಾಲಕ್ಷ್ಮಿ ಸರ್ವ ಸಂಪತ್ತುಗಳ,ಐಶ್ವರ್ಯದ ಅಧಿದೇವತೆ.ಅವಳು ನೀಡದ ನೀಡಲಾಗದ ಒಳಿತು ಯಾವುದೂ ಇಲ್ಲವೇ ಇಲ್ಲ. ಅನಾದಿ ಕಾಲದಿಂದಲೂ ಭಕ್ತರ ಕಷ್ಟಗಳನ್ನು ನಿವಾರಿಸುತ್ತಾ ಬಂದಿರುವ ಮಹಾ ತಾಯಿ. ಕಲಿಯುಗದಲ್ಲಿ ಈ ಕರುಣಾಮಯಿ  ಕಂಗಾಲಾದವರಿಗೆ ಕರುಣೆ ತೋರಿ ಕೃಪೆ ಮಾಡುತ್ತಾಳೆ. ಸರ್ವಸಂಕಷ್ಟಗಳನ್ನೂ ದೂರ ಮಾಡುತ್ತಾಳೆ. ಗೊರವನ ಹಳ್ಳಿಯಲ್ಲಿ ನೆಲೆಸುವ ಮೂಲಕ ಗೊರವನಹಳ್ಳಿಯನ್ನು ಪುಣ್ಯ ಭೂಮಿಯನ್ನಾಗಿ ಮಾಡಿದ್ದಾಳೆ.

ಗೊರವನಹಳ್ಳಿ ಕರ್ನಾಟಕದ ಕೊಲ್ಹಾಪುರ ಎಂದು ಪ್ರಖ್ಯಾತವಾಗಿದೆ. ಲಕ್ಷ್ಮೀ ಕ್ಷೇತ್ರವೆಂದರೆ ಮೊದಲು ನೆನಪಿಗೆ ಬರುವುದು ಕೊಲ್ಹಾಪುರ. ಕರ್ನಾಟಕದ ಕೆಲವೇ ಕೆಲವು

ಲಕ್ಷ್ಮೀ ಕ್ಷೇತ್ರಗಳಲ್ಲಿ ಅತ್ಯಂತ ಪ್ರಸಿದ್ಧವಾದುದೆಂಬ ಹಿರಿಮೆ, ಗರಿಮೆ, ಮಹಿಮೆಗಳು ಈಕ್ಷೇತ್ರಕ್ಕಿವೆ. ಭಕ್ತರ ಭಕ್ತಿಶ್ರದ್ಧೆಗಳ ಕೇಂದ್ರ ಬಿಂದುವಾಗಿದೆ.

ಶ್ರೀಕ್ಷೇತ್ರ ಗೊರವನಹಳ್ಳಿ ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನಲ್ಲಿದೆ. ಕೊರಟಗೆರೆಯಿಂದ ಸುಮಾರು 10 ಕಿ.ಮೀ. ಜಯಮಂಗಲಿ ನದಿಯ ಎಡದಂಡೆಯ ಮೇಲಿದೆ.ಬೆಂಗಳೂರಿನಿಂದ ಸುಮಾರು 90.ಕಿಮೀ. ದೂರದಲ್ಲಿರುವ ಈ ಸ್ಥಳಕ್ಕೆ ಬೆಂಗಳೂರಿನಿಂದ ನೇರ ಬಸ್ ಸಂಪರ್ಕವಿದೆ. ಯಾತ್ರಿಕರು ಸುಲಭವಾಗಿ ಈ ಸ್ಥಳವನ್ನು ತಲುಪಬಹುದು.

ಗೊರವನ ಹಳ್ಳಿಯಲ್ಲಿ ಲಕ್ಷ್ಮೀದೇವಿ ಬಂದು ನೆಲಸಿದ ಹಿನ್ನೆಲೆಯಲ್ಲಿ ಒಂದು ರೋಚಕ ರಮ್ಯ ಕತೆಯಿದೆ. ಮೊದಲು ಗೊರವನಹಳ್ಳಿ ಒಂದು ಸಣ್ಣ ಗ್ರಾಮವಾಗಿತ್ತು.

ಲಕ್ಷ್ಮೀ ಸನ್ನಿಧಾನ ಗೊರವನ ಹಳ್ಳಿಯನ್ನು ಪವಿತ್ರ ಕ್ಷೇತ್ರವಾಗಿಸಿತು. ಜಯಮಂಗಲ ನದಿ ಹರಿಯುತ್ತಿದ್ದ ಕಾರಣ ಗ್ರಾಮದ ಸುತ್ತ ಮುತ್ತ ಹಸಿರುಹುಲ್ಲು, ಸಸ್ಯ ಸಂಪತ್ತು, ಮರಗಿಡಗಳು ಯಥೇಚ್ಛವಾಗಿ ಬೆಳೆದು ವನಸಿರಿ ತುಂಬಿ ತುಳುಕುತ್ತಿತ್ತು, ಹಾಗಾಗಿ ಇಲ್ಲಿ ದನಗಾಹಿಗಳು ಕುರುಬರು ಹೆಚ್ಚಾಗಿ ವಾಸವಾಗಿದ್ದರು. ಸುಮಾರು 19ನೇ ಶತಮಾನದ ಕೊನೆಯಲ್ಲಿ ಅಬ್ಬಯ್ಯ ಎಂಬ ಬ್ರಹ್ಮಚಾರಿ ಮತ್ತು ಅಕ್ಕಮ್ಮ ಎಂಬ ಅವನ ತಾಯಿ ಇಲ್ಲಿ ವಾಸವಾಗಿದ್ದರು.ಅಬ್ಬಯ್ಯನ ಕಾಯಕ ದನಕಾಯುವುದು. ಕುರಿ ಮೇಯಿಸುವುದು. ಸಂಜೆ ಮನೆಗೆ ಹಿಂತಿರುಗುವ ಮುನ್ನ ಬಳಿಯಲ್ಲೇ ಇದ್ದ ಕೆರೆಯಲ್ಲಿ ಕೈಕಾಲು ತೊಳೆದು ಬರುವುದು ಅಬ್ಬಯ್ಯನ ಪದ್ಧತಿ.ಹೀಗಿರಲು ಒಂದು ದಿನ ಅಬ್ಬಯ್ಯ ಕೈಕಾಲು ತೊಳೆಯುತ್ತಿದ್ದಾಗ "ನಾನು ನಿಮ್ಮ ಮನೆಗೆ ಬರುತ್ತೇನೆ ನನ್ನನ್ನು ಕರೆದುಕೊಂಡು ಹೋಗು"ಎಂಬ ಸ್ತ್ರೀ ಅಶರೀರವಾಣಿ ಕೇಳಿಸಿತು.ಅಬ್ಬಯ್ಯ ಸುತ್ತಲೂ ನೋಡಿದ ಯಾರೂ ಕಾಣಲಿಲ್ಲ. ತನ್ನ ಭ್ರಮೆಯಿರಬೇಕೆಂದು ಕೊಂಡು ಮನೆಗೆ ಹಿಂದಿರುಗಿದ. ಮಾರನೆಯ ದಿನ ಸಾಯಂಕಾಲವು ಅದೇ ರೀತಿ ವಾಣಿ ಕೇಳಿಸಲು ಮನೆಗೆ ಬಂದ ನಂತರ ತಾಯಿಗೆ ಎಲ್ಲ ವಿಷಯ ಹೇಳಿದ. ಅಕ್ಕಮ್ಮ ಮೊದಲು ಗಾಬರಿಗೊಂಡರೂ ನಂತರ ನಾಳೆ ಹಾಗೆಯೇ ಕೇಳಿಸಿದರೆ "ಭೂತವಾದರೆ ಬರಬೇಡ. ದೇವರಾದರೆ ಬಾ" ಎಂದು ಹೇಳು ಎಂದು ಹೇಳಿದಳು. ಮಾರನೆಯ ದಿನ ಕೈಕಾಲು ತೊಳೆಯಲು ಕೆರೆಗೆ ಬಂದ ಅಬ್ಬಯ್ಯನಿಗೆ ಅದೇ ವಾಣಿ ಮತ್ತೆ ಕೇಳಿಸಿತು. ಅವನು ತಾಯಿ ಹೇಳಿಕೊಟ್ಟಂತೆಯೇ ಹೇಳಿದ.ತಕ್ಷಣವೇ ಕೆರೆಯ ನೀರು ಅಲ್ಲಾಡಿದಂತಾಗಿ, ಬುಳಬುಳನೆ ಸದ್ದು ಮಾಡುತ್ತಾ, ಶಂಖ, ಚಕ್ರ, ತ್ರಿಶೂಲ, ಎರಡು ಪದ್ಮಗಳಿಂದ ಕೂಡಿರುವ ಸುಂದರ ಶಿಲಾ ವಿಗ್ರಹ ನೀರಿನಿಂದ ಮೇಲೆದ್ದು ಬಂದಿತು. ಅಬ್ಬಯ್ಯ ಆನಂದಭರಿತನಾಗಿ ಶಿಲೆಯನ್ನು ತಲೆಯ ಮೇಲಿಟ್ಟುಕೊಂಡು ಮನೆಗೆ ಕರೆತಂದ. ಅಂದು ಶುಕ್ರವಾರವಾಗಿತ್ತು, ಸಂಜೆಯ ಸಮಯದಲ್ಲಿ ಲಕ್ಷ್ಮೀ ದೇವಿಯೇ ಮನೆಗೆ ಬಂದಳೆಂದು ತಾಯಿ ಮಗ ಭಕ್ತಿ ಭಾವದಿಂದ ಅದನ್ನು ದೇವರ ಮನೆಯ ಕೂಡಿನಲ್ಲಿಟ್ಟು ಸಂಭ್ರಮದಿಂದ ಪೂಜಿ ಸಿದರು.

ಮರು ದಿನದಿಂದ ನಿತ್ಯವೂ ಪೂಜಿಸಲಾರಂಭಿಸಿದರು. ಅಬ್ಬಯ್ಯ ಮತ್ತು ಅಕ್ಕಮ್ಮನ ಭಕ್ತಿಯ ಪೂಜೆಗೊಲಿದ ದೇವಿಯ ಕೃಪೆಯಿಂದ ಅಬ್ಬಯ್ಯನ ಸಂಪತ್ತು ದಿನ ದಿನಕ್ಕೂ ವರ್ಧಿಸಿತು. ಅವನು ಶ್ರೀಮಂತನಾದ ಅಬ್ಬಯ್ಯ ತನಗೊದಗಿದ ಐಶ್ವರ್ಯದಿಂದ ಗರ್ವಿತನಾಗದೆ ದೇವರ ಸೇವೆಯೆಂದು, ಸಮಾಜ ಸೇವೆ, ಮಂಗಳ ಕಾರ್ಯಗಳಿಗೆ ಸಹಾಯ ಮಾಡಲಾರಂಭಿಸಿದ ಅಬ್ಬಯ್ಯ, ಅಬ್ಬಯ್ಯನವರಾದ ಅವರ ಮನೆ ಸಿರಿ ಸಂಪತ್ತಿನಿಂದ ತುಂಬಿ ತುಳುಕುತ್ತಾ 'ಲಕ್ಷ್ಮೀ ನಿವಾಸ' ಎಂದು ಪ್ರಸಿದ್ಧವಾಯಿತು. ಏನಾದರೂ ಅಬ್ಬಯ್ಯ ಲಕ್ಷ್ಮಿ ಪೂಜೆಯನ್ನು ತಪ್ಪಿಸುತ್ತಿರಲಿಲ್ಲ. ಹೀಗೆ ಕಾಲ ಕಳೆಯಲು ಅಬ್ಬಯ್ಯನವರ ಮರಣಾನಂತರ ಅವರ ತಮ್ಮ ತೋಟದಪ್ಪ ಲಕ್ಷ್ಮೀಪೂಜೆಯನ್ನು ಮುಂದುವರೆಯಿಸಿದರು. ಅವರಿಗೆ ಒಂದು ದಿನ ಲಕ್ಷ್ಮೀದೇವಿ ಸ್ವಪ್ನದಲ್ಲಿ ತನಗೊಂದು ಗುಡಿ ಕಟ್ಟಿಸಬೇಕೆಂದು ಸೂಚಿಸಿದಳು. ಅದರಂತೆ ತೋಟದಪ್ಪ ಸಣ್ಣ ಗುಡಿಯೊಂದನ್ನು ನಿರ್ಮಿಸಿ ಅಲ್ಲಿ ಲಕ್ಷ್ಮಿ ಶಿಲೆಯನ್ನಿರಿಸಿ ಪೂಜಿಸತೊಡಗಿದರು. ತೋಟದಪ್ಪನವರ ಮರಣ ನಂತರ ಸುಮಾರು 1910ನೇ ಇಸವಿಯ ಸಮಯದಲ್ಲಿ ಕಾರಣಾಂತರಗಳಿಂದ ಗುಡಿಯಲ್ಲಿ ಪೂಜೆ ನಿಂತು ಹೋಗಿ ಗುಡಿ ನಿರ್ಲಕ್ಷಕ್ಕೊಳಗಾಯಿತು. ಹೀಗಿರಲು 1925 ನೇ ಇಸವಿಯಲ್ಲಿ ಮಧುಗಿರಿಯ ಹೆಣ್ಣು ಮಗಳಾದ ಕಮಲಮ್ಮ ಎಂಬುವವರು ಗೊರವನಹಳ್ಳಿಯ ಶಾನುಭೋಗ ಸುಬ್ಬರಾಯರನ್ನು ಮದುವೆಯಾಗಿ ಗೊರವನಹಳ್ಳಿಗೆ ಬಂದು ನೆಲಸಿದರು. ಪರಮ ಸಾಧ್ವಿಯೂ ದೈವಭಕ್ತೆಯೂ ಆಗಿದ್ದ ಈಕೆ ನಿರ್ಲಕ್ಷ್ಯಕ್ಕೊಳಗಾಗಿದ್ದ ಲಕ್ಷ್ಮೀಗುಡಿಯನ್ನು ಕಂಡು ಭಾವುಕರಾಗಿ ತಾವೇ ಶಕ್ತ್ಯಾನುಸಾರ ಪೂಜಿಸಲಾರಂಭಿಸಿದರು. ಒಂದು ವರ್ಷ ಪೂಜಿಸಿ ಕಾರಣಾಂತರಗಳಿಂದ ಅವರು ತಮ್ಮ ತವರು ಮನೆಗೆ ಹೊರಟು ಹೋದರು. ಗುಡಿ ಮತ್ತೆ ನಿರ್ಲಕ್ಷ್ಯಕ್ಕೆ ಒಳಗಾಯಿತು. ಸುಮಾರು 25 ವರ್ಷಗಳನಂತರ ಸುಮಾರು 1952 ನೇ ಇಸವಿಯಲ್ಲಿ ಕಮಲಮ್ಮನವರು ಮತ್ತೆ ಗೊರವನಹಳ್ಳಿಗೆ ಹಿಂದಿರುಗಿ ಬಂದು ಲಕ್ಷ್ಮೀ ಪೂಜೆ ಪ್ರಾರಂಭಿಸಿದರು.ಅವರ ಭಕ್ತಿ

ಯುಕ್ತ ಪೂಜೆಯಿಂದ ದಿನೇದಿನೇ ಕ್ಷೇತ್ರ ಅಭಿವೃದ್ಧಿಗೊಳ್ಳಲಾರಂಭಿಸಿತು. ಜನ ತಂಡೋಪತಂಡವಾಗಿ ಬಂದು ದೇವಿಯ ದರ್ಶನದಿಂದ ಕೃತಾರ್ಥಲಾಗಲಾರಂಭಿಸಿದರು. ಗೊರವನಹಳ್ಳಿ ಪವಿತ್ರ ಯಾತ್ರಾಸ್ಥಳವಾಯಿತು. 2003ನೇ ಇಸವಿಯಲ್ಲಿ ಕಮಲಮ್ಮ ಲಕ್ಷ್ಮೀ ಪಾದಾರವಿಂದ ಸೇರಿದರು. ಪೂಜಾದಿಗಳು ವೈಭವದಿಂದ ಮುಂದುವರೆಯುತ್ತಾ ಬಂದವು.ಇಂದು ಗೊರವನಹಳ್ಳಿ ಶ್ರೀಲಕ್ಷ್ಮೀಕ್ಷೇತ್ರೆ, ಅಭಿನವ ಕೊಲ್ಹಾಪುರ ಎಂದು ಪ್ರಖ್ಯಾತಗೊಂಡಿದೆ.

ಅಂದು ಸಣ್ಣದಾಗಿದ್ದ ಗುಡಿ ಇಂದು ಬೃಹತ್ ದೇವಾಲಯವಾಗಿ ಬಹು ಸುಂದರವಾಗಿ ಬೆಳೆದಿದೆ. ವರ್ಣರಂಜಿತ ಗೋಪುರ, ಎರಡೂ ಕಡೆ ಕಮಾನುಗಳಿಂದ ಕೂಡಿದ್ದು ತಲೆಯೆತ್ತಿ ನಿಂತು ಭಕ್ತರನ್ನು ಕೈಬೀಸಿ ಕರೆಯುತ್ತದೆ.ಗರ್ಭಗುಡಿಯಲ್ಲಿ ದೇವಿಯು ಶಿಲಾರೂಪದಿಂದ ವಿರಾಜಮಾನಳಾಗಿದ್ದಾಳೆ. ಉತ್ಸವ ಮೂರ್ತಿಯೂ ಬಹು ಸುಂದರವಾಗಿದೆ. ರತ್ನಾಭರಣಗಳಿಂದಲೂ, ಪುಷ್ಪಮಾಲೆಗಳಿಂದಲೂ ಅಲಂಕೃತಳಾದ ದೇವಿಯ ದಿವ್ಯ ದರ್ಶನ ನಯನ ಮನೋಹರ ಭಕ್ತರು ಸರತಿಯ ಸಾಲಿನಲ್ಲಿ ನಿಂತು ದೇವೀ ದರ್ಶನ ಪಡೆದು ಭಾವಪರವಶರಾಗುತ್ತಾರೆ. ಅಲೌಕಿಕ ಆನಂದವನ್ನು ಅನುಭವಿಸುತ್ತಾರೆ. ದೇವಾಲಯದಲ್ಲಿ ಮಾಚಾಲನಾಗಪ್ಪ ಮತ್ತು ಮಾರಿಕಾಂಬಾರ ಸನ್ನಿಧಾನಗಳಿವೆ. ಅವುಗಳಿಗೂ ಪೂಜೆ ಸಲ್ಲುತ್ತದೆ.

ಗೊರವನಹಳ್ಳಿ ಲಕ್ಷ್ಮೀದೇವಿಯ ದರ್ಶನಕ್ಕೆ ದಿನ ನಿತ್ಯವೂ ಸಾವಿರಾರು ಭಕ್ತರು ಬಂದು ಪುನೀತರಾಗುತ್ತಾರೆ. ಶುಕ್ರವಾರ, ಮಂಗಳವಾರ,ಭಾನುವಾರ ಇಲ್ಲಿಯ ವಿಶೇಷ ದಿನಗಳು. ಅಂದು ಭಕ್ತರ ಸಂಖ್ಯೆ 10,000 ಮೀರುತ್ತದೆ ಎಂದು ಅಂದಾಜು ಮಾಡಲಾಗಿದೆ. ದೇಗುಲ ಬೆಳಗ್ಗೆ 6 ಗಂಟೆಯಿಂದ ಮಧ್ಯಾಹ್ನ 12.30 ಗಂಟೆ, ಸಂಜೆ 5-30 ರಿಂದ ರಾತ್ರಿ 8.00 ರ ವರೆಗೆ ತೆರೆದಿರುತ್ತದೆ. ಅಭಿಷೇಕ, ಕುಂಕುಮಾರ್ಚನೆ. ಮಹಾಮಂಗಳಾರತಿಗಳು ಬೆಳಗ್ಗೆ 9.30 ರಿಂದ ಮಧ್ಯಾಹ್ನ 12.30 ರ ವರೆಗೆ ಜರುಗುತ್ತದೆ. ರಾತ್ರಿ ಮಹಾಮಂಗಳಾರತಿಯ ಸಮಯ 7.30 ಇಲ್ಲಿಯ ವಿಶೇಷ ಪೂಜೆಯೆಂದರೆ ಕುಂಕುಮಾರ್ಚನೆ ದೇವಿಯ ಕುಂಕುಮ ಪ್ರಸಾದವನ್ನು ಭಕ್ತರು ತಾವೂ ಧರಿಸಿ ಮನೆಗೂ ಕೊಂಡೊಯ್ಯುತ್ತಾರೆ. ಕಮಲ ಪುಷ್ಪದ ಪೂಜೆ ಮತ್ತೊಂದು ವಿಶೇಷ.

ಗೊರವನಹಳ್ಳಿ ಲಕ್ಷ್ಮೀದೇವಿಗೆ ಭಕ್ತರು ಕೆಲವು ವಿಶೇಷ ಪೂಜೆಗಳನ್ನು ಸಲ್ಲಿಸುವ ಸಂಪ್ರದಾಯವಿದೆ. ಕೆಲವರು ಒಂದು ವರ್ಷದ ವ್ರತವನ್ನಾಚರಿಸಿ ದಿನವೂ ದೇವಿಯ ಪೂಜೆ ಮಾಡಿ ದಿನಕ್ಕೆ 3 ಬಾರಿ ಲಕ್ಷ್ಮೀ ಅಷ್ಟೋತ್ತರ ಜಪಿಸಿ, ನಂತರ ಬಂದು ದೇವಿಯ ದರ್ಶನ ಮಾಡುತ್ತಾರೆ, ಮತ್ತೆ ಕೆಲವರು 48 ದಿನಗಳ ಕಾಲ ದಿನವೂ ದೇವಿಯನ್ನು ಪೂಜಿಸಿ ಪಠದ ಬಳಿ ಬಂದು ನಾಣ್ಯವನ್ನಿಟ್ಟು ಒಂದು ಪಾತ್ರೆಗೆ ಮತ್ತು ಒಂದು ಹಿಡಿ ಅಕ್ಕಿ ಹಾಕುತ್ತಿದ್ದು ಲಕ್ಷ್ಮೀ ಅಷ್ಟೋತ್ತರ 3 ಬಾರಿ ಜಪ ಮಾಡಿ ವ್ರತ ಪೂರ್ಣಗೊಂಡ ನಂತರ ದೇವಿಯ ದರ್ಶನಕ್ಕೆ ಬಂದು ಅಕ್ಕಿ ಮತ್ತು ನಾಣ್ಯಗಳನ್ನು ದೇವಿಗೆ ಅರ್ಪಿಸುತ್ತಾರೆ.ಇದರಿಂದ ಮನೆಯಲ್ಲಿ ಧನಧಾನ್ಯ ಸಮೃದ್ಧಿ ಉಂಟಾಗುತ್ತದೆಂದು ಪ್ರತೀತಿ.ದೇವಿಗೆ ಅರಿಶಿನ, ಕುಂಕುಮ, ಅಕ್ಕಿ ಕೊಬ್ಬರಿ ಬಟ್ಟಲು, ಕುಬುಸದ ಬಟ್ಟೆ, ಒಣ ಹಣ್ಣುಗಳು ಮುಂತಾದ ಮಂಗಳ ಪ್ರಸಾದ ದ್ರವ್ಯಗಳನ್ನು ಉಡಿ ತುಂಬುವುದು. ಸೀರೆ ಉಡಿಸುವುದು, ಕುಂಕುಮಾರ್ಚನೆ ಇಲ್ಲಿಯ ವಿಶೇಷ ಪೂಜೆಗಳು. ಹಸಿರು ಕುಬುಸದ ಬಟ್ಟೆ ಮತ್ತು ಹಸಿರು ಬಳೆಗಳನ್ನು ಮುಂತಾದ ರೂಪವಾಗಿ ಕೊಡಲಾಗುತ್ತದೆ. ದೇವಿಗೆ ನಿತ್ಯೋತ್ಸವ. ನಿತ್ಯ ಮಂಗಳ ಎನ್ನುವಂತೆ ಪೂಜಾದಿಗಳು ಜರಗುತ್ತವೆ ಭಕ್ತರು ಬರುತ್ತಾರೆ, ಕಾರ್ತೀಕ ಮಾಸದಲ್ಲಿ ನಡೆಯುವ ಲಕ್ಷದೀಪೋತ್ಸವ ವರ್ಷದ ವಿಶೇಷ ದಿನವಾಗಿದೆ. ಧಾನ್ಯಲಕ್ಷ್ಮಿ ಅನ್ನಪೂರ್ಣೇಶ್ವರಿ ಎನಿಸಿದ ದೇವಿ ಸನ್ನಿಧಾನದಲ್ಲಿ ನಿತ್ಯ ಅನ್ನದಾನ ಸೇವೆಯಿದೆ. ಉಚಿತ ಭೋಜನ ವ್ಯವಸ್ಥೆಯಿದೆ.

ಗೊರವನಹಳ್ಳಿಗೆ ಬಂದ ಭಕ್ತರು ಊರಿನಲ್ಲೆ ಇರುವ ಓಣಿ ನಾಗಪ್ಪ, ರೇಣುಕಾಂಬಾ ದೇವಾಲಯಗಳಿಗೂ ಸಮೀಪದಲ್ಲೆ ಇರುವ ತೀತಾಜಲಾಶಯ,ಸಂಗಮೇಶ್ವರ,ದೇವರಾಯನದುರ್ಗದ ನರಸಿಂಹ, ವೀರಾಪುರದ ಶ್ರೀನಿವಾಸ ಈ ಸ್ಥಳಿಗಳಿಗೂ ಭೇಟಿ ನೀಡಬಹುದು.

ಗೊರವನಹಳ್ಳಿ ಲಕ್ಷ್ಮೀದೇವಿಯ ಮಹಿಮೆ ಅಪಾರವಾದುದು. ವ್ರತವನ್ನಾಚರಿಸಿ ದೇವೀದರ್ಶನ ಮಾಡಿ ಹರಕೆ ಸಲ್ಲಿಸಿದರೆ ಮನಸ್ಸಿನ ಇಷ್ಟಾರ್ಥಗಳೆಲ್ಲ ಪೂರ್ಣಗೊಳ್ಳುವುದೆಂಬ ನಂಬಿಕೆಯಿದೆ. ಹಣಕಾಸಿನ ಸಮಸ್ಯೆಗಳು ಪರಿಹಾರಗೊಳ್ಳುವುದೆಂದು ಪ್ರತೀತಿ. ಸಂಪತ್ ಸಮೃದ್ಧಿ ಉಂಟಾಗುವುದೆಂದು ಪ್ರಸಿದ್ಧಿ. ಅಷ್ಟಲಕ್ಷ್ಮೀ ಸ್ವರೂಪಿಣಿಯಾಗಿ ಅಷ್ಟೈಶ್ವರ್ಯಗಳನ್ನು ಪ್ರಸಾದಿಸುತ್ತಾಳೆ. ಲಕ್ಷ್ಮೀ ಭಕ್ತರೆಲ್ಲರು ಒಮ್ಮೆ ಸಂದರ್ಶಿಸಲೇ ಬೇಕಾದ ಶ್ರೀಕ್ಷೇತ್ರ ಗೊರವನಹಳ್ಳಿ.

ನಮಸ್ತೇತು ಮಹಾಮಾಯೆ ಶ್ರೀಪೀಠೇ ಸುರಪೂಜಿತೆ

ಶಂಖ ಚಕ್ರ ಗದಾ ಹಸ್ತೆ ಮಹಾಲಕ್ಷ್ಮಿ ನಮೋಸ್ತುತೇ॥






**ಮೋ**ಕ್ಷ ಸಾಧನವಾದ ಯಾವುದೇ ಕರ್ಮದ ಆಚರಣೆಗೆ, ಮನುಷ್ಯ ಮಾತ್ರ ಮಾಧ್ಯಮನಾಗುವನು. ಶೃತಿ ಸ್ಮಂಸ್ಮೃತಿಗಳು ಮಾನವರಿಗೆ ವಿಹಿತ ಕರ್ಮಗಳ ಆಚರಣೆಗೆ ಆದೇಶಿಸಿ, ದೇವರನ್ನು ಅರಿತು, ನುರಿತ ಅನುಷ್ಠಾನ ಮಾಡಿ, ಭಗವಂತ ತಿಳಿಸಿದ ಕರ್ಮಮಾರ್ಗದಲ್ಲಿ ನಡೆಯಬೇಕೆಂದು ಸ್ಪಷ್ಟಪಡಿಸಿವೆ. ಭಗವಂತನನ್ನು ತಿಳಿದು, ಆರಾಧಿಸಿ ಉಪಾಸನೆ ಮಾಡಬೇಕು. ಶ್ರೀಮಧ್ವಚಾರ್ಯರು ಸಹ ಮತ್ತು ಇನ್ನಿತರ ಮಾಧ್ಯಮಹನೀಯರು ಅನೇಕ ಮಾರ್ಗಗಳನ್ನು ತಿಳಿಸಿದ್ದಾರೆ. ಭಗವಂತನನ್ನು ಮರೆಯದೇ, ಜ್ಞಾನ ಸಹಿತ ಕರ್ಮಮಾಡಬೇಕು. ಸಂಕಲ್ಪ ದೃಢವಾಗಿರಬೇಕು.

ಕಾರುಣ್ಯ ಸಿಂಧು ಶ್ರೀರಾಘವೇಂದ್ರ ಸ್ವಾಮಿಗಳು " ಪ್ರಾತಃ ಸಂಕಲ್ಪಗದ್ಯಮ್" ಗದ್ಯ ರಚಿಸಿ, ಇದರಲ್ಲಿ ಶ್ರೀ ಮದಾಚಾರ್ಯರು ತಿಳಿಸಿದ ಅನೇಕ ಪ್ರಮೇಯಗಳನ್ನು, ಪುಟ್ಟ ಪದಗಳಲ್ಲಿ ರಚಿಸಿ, ಪ್ರತಿನಿತ್ಯ ನಸುಕಿನಲ್ಲಿ ಹೇಳಿಕೊಳ್ಳಬೇಕೆಂದು ಉಪದೇಶಿಸಿದ್ದಾರೆ.

ಪ್ರತಿಯೊಬ್ಬ ಸಾಧಕನು, ಶ್ರೀಮದಾಚಾರ್ಯರ ಅಂತರ್ಯಾಮಿಯಾದ ಶ್ರೀರಾಮಚಂದ್ರ ದೇವರ ಅಂತರಂಗ ಭಕ್ತನಾದ ಶ್ರೀಮುಖ್ಯ ಪ್ರಾಣನಿಂದ ಪ್ರೇರಿತನಾಗಿ,ಭಗವಂತನ ಪೂಜಾರೂಪವಾದ ಸತ್ಕರ್ಮಗಳನ್ನು ಭಗವಂತನೇ ತನ್ನೊಳಗಿದ್ದು ಮಾಡಿಸುವನೆಂದು, ಅನುಸಂಧಾನವನ್ನು ಹೊಂದಿದ ವನಾಗಿ, ತನ್ನ ಯಥಾಶಕ್ತಿ ಮಾಡುತ್ತೇನೆಂದು ಪ್ರಾತಃಕಾಲ ಶ್ರೀಹರಿ ಗುರು ಸ್ಮರಣೆಯೊಂದಿಗೆ ಸಂಕಲ್ಪ ಮಾಡಬೇಕೆಂದು ಶ್ರೀರಾಘವೇಂದ್ರ ಸ್ವಾಮಿಗಳು ಅಪ್ಪಣೆ ಕೊಡಿಸಿದ್ದಾರೆ.

ಪ್ರಾತಃಸಂಕಲ್ಪಗದ್ಯದಲ್ಲಿ ವಾಯುದೇವರ ಮಹಿಮೆ, ಅವರ ಮತ್ತೊಂದು ಅವತಾರ ಶ್ರೀಮಧ್ವಾಚಾರ್ಯರ ಮಹಿಮೆ ಅವರ ಅಂತರ್ಯಾಮಿ ಶ್ರೀರಾಮದೇವರ ಮಹಿಮೆ,ವೈಭವ, ಜೊತೆಗೆ ಗಹನವಾದ ಶೃತಿ ಸ್ಮೃತಿಗಳು ಪುರಾಣಗಳಲ್ಲಿ ಹೇಳಲಾದ ಅನೇಕ ಪ್ರಮೇಯಗಳನ್ನು ರಾಯರು ವರ್ಣಿಸಿ, ಸಾಧಕರಿಗೆ ಮಹದುಪಕಾರ ಮಾಡಿದ ಯತಿಗಳು.

ಸಜ್ಜನರಿಗೆ ಪ್ರತಿನಿತ್ಯ ಪಠನ ಮಾಡುವ, ಪ್ರಾತಃ ಸಂಕಲ್ಪ ಗದ್ಯಮ್ ಸರ್ವಮೂಲದ ಸಾರದ ಕೃತಿ. ಅಜ್ಞಾನದ ಕತ್ತಲೆಯನ್ನು ನಾಶಪಡಿಸಿಕೊಂಡು ಜ್ಞಾನದ ಬೆಳಕನ್ನು ಹೆಚ್ಚಿಸುವ ಈ ಅಪೂರ್ವಕೃತಿಯನ್ನು ಶ್ರೀರಾಘವೇಂದ್ರಸ್ವಾಮಿಗಳು ರಚಿಸಿದ್ದಾರೆ. ಪ್ರತಿನಿತ್ಯ ಬೆಳಿಗ್ಗೆ ಪಾರಾಯಣ ಮಾಡಲು ಮಹದುಪಕಾರ ಮಾಡಿದ ಗುರುಗಳು.


ಶ್ರೀಹರಿಯು ಸರ್ವಶಬ್ದ ವಾಚ್ಯ, ವರ್ಣಾತ್ಮಕ, ಧ್ವನಾತ್ಮಕ ವಿಷ್ಣುಮಂತ್ರ ಮಹಿಮೆ ಪ್ರಣವ ಮಂತ್ರದ ವರ್ಣನೆ ಬ್ರಹ್ಮ ದೇವರ ಉಪಾಸನೆ, ಪುರುಷಸೂಕ್ತ ಪ್ರತಿಪಾದತ್ವ ಗುಣೋಪಸಂಹಾರ ಪೂರ್ವಕ ಭಗವಂತನ ಧ್ಯಾನರಾಯರು ವಿವರಿಸಿದ್ದಾರೆ. ಸಂಚಿತ, ಪ್ರಾರಬ್ಧ, ಆಗಾಮಿ ಪುಣ್ಯ ಪಾಪಗಳು, ಭೇದೇನ ಕರ್ಮಗಳು, ತ್ರಿವಿಧ ಅಪರೋಕ್ಷ, ಅದರಿಂದ ನಾಶಮಾಡ ಬಹುದಾದ ಕರ್ಮಗಳು, ಬ್ರಹ್ಮನ ಪ್ರಾರಬ್ಧ, ಕಾಲ ವಿಭಾಗಗಳ ವರ್ಣನೆ ಕೂಡಿದೆ. ಶ್ರೀವಾಯುದೇವರ ಮಹಿಮೆ, ದೇವತೆಗಳು, ಋಷಿಗಳು, ಮತ್ತು ಮಾನವರು ಕ್ರಮದಿಂದ ವಾಯುಸ್ಥ ಸೂರ್ಯಾಂತರ್ಗತ ಅಗ್ನ್ಯಂತರ್ಗತ, ಭಗವಂತನ ಉಪಾಸಕರು. ರಮಾ, ನಾರಾಯಣ ನಂತರ ಬ್ರಹ್ಮ, ವಾಯು ಸರ್ವಶಬ್ದ ವಾಚಕರು ಎಂಬ ವಿವರ ತಿಳಿಸಿದ್ದಾರೆ. ಓಂಕಾರದ ಪ್ರತಿಪಾದನೆ, ಆಧ್ಯಾತ್ಮಾದಿಗಳಲ್ಲಿ ಮುಖ್ಯ ಪ್ರಾಣನ ಮೂವತ್ತು ರೂಪಗಳು, ಅವೇನೆಂದರೆ ಆಧ್ಯಾತ್ಮ, ಆದಿದೈವ, ಆದಿಭೂತ, ಈ ಮೂರು ಪ್ರಬೇಧಗಳಲ್ಲಿ ಒಂದೊಂದರಲ್ಲಿ ಹತ್ತು ರೂಪಗಳು, 21,600 ಸಲ ಹಂಸಮಂತ್ರ ಜಪ ಪ್ರಾಣದೇವರು ಜಪಿಸುವುದು, ಬೃಹಿತೀ ಸಹಸ್ರ ಪ್ರತಿಪಾದನೆ, ಅವತಾರಗಳಲ್ಲಿ ಭಗವಂತನ ಕಾರ್ಯ, ಶ್ರೀಹರಿಯ ಸೃಷ್ಟಿಕತೃತ್ವ ನಿರೂಪಣೆ, ಜೀವ ತ್ರೈವಿಧ್ಯ ಯೋಗ್ಯರಿಗೆ ಜ್ಞಾನ, ಅಪರೋಕ್ಷ, ದೇಶಕಾಲ

ಭೇದದಿಂದ ಕರ್ಮಫಲ ವೈಲಕ್ಷಣ್ಯ, ಭರತ ಖಂಡವು ಕರ್ಮ ಭೂಮಿ ಎಂಬ ನಿರೂಪಣೆ ಮತ್ತು ಭೋಗಭೂಮಿಯಿಂದ ವೈಲಕ್ಷಣ್ಯ, ಅದರ ವಿವರಗಳು ಕೂಡಿದೆ. ಶ್ರೀಮದಾಚಾರ್ಯರ 37 ಗ್ರಂಥಗಳ ವಿವರಣೆಯೊಂದಿಗೆ ದುರ್ಭಾಷ್ಯಗಳ ನಿರಾಕರಣೆ, ವೈಷ್ಣವ ಸಿದ್ಧಾಂತದ ನವ ಪ್ರಮೇಯಗಳ ವಿವರಣೆಗಳನ್ನು ರಾಯರು ತಿಳಿಸಿದ್ದಾರೆ. ಶ್ರೀವಾಯುದೇವರ ಅವತಾರ ತ್ರಯಗಳು, ಅವರ ಏಕಾಂತ ಭಕ್ತರ ಸಾಧನೆಗಳನ್ನು ಅರಿಯಬಹುದು. ಸದ್ಗುರು ಸ್ವಯಂ ತತ್ವಜ್ಞಾನಿಯಾಗಿದ್ದು, ದ್ವಾತ್ರಿಂಶ ಲಕ್ಷಣಗಳು (32 ಲಕ್ಷಣಗಳು) ಅದರ ಪ್ರಣವಾದಿ ವೈಷ್ಣವ ಮಂತ್ರ ಜಪಗಳ ಮಹಿಮೆಗಳನ್ನು ಶ್ರೀರಾಘವೇಂದ್ರ ಸ್ವಾಮಿಗಳು ವಿಸ್ತಾರವಾದ ಅರ್ಥಗಳೊಂದಿಗೆ ಸಾಧಕರಿಗೆ ತಿಳಿಸಿದ್ದಾರೆ. ನಿರಂತರ ಹರಿಧ್ಯಾನ, ಭಕ್ತಿ, ಭಗವಂತನ ವಿಶಿಷ್ಟರೂಪಗಳನ್ನು ಧ್ಯಾನಿಸುವ ಶ್ರೀವಾಯುದೇವರನ್ನು ರಾಯರು ಅನೇಕ ರೀತಿಯಿಂದ ಸ್ಮರಿಸಿದ್ದಾರೆ. ವೇದೋಕ್ತಗಳನ್ನು ಸದಾ ಧ್ಯಾನಿಸುವ ವಾಯುದೇವರು ಮಹಾಧಿಕಾರಿಗಳೆಂದು ಬ್ರಹ್ಮವಾಣಿಯವರ "ಕ್ರಿಯೋಪ ಸಂಹಾರದಲ್ಲಿರುವ ವಿಶೇಷ (ಗಣೋಪಾಸನೆಯಲ್ಲಿ ಸಮವಾಗಿದ್ದರೂ,ಕ್ರಿಯೋಪಾಸನೆಯಲ್ಲಿ ಬ್ರಹ್ಮ, ವಾಣಿಯ ಕ್ರಿಯೆ ಭಿನ್ನ) ಶ್ರೀವಾಯು ದೇವರು ಕರುಣಾಮಯಿ,ಭಕ್ತರಿಗೆ ಅನು ಗ್ರಹಿಸುವ ಸರ್ವಜ್ಞರು ಈಶ-ಲಕ್ಷ್ಮೀಋಜು ಜ್ಞಾನವೈಲಕ್ಷಣ್ಯಗಳನ್ನು ವಾಯು ದೇವರೇ ಸರ್ವರಿಗೂ ಜ್ಞಾನೋಪದೇಶಿಕರೆಂದು ರಾಯರು ಸ್ಪಷ್ಟಪಡಿಸಿ, ಗುರು ವಿವೇಕ ತಿಳಿಸಿದ್ದಾರೆ.

ಬಿಂಬ ಪ್ರತಿಬಿಂಬ ಭಾವ, ಶ್ರೀಹರಿಯೇ ಸರ್ವಬಿಂಬ ಸರ್ವಕರ್ತ, ಸರ್ವಶಬ್ದ ವಾಚ್ಯನೆಂದು, ಬ್ರಹ್ಮ ವಾಯು ನಿರಭಿಮಾನಿಗಳೆಂದು ಅಭಿಮಾನ ತ್ಯಾಗವೇ ಮೋಕ್ಷಕ್ಕೆ ಸಾಧನ,ಇದನ್ನು ದೊರಕಿಸುವವರು ವಾಯುದೇವರೆಂದು ಶ್ರೀರಾಘವೇಂದ್ರ ಸ್ವಾಮಿಗಳು ವಿವರಿಸಿದ್ದಾರೆ. ಶ್ರೀವಾಯುದೇವರು ನಿತ್ಯಪರೋಕ್ಷಿಗಳೆಂದು ಮುಕ್ತಪ್ರಾಯರೆಂದು ತತ್ವಾಭಿಮಾನಿಗಳೂ ಅನಾದ್ಯಪರೋಕ್ಷಿಗಳಾದರೂ, ಅವರಿಗೆ ವಾಯುದೇವರೇ ನಿಯಾಮಕರೆಂದು ಸ್ಪಷ್ಟಪಡಿಸಿದ್ದಾರೆ.ಲಕ್ಷ್ಮೀ ಮುಖ್ಯ ಪ್ರಾಣದೇವರ ಸಹಿತ ಶ್ರೀಹರಿಯನ್ನು ಉಪಾಸಿಸಬೇಕೆಂದು ತಿಳಿಸಿದ್ದಾರೆ. ಪ್ರಣವೋಪಾಸನೆಯಲ್ಲಿ ಮುಖ್ಯಾಧಿಕಾರಿಗಳಾದ ಶ್ರೀಮದಾನಂದತೀರ್ಥರ ಅಂತರ್ಯಾಮಿ ನಾರಾಯಣನ ಮಹಿಮೆಯ ವರ್ಣನೆ ಪ್ರಾತಃಸಂಕಲ್ಪ ಗದ್ಯದಲ್ಲಿ ರಾಯರು ಭಕ್ತಿಯಿಂದ ಧನ್ಯತೆಯಿಂದ ಸಾಧಕರಿಗೆ ವಿವರಿಸಿದ್ದಾರೆ.

ಪ್ರಣವೋಪಾಸಕಾನಾಂ ಅಸ್ಮದಾದಿಗುರೋಣಾಂ
ಶ್ರೀಮದಾನಂದತೀರ್ಥ ಶ್ರೀಮಚ್ಚರಣಾನಾಂ
(ಅಂತರ್ಯಾಮಿನ್)

ಶ್ರೀನಾರಾಯಣನು ಅನಂತರೂಪವುಳ್ಳವನು,ಎಲ್ಲಾ ರೂಪಗಳು ಅಭಿನ್ನಗಳೆಂದು ಮೂಲನಾರಾಯಣನಿಂದ ಪ್ರಕಟಗೊಂಡ ವಾಸುದೇವಾದಿ ಚತುರ್ ರೂಪಗಳಲ್ಲಿ



ಅನಿರುದ್ಧರೂಪ - ಜಗತ್ ಪಾಲನೆ

ಪ್ರದ್ಯುಮ್ನ ರೂಪ - ಸೃಷ್ಟಿ

ಸಂಕರ್ಷಣ ರೂಪ- ಜಗತ್ತಿನ ಲಯ ಕಾರ್ಯವು ನಡೆಯುತ್ತದೆಂದು, ಸಂಕರ್ಷಣನನ್ನು ಜಯಾ ನಾಮಕರೂಪ ಶ್ರೀಮಹಾಲಕ್ಷ್ಮೀಯು ಸೇವಿಸುತ್ತಾಳೆಂದು ರಾಯರು ವ್ಯಕ್ತ ಪಡಿಸಿದ್ದಾರೆ.

ನಿಯತ ಗುರುವಿನ ಬಿಂಬೋಪದೇಶ, ಅಪರೋಕ್ಷ ದರ್ಶನ ಕರ್ಮಕ್ಷಯ,ಭೋಗದಿಂದ ಪ್ರಾರಬ್ಧನಾಶ, ಬ್ರಹ್ಮ, ವಾಯುವಿನ ಪ್ರಾರಬ್ಧ ಕೇವಲ ಸುಖರೂಪದಿಂದ ಕೂಡಿರುತ್ತದೆಂದು, ಕೆಳಗಿನ ವರ ಪ್ರಾರಬ್ಧ ಹೆಚ್ಚು ಹೆಚ್ಚಾಗಿ ದುಃಖ ಮಿಶ್ರವಾಗಿರುತ್ತದೆಂದು ಶ್ರೀಗಳವರು ವಿವರಿಸಿದ್ದಾರೆ.

ತಥಾ ಸ್ವಸ್ವಮಗ್ರ ಯೋಗ್ಯತಾಭಿಜ್ಞ
ಪರಮಾನುಗ್ರಹಶೀಲ ಭಗತ್ಪ್ರೇರಿತ

ಚತುರ್ಮುಖಾದಿ ಸದ್ಗುರೂಪದಿಷ್ಟ - ಸ್ವಸ್ವಯೋಗ್ಯ ಭಗವದ್ರೂಪಗುಣೋಪಾಸನಾಸಂ ಜಾತ ಸ್ವಸ್ವಯೋಗ್ಯ ಭಗವದ್ರೂಪ ವಿಶೇಷ ದರ್ಶನ ಭೋಗಾಭ್ಯಾಂ ವಿನಿಷ್ಟಾನಿಷ್ಟ ಸಂಚಿತ ಪ್ರಾರಬ್ಧ ಲಕ್ಷಣಾಶೇಷ ಕರ್ಮಣಾಂ"....ಎಂದು.

ವೈಕುಂಠ ವರ್ಣನೆ, ಶ್ರೀ ಭೂ, ದುರ್ಗಾ, ವೈಕುಂಠ ನಗರ, ಲಕ್ಷ್ಮ್ಯಾತ್ಮಕ ಅಂಗದೇಹ, ತ್ರಿಣಗಳ ಬಂಧ ಪ್ರಕಾರಗಳು, ವಿರಜಾ ನದಿ ಸ್ನಾನದಿಂದ ಅಂಗದೇಹ ಭಂಗ, ಪ್ರಾರಬ್ಧ ಕರ್ಮ ನಿಃಶೇಷ ನಾಶ, ಅಂಗದೇಹ ತೊರೆದು ಪರಮಾತ್ಮನ ಉದರದಲ್ಲಿ ಧ್ಯಾನಿಸುವ ಆನಂದಪಡುವ ದೇಹೀಗಳು, ವಾಸು ದೇವನ ಸೃಷ್ಟಿ ಕಾಲದ ನಂತರ ಉದರದಲ್ಲಿರುವವ ರನ್ನು ಯೋಗ್ಯ ಸ್ಥಾನದಲ್ಲಿಟ್ಟು, ಆನಂದ ವೈಚಿತ್ರ್ಯ ಅನು ಭವಕ್ಕೆ ಅವಕಾಶ ಕಲ್ಪಿಸುವುದು ಎಂಬ ವಿಷಯವನ್ನು ರಾಯರು ವಿವರವಾಗಿ ಸೃಷ್ಟಿಯ ವಿಸ್ಮಯವನ್ನು ವಿವ ಲಿಸಿದ್ದಾರೆ. ಶೇಷದೇವರೊಂದಿಗೆ ಶ್ರೀಹರಿಯ ಸ್ಥಾನ, ಪ್ರಳಯಕಾಲ ಮುಕ್ತಾಮುಕ್ತ ತ್ರಿವಿಧಜೀವರು,ಶ್ರೀಹರಿ ಯ ಉದರದಲ್ಲಿರುವ ಅವರ ಸ್ಥಾನಗಳು,ಶ್ರೀದೇವಿಯ ರತಿಪಾತ್ರ, ಮಹಾಲಕ್ಷ್ಮಿಯ ಮಹಿಮೆ ದೇಶಕಾಲಗಳು, ಯಾವಾಗಲೂ ಈಶನ ಅಧೀನ ಕಾಲಗಣನೆ, ಇತ್ಯಾ ದಿಯ ವರ್ಣನೆ ತಿಳಿಸಿದ್ದಾರೆ.

ತ್ರಿಧಾಮಗಳಾದ ಶ್ವೇತದ್ವೀಪ, ಅನಂತಾಸನ, ವೈಕುಂಠದ ವರ್ಣನೆ, ವಾಗ್ದೇವಿಯ ಮಹಿಮೆ, ಓಂಕಾ ರದ ಪ್ರತಿಪಾದ್ಯನಾದ ರಮಾರೂಪ ಸಹಿತ ಅಷ್ಟ ಭಗ ವದ್ರೂಪಗಳು,ಚಕ್ರ,ಕಿರೀಟಾದಿ ಆಯುಧ, ಆಭರಣಗಳ ವರ್ಣನೆ ವಿವರಿಸಿದ್ದಾರೆ. ಸೂರ್ಯವಂಶ, ಶ್ರೀರಾಮ ಚಂದ್ರನ ಮಹಿಮೆ,ಅಪರಾಧ ಸಹಿಷ್ಣು-ಕ್ಷಮಾ ಸಮುದ್ರ ಸರ್ವಾಧಿಪತಿ, ದೇಹೇಂದ್ರಿ ಯಾಧಿಪತಿ, ಅಷ್ಟ ಮಹಾ ಮಂತ್ರಗಳ, ಜಪಗಳ ವಿವರ, ರಾಯರು ತಿಳಿಸಿದ್ದಾರೆ. ಮುಖ್ಯ ಪ್ರಾಣದೇವರು ವಾಯುಪ್ರಾಣ ಧರ್ಮಭಕ್ತಿ ಶಬ್ಧಗಳಿಂದ ವಾಚ್ಯನೆಂದು ತನ್ನಾಮಕರೂಪಗ'ಳುಳ್ಳ ವನೆಂದು ಪರಮದಯಾಳು,ಕ್ಷಮಾಸಮುದ್ರನೆಂದು, ಈತನ ಮೂಲಕ ಶ್ರೀಹರಿಯು ಪ್ರೇರಣೆ ದೊರೆಯು ತ್ತದೆಂದು ವಿವರಿಸಿದ್ದಾರೆ.

ಶ್ರೀಹರಿಯ ಪ್ರೇರಣೆಯ ಅನುಸಾರ ಸಂಭ ವಿಸುವ ಸರ್ವಕರ್ಮಗಳನ್ನು,ಶ್ರೀಹರಿಯ ಪ್ರೀತಿಯನ್ನು ಉದ್ದೇಶಿಸಿ, ಆಚರಿಸಿ, ಅರ್ಪಿಸುವ ಸಂಕಲ್ಪ ತೊಡಗ ಬೇಕೆಂದು ವಿವರಣೆಯಿದೆ. ಮುಖ್ಯ ಪ್ರಾಣದೇವರ ಮಹಿಮೆ,ಸರ್ವಕರ್ಮಕರ್ತಾ,ಫಲಭೋಕ್ತಾ, ಭೋಜಯಿತಾ, ಸರ್ವ ಕರ್ಮ ಸಾಕ್ಷಿ, ಸರ್ವಕರ್ಮ ನಿಷ್ಟ,ವೈಷ್ಣವೋತ್ತಮ, ಭಗವದ್ರೂಪಾಸಕನೆಂದು ವಾಯುದೇವರನ್ನು ರಾಯರು ಭಕ್ತಿಯಿಂದ ಸ್ಮರಿಸಿದ್ದಾರೆ.

ಶ್ರೀಭಾರತೀಶನೇ ರುದ್ರಾದಿ ತ್ವಾತ್ವಿಕ ದೇವತೋಪಾಸಿತಚರಣ ನೆಂದು, ಶ್ರೀಮುಖ್ಯ ಪ್ರಾಣಪ್ರೇರಿತನಾಗಿ ಸರ್ವಕರ್ಮಗಳನ್ನು ಮಾಡುತ್ತೇ ನೆಂದು ಅನುಸಂಧಾನ ಮಾಡಿಕೊಳ್ಳಬೇಕೆಂದು ಶ್ರೀರಾಘವೇಂದ್ರ ಸ್ವಾಮಿ ಗಳು ಪ್ರಾತಃಸಂಕಲ್ಪ ಗದ್ಯದಲ್ಲಿ ಭಕ್ತರಿಗೆ ಸಾಧಕರಿಗೆ ತಿಳಿಸಿದ್ದಾರೆ. ದೇಶ ಕಾಲ ಅವಸ್ಥೆಗಳಿಗೆ ಯೋಗ್ಯವಾದ ನಿತ್ಯ ನೈಮಿತ್ತಕ ಕಾಮ್ಯಗಳೆಂಬ ತ್ರಿವಿಧ ಕರ್ಮಗಳು ಶ್ರೀಹರಿಯು ಪೂಜೆಯೆಂಬ ಭಾವನೆಯಿಂದ ಶ್ರೀಭಾರತೀಶ ನಿಂದ ಪ್ರೇರಿತನಾಗಿ ನಾನು ಮಾಡುತ್ತೇನೆಂದು, ಇದಲ್ಲದೇ ನನ್ನ ಶಿಷ್ಯರು ಮತ್ತು ಇನ್ನಿತರ ಭಾಂದವರು, ಸಾಧಕರಿಂದ ಅನುಸಂಧಾನ ಮಾಡಿ ಕೊಂಡು ಮೇಲೆ ಹೇಳಿದ ರೀತಿಯಲ್ಲಿ ಮಾಡಿಸುತ್ತೇನೆಂದು ವೈಷ್ಣವೋತ್ತ ಮರಾದ ಜೀವೋತ್ತಮರಾದ, ಶ್ರೀವಾಯುದೇವರನ್ನು, ಶ್ರೀಹರಿಯನ್ನು ಪ್ರಾರ್ಥಿಸಿ ಪ್ರಾತಃಸಂಕಲ್ಪ ಗದ್ಯವನ್ನು ಸಂಪೂರ್ಣಗೊಳಿಸಿ ಅನುಸಂಧಾನ ಮಾಡಿಕೊಂಡು ಸಂಕಲ್ಪ ಮಾಡಬೇಕು. ಶ್ರೀವಿಷ್ಣು ಪ್ರೀತಿಕರವಾದ ಕರ್ಮವೇ ಸರಿಯಾದ ಮಾರ್ಗವೆಂದು,ಭಕ್ತ ಜನರಿಗೆ, ಸಾಧಕರಿಗೆ ಮಂತ್ರಾ ಲಯದ ಪ್ರಭುಗಳು ತಿಳಿಸಿ ಹೇಳಿದ್ದಾರೆ.

ಇತಿ ಶ್ರೀ ರಾಘವೇಂದ್ರಾಖ್ಯಯತಿನಾ ಕೃತಮಂಜಸಾ ।

ಪ್ರಾತಃಸಂಕಲ್ಪಗದ್ಯಂ ಸ್ಯಾತ್ ಪ್ರೀತ್ಯೈ ಮಾಧವಮಧ್ವಯೋಃ॥

ಇತಿ ಶ್ರೀಮದ್ರಾಘವೇಂದ್ರಯತಿ ಶಿರೋಮಣಿಭಿರ್ವಿರಚಿತಂ



**ಪ್ರಾತಃ ಸಂಕಲ್ಪಗದ್ಯಂ ಸಮಾಪ್ತಂ**

## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್ ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯ ದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರ ಲಾಗಿದೆ.

**- ಕಾರ್ಯನಿರ್ವಹಣಾಧಿಕಾರಿ**

# त्रयोदशः पाठः
## ಹದಿನೇಳನೇ ಪಾಠ

# ಸಂಸ್ಕೃತ ಕಲಿಯೋಣ...!!

ರಚನೆ:- ಮಹಾ ಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ
ನಿರ್ವಹಣೆ:- ಮಹಾ ಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ

अन्नम् = ಅನ್ನ,ಆಹಾರ, ಭೋಜನ
पुरा = ತುಪ್ಪ
घृतम् = ಆಲಸ್ಯತನ
चिरम् = ಹಿಂದಿನದು, ಪೂರ್ವದ್ದು, ಹಳೆಯದು
आलस्यम् = ಯಾವಾಗಲೂ
अर्थम् = ಜ್ಞಾನ
कुर्युः = ಮಾಡು, ಮಾಡಿದ್ದೀರಿ, ಮಾಡಿರಿ
कुर्यात = ಮಾಡಿದ್ದೀಯಾ / ಮಾಡುತ್ತಿಯಾ
कुर्याम = ಮಾಡುತ್ತೇವೆ / ಮಾಡುತ್ತೀರಿ

### ಪ್ರಶ್ನೆ

1. अद्य पाकं के कुर्युः?
2. गृहे घृतं नास्ति।
3. तटाके जलं नास्ति।
4. आलस्यं करोषि किम्?
5. त्वं तत्र चिरं आसीः किमर्थम्?
6. अस्मदग्रजार्थं अहं तत्रासम्।
7. देवः पुरा प्रथमं जलं अकरोत्।
8. वयं पाकं सम्यक् कुर्याम।
9. घृतं नास्ति चेत् शाकं कथं कुर्याम?
10. अस्मद्गृहे युष्मद् जनकः तूष्णीमेव आलस्यं करोति; त्वमपि अत्रासि किं? शीघ्रं स्नानं कुरु।

### ಪ್ರಶ್ನೆ

1. ಇಂದಿನ ಭೋಜನ ಯಾರು ಮಾಡಿದ್ದಾರೆ ?
2. ಮನೆಯಲ್ಲಿ ತುಪ್ಪವು ಇಲ್ಲ ?
3. ಸರೋವರದಲ್ಲಿ ನೀರು ಇಲ್ಲ
4. ಆಲಸ್ಯವನ್ನು ಏಕೆ ಮಾಡುತ್ತೀಯ?
5. ಯಾಕೆ ನೀನು ಅಲ್ಲಿ ಬಹಳ ಹೊತ್ತು ಇದ್ದೀಯಾ?
6. ನಮ್ಮ ಹಿರಿಯರಿಗೋಸ್ಕರ ನಾನು ಅಲ್ಲಿದ್ದೆ
7. ದೇವನು ಬಹು ಹಿಂದಿಯೇ ಪ್ರಥಮವಾಗಿ ನೀರನ್ನು ಸೃಷ್ಟಿಸಿದನು. (ನಿರ್ಮಿಸಿದನು)
8. ನಾವು ಅಡುಗೆಯನ್ನು ಚೆನ್ನಾಗಿ ಮಾಡುತ್ತೇವೆ.
9. ತುಪ್ಪವೂ ಇಲ್ಲದಿದ್ದರೆ ಅದು ಹೇಗೆ ಪಲ್ಯೆಯನ್ನು ಮಾಡುತ್ತೀರಿ?
10. ನಮ್ಮ ಮನೆಯಲ್ಲಿ ನಿಮ್ಮ ತಂದೆಯು ಸಾವಕಾಶವಾಗಿಯೇ ಆಲಸ್ಯವನ್ನು ಮಾಡಿದ್ದಾರೆ ನೀನು ಅಲ್ಲಿ ಏನಾದರೂ ಇದ್ದೇಯೋ? ತ್ವರಿತವಾಗಿ ಸ್ನಾನ ಮಾಡು.

### ಉತ್ತರ

1. ಇಂದು ಭೋಜನವನ್ನು ಯಾರು ಮಾಡುತ್ತಾರೆ?
2. ನಿಮಗೋಸ್ಕರ ನಾನೇ ಮಾಡುತ್ತೇನೆ
3. ಹಾಗಾದರೆ ಯಾರು ಮಾಡುತ್ತಾರೆ?
4. ನಿಮ್ಮ ತಂದೆ
5. ಇಂದು ಅವರೆಲ್ಲರೂ ನಿಮ್ಮ ಮನೆಯಲ್ಲಿ ಇದ್ದಾರೋ?
6. ಹಾಗೆನೂ ಇಲ್ಲ, ಹಾಗೆಯೇ ಆಗಲಿ
7. ನಿಮ್ಮ ಮಕ್ಕಳು ನಮ್ಮ ಮನೆಯಲ್ಲಿ ಅನ್ನತಿನ್ನುವುದಕೋಸ್ಕರ ಇದ್ದಾರೆ.
8. ಹಾಗೋ ತಾವೆಲ್ಲರೂ ಸ್ವಲ್ಪವಾದರೂ ಇರಿ
9. ತಾವೆಲ್ಲರೂ ಮಂಚದ ಮೇಲೆ ಇದ್ದೀರಾ ತಾನೇ?
10. ಸಾವಕಾಶವಾಗಿ ಇರಿ.

### ಉತ್ತರ

1. अद्य पाकं कः करोति?
2. युष्मदर्थं अहमेव करोमि।
3. नो चेत् कः करोति?
4. युष्मत्पिता।
5. अद्य ते सर्वे युष्मद् गृहे सन्ति वा?
6. किमपि नास्ति; तथैव भवतु।
7. युष्मद् पुत्राः अस्मद् गृहे अन्नार्थं सन्ति।
8. एवं वा, यूयं किञ्चिदत्र भवन्तु।
9. यूयं मञ्चे सन्ति वा?
10. तूष्णीं भव।



# ರಾಶಿ ಫಲಗಳು



ಮೂಲ- ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ
ಅನುವಾದ- ಕೆ.ಎನ್.ಎಸ್

**ಮೇಷ**

ಭೂಮಿ ಖರೀದಿಸುವ ಅವಕಾಶವಿದೆ. ಮನೆಯಲ್ಲಿ ಶುಭ ಕಾರ್ಯಾಚರಣೆ ಒದಗಿ ಬರಲಿದೆ. ವಿದ್ಯಾರ್ಥಿಗಳಿಗೆ ವೈದ್ಯಕೀಯ ವಿದ್ಯೆಯಂತಹ ಅಸಮಾನ ಪ್ರತಿಭೆ ತೋರಿಸಬಹುದಾದ ಅವಕಾಶ ಬರುತ್ತದೆ. ಸಾಂಘಿಕ ಕಾರ್ಯಕ್ರಮಗಳಲ್ಲಿ ವಿಜಯ ಗೃಹ ವಾತಾವರಣ ಅಷ್ಟೇನು ಅನುಕೂಲಕರವಾಗಿರದು ರಚನಾ ವ್ಯಾಸಾಂಗದಲ್ಲಿ ಪ್ರತಿಭೆಯನ್ನು ತೋರಿಸಿ ಎಲ್ಲರನ್ನು ಬೆರಗುಗೊಳಿಸುವಿರಿ. ಶುಭಕಾರ್ಯಗಳಲಲ್ಲಿ ನಿರಂತರವಾಗಿ ಪಾಲ್ಗೊಳ್ಳುವಿರಿ. ಪ್ರಾಮಾಣಿಕತೆಯಿಂದ ಕಾರ್ಯಸಾಧನೆ ಮಾಡಿ ವಿಜಯ ಸಾಧಿಸುತ್ತೀರಿ.

**ವೃಷಭ**

ಆಕಸ್ಮಿಕ ಧನಲಾಭ ನಿಮ್ಮನ್ನು ಹುಡುಕಿ ಬರಲಿದೆ. ಗಂಡ - ಹೆಂಡಿರ ಮಧ್ಯೆ ಮಾತು ವಿಲೀನವಾಗುತ್ತದೆ. ಒಬ್ಬರ ಅಭಿಪ್ರಾಯವನ್ನು ಮತ್ತೊಬ್ಬರು ಗೌರವಿಸುತ್ತೀರಿ. ದೈವಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುವಿರಿ.ಹಲವು ವ್ಯವಹಾರಗಳು ಸ್ತಬ್ಧಗೊಂಡು ಹಾಗೆಯೇ ಮುಂದುವರೆಯುತ್ತವೆ. ಕೋರ್ಟು ವ್ಯವಹಾರಗಳು ಕೈಗೂಡುವುದಿಲ್ಲ. ಕ್ರೀಡೆಗಳಲ್ಲಿ ರಾರಾಜಿಸುವಿರಿ. ತಾಯಿಯ ಆರೋಗ್ಯದಲ್ಲಿ ಜಾಗ್ರತೆ ಉತ್ತಮ.ಆಕಸ್ಮಿಕ ಧನಲಾಭ ಸುರಿಯುತ್ತದೆ. ಅದನ್ನು ಉಳಿಸಿಕೊಳ್ಳುತ್ತೀರಿ.

**ಮಿಥುನ**

ಸಮಾಜದಲ್ಲಿ ಪ್ರತ್ಯೇಕ ಸ್ಥಾನ ಒದಗಿ ಬರುತ್ತದೆ. ನಿಮ್ಮ ಮಾತುಗಳನ್ನು ಎಲ್ಲರೂ ಗೌರವಿಸುತ್ತಾರೆ. ನಿಮ್ಮ ಮಾತಿನ ವೈಖರಿ, ಪ್ರಖ್ಯಾತಿ ಬೆಳೆಯುತ್ತದೆ. ಹಿರಿಯರ ಮಾತನ್ನು ಗೌರವಿಸಲಿದ್ದೀರಿ. ಸ್ಥಿರಾಸ್ತಿಗಳನ್ನು ಕೊಳ್ಳುವ ಪ್ರಯತ್ನಗಳು ನೆರವೇರುತ್ತವೆ. ಆಕಸ್ಮಿಕ ಧನಲಾಭ ನಿಮ್ಮನ್ನು ಸೇರುತ್ತವೆ. ಅಂದು ಕೊಂಡ ಕಾರ್ಯಗಳು ನೆರವೇರುತ್ತವೆ. ಕುಟುಂಬ ವಾತಾವರಣ ಅನುಕೂಲವಾಗಿರುತ್ತದೆ.

**ಕರ್ಕಾಟಕ**

ಅನಾರೋಗ್ಯ ಸೂಚನೆಯಿದೆ. ನಾಭಿ ಪ್ರದೇಶ, ಉದರ ಸಂಬಂಧಿ ತೊಂದರೆಗಳು, ಪತ್ನಿಯ ವಿಷಯದಲ್ಲೂ ವೈದ್ಯರನ್ನು ಭೇಟಿಯಾಗುವುದು. ತಪಾಸಣೆ ಪರೀಕ್ಷೆಗಳು ಇರದೇ ಇರದು ನಿಧಾನವಾಗಿರುವುದು ಅವಶ್ಯಕ ಧನಪ್ರವಾಹಕ್ಕೇನೂ ಅಡ್ಡಿಯಿಲ್ಲ. ಶುಭಕಾರ್ಯಕ್ಕೆ ಶ್ರೀಕಾರ ಹಾಡುವಿರಿ.ಆನಂದಮಯವಾಗಿ ಜೀವನ ಸಾಗುತ್ತದೆ. ಉದ್ಯೋಗದಲ್ಲಿ ಪ್ರಗತಿಯಿದೆ. ಆದಾಯ ಮಾರ್ಗಗಳು ಉಂಟಾಗುತ್ತವೆ.

**ಸಿಂಹ**

ಗೃಹಸ್ಥಿತಿ ಸಾಮಾನ್ಯವಾಗಿದೆ. ವಾಗ್ವಾದಗಳು ಬೆಳೆಯುವುವು. ವಿದ್ಯಾರ್ಥಿಗಳಿಗೆ ಉನ್ನತ ವಿದ್ಯೆಗಳಿಗೆ ಅವಕಾಶವಿದೆ. ಹೊರದೇಶ ಪ್ರಯಾಣಗಳು ಕೂಡಿ ಬರಲಿವೆ. ಕುಟುಂಬ ವಿಷಯಗಳು ಪ್ರೋತ್ಸಾಹಕರವಾಗಿರುವುದಿಲ್ಲ. ಮಿಥ್ಯಾ ಸಾಧನೆಗಳನ್ನು ಸಹಿಸಬಲ್ಲಂಥಹ ಸಂದರ್ಭಗಳು ಬರಬಹುದು. ಕೋಪತಾಪಗಳನ್ನು, ಆಗ್ರಹಾವೇಶಗಳನ್ನು ಪ್ರತಿಕ್ರಿಯಿಸದೆ ಜಾಗ್ರತೆ ವಹಿಸುವುದು ಉತ್ತಮ ಭೂ, ಸ್ತಿರಾಸ್ತಿಗಳು ಇಮ್ಮಡಿ, ಮುಮ್ಮಡಿಯಾಗಿ ಕೂಡಿ ಬರುತ್ತದೆ.

**ಕನ್ಯ**

ಹೆಂಡತಿ - ಮಕ್ಕಳ ವಿಷಯದಲ್ಲಿ ಆನಂದಾನುಭವವಾಗುತ್ತದೆ. ಕುಟುಂಬದ ಪ್ರಗತಿಯುಂಟಾಗಲಿದೆ. ನೀವು ಕೆಲಸ ಮಾಡುತ್ತಿರುವ ಕಾರ್ಯಾಲಯದಲ್ಲಿ ಒತ್ತಡ ಹೆಚ್ಚಳವಾಗುತ್ತದೆ. ಮಾಡಿದ ಕೆಲಸವನ್ನು ಪುನಃ ಮಾಡುವ ಸಂದರ್ಭ ಬರುತ್ತದೆ. ಕಾರ್ಯಾಲಯಗಳಲ್ಲಿ ಮೇಲಿನ ಅಧಿಕಾರಗಳ ಬಾಧೆ, ಧನಾಭಿವೃದ್ಧಿ ಆಗುತ್ತದೆ. ಅಪರಿಷ್ಕೃತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಶುಭ ಕಾರ್ಯಾಚರಣೆ ವಿನೋದ ವಿಹಾರಗಳಲ್ಲಿ ಪಾಲ್ಗೊಳ್ಳುವಿರಿ.

**ತುಲಾ**

ರಾಜಕೀಯದಲ್ಲಿ ಚುರುಕಾಗಿ ವ್ಯವಹರಿಸುವಿರಿ. ರಾಜಕೀಯ ಪಕ್ಷಗಳನ್ನು ಬದಲಾಯಿಸುವಿಕೆ ಸಲ್ಲದು. ರಾಜಕೀಯ ಕ್ಷೇತ್ರದಲ್ಲಿ ಮಾತಾಡಿ ಸಾಧಿಸಿ. ಪ್ರಜಾದರಣ ಹೊಂದುವಿರಿ. ಉದ್ಯೋಗಸ್ಥರಿಗೆ ಅಧಿಕಾರ ಗಡಿ ವಿಸ್ತರಣಗೊಂಡು ವೃದ್ಧಿಸಲಿದೆ. ಸಂಸ್ಥೆಗಳನ್ನು ಸಕ್ರಮವಾಗಿ ನಡೆಸಿ ನಿಮ್ಮ ಜವಾಬ್ದಾರಿಗಳನ್ನು ನೆರವೇರಿಸುವಿರಿ. ಮಾಸಾಂತ್ಯದಲ್ಲಿ ಧನಲಾಭ ಉಂಟಾಗುತ್ತದೆ. ಆರೋಗ್ಯ ವಿಷಯದಲ್ಲಿ ಜಾಗ್ರತೆ ಅಗತ್ಯ.

**ವೃಶ್ಚಿಕ**

ಗುರು ಬಲವಿರುವುದಿಲ್ಲ. ಎಲ್ಲಾ ದೋಷಗಳು ತೊಲಗುವುವು ಸರ್ವ ಕಾರ್ಯಸಿದ್ಧಿ ಜೀವನದಲ್ಲಿ ಪ್ರಗತಿ, ಪ್ರಮೋಷನ್‌ನಿಂದ ಸ್ಥಾನಪಲ್ಲಟ ಶತ್ರುಭಯ, ಉನ್ನತ ಶಿಖರ ಅಧಿಕಾರೋಹಣ, ಗ್ರಂಥ ಪಠನ, ಅಧಿಕಾರ ಸಿದ್ಧಿಯಾಗಲಿದೆ. ಕೈತುಂಬಾ ಹಣ ಸೇರಲಿದೆ. ಕುಟುಂಬದ ಸಮಸ್ಯೆಗಳಿಗೆ ಉನ್ನತವಾದ ಅನುಕೂಲಕರವಾದ ಪರಿಷ್ಕಾರಗಳಿಗಾಗಿ ಎದುರು ನೋಡುವಿರಿ.

**ಧನಸ್ಸು**

ಗ್ರಹಸ್ಥಿತಿ ಅನುಕೂಲಕರವಾಗಿದ್ದು ಇತರರ ಮೇಲೆ ನಿಮ್ಮ ಪ್ರಭಾವ ಅಮೋಘವು ಧನದ ವಿಚಾರದಲ್ಲಿ ವಾಗ್ವಾದವೇರ್ಪಡುತ್ತದೆ. ಕಾರ್ಯ ಜಯ ಸಾಧಿಸುವಿರಿ. ರಾಜಕೀಯ ಕ್ಷೇತ್ರದಲ್ಲಿ ನೂತನ ಪರಿಚಯಗಳು ಏರ್ಪಡುತ್ತವೆ. ನೀವೇ ಮಾರ್ಗದರ್ಶಕರಾಗುತ್ತೀರಿ. ಗೃಹ ನಿರ್ಮಾಣಾದಿಗಳು ಹೊಸ ಮನೆ, ಹೊಸ ವಸ್ತು ವಾಹನಗಳು ಖರೀದಿಸುವ ಅವಕಾಶ ಮೃಷ್ಟಾನ್ನ ಭೋಜನ ಲಭಿಸಲಿದೆ ಆಚಾರ ವ್ಯವಹಾರಗಳು ನೆರವೇರಲಿವೆ.

**ಮಕರ**

ಗ್ರಹಸ್ಥಿತಿ ಮಿಶ್ರ ವೃತ್ತಿ ವ್ಯವಹಾರಗಳು ಸಾಮಾನ್ಯ ಅಸತ್ಯಂ ಪ್ರಲೋಭಗಳ ಸೆಳೆತ ಶರೀರ ಆರೋಗ್ಯ ಸಾಮಾನ್ಯ ಸೊಂಟ ಮೊಣಕಾಲು ನೋವು ಸಮಸ್ಯೆಗಳಿಂದ ವೈದ್ಯೋಪಚಾರ ಪಡೆಯಲಿದ್ದೀರಿ. ಧನವ್ಯಯ, ಚಂಚಲತೆ ಜನ್ಮ ರಾಶಿಯಲ್ಲಿ ಶನಿ ಸಂಚಾರದ ಪ್ರಭಾವ ತೊಲಗಲು ಶನೈಶ್ವರ ಸಂಬಂಧ ಶ್ಲೋಕ ಧ್ಯಾನಂ, ರುದ್ರಾಭಿಷೇಕ, ಹನುಮಾನ್ ಚಾಲೀಸದಂತಹ ದಿವ್ಯ ಸ್ತೋತ್ರಗಳನ್ನು ಪಠಿಸುವುದು ಉತ್ತಮ.

**ಕುಂಭ**

ಧೈರ್ಯದಿಂದ ಪ್ರತಿ ಕಾರ್ಯದಲ್ಲೂ ಮುನ್ನಡಿಗೆ ಹಾಕುವಿರಿ ಗಮನವನ್ನು ಲಕ್ಷ್ಯದ ಕಡೆಗೆ ಎಳೆದೊಯ್ಯುವಿರಿ. ಗ್ರಹಸ್ಥಿತಿ ಅನುಕೂಲಕರವಾಗಿದೆ. ಅವಸರದಲ್ಲಿ ನಿರ್ಣಯಬೇಡ ಶುಭಯೋಗಗಳು ಒದಗಿ ಬರಲಿವೆ. ವಿದ್ಯಾರ್ಥಿಗಳಿಗೆ ಅನುಕೂಲಕರವಾದ ಸಮಯ, ಜೀವನವು ಆನಂದದಿಂದ ನಿರಾಳವಾಗಿ ಸಾಗುತ್ತವೆ. ಉತ್ತಮವಾದ ಆಲೋಚನೆಗಳು, ಪರೋಪಕಾರ ಬುದ್ಧಿ ಒದಗಿ ಬರುತ್ತವೆ.

**ಮೀನ**

ಆತ್ಮಬಲ,ಮುಖ ವರ್ಚಸ್ಸು ವೃದ್ಧಿಸುತ್ತದೆ. ಶರೀರದ ಆರೋಗ್ಯ ಉತ್ತಮವಾಗಿರುತ್ತದೆ. ಊಹೆಗಿಂತಲೂ ಅಧಿಕ ಧನವ್ಯಯವಾಗುತ್ತದೆ. ಶುಭಕಾರ್ಯ ಒದಗಿ ಬರುವುದರಿಂದ ಆನಂದಕರವಾದ ಸಮಯ ಮನೆಯಲ್ಲಿ ಮಂಗಳ ತೋರಣಗಳು ಅಧಿಕ ವ್ಯಯವಿದ್ದರೂ ಕಾರ್ಯ ಜಯ ಉಂಟಾಗುತ್ತದೆ. ಗೃಹ ನಿರ್ಮಾಣಗಳು ಆಲಸ್ಯವಾಗುತ್ತವೆ ದೈವ ಧ್ಯಾನ-ಧರ್ಮ ನಿಷ್ಠೆಯುಂಟಾಗುತ್ತವೆ.

# ಹರಿದಾಸ ಸಾಹಿತ್ಯ ಸಾಕಾರ ಮೂರ್ತಿ ಹೆಳವನಕಟ್ಟಿ ಗಿರಿಯಮ್ಮ

– ಶ್ರೀಧರ ರಾಯಸಂ

ಕನ್ನಡ ಹರಿದಾಸ ಸಾಹಿತ್ಯದ ಮಹಿಳಾ ಮಣಿ ಎನಿಸಿದ ಹೆಳವನಕಟ್ಟಿ ಗಿರಿಯಮ್ಮ, ಭಕ್ತಿ ರಸ ಹಂಚಿ, ಅನೇಕ ಕೀರ್ತನೆ ಗಳನ್ನು ರಚಿಸಿದ ಹರಿಭಕ್ತಿಯ ಸಾಕಾರ ಮೂರ್ತಿ. ಅನುಭವ ಅನುಭಾವಗಳು ಅಪೂರ್ವ ಸಂಸ್ಕಾರದ ಪಾವನ ಜೀವನವನ್ನು ಭಕ್ತ ಜನರಿಗೆ ಅನುಗ್ರಹಿಸುತ್ತಾ, ಹರಿದಾಸ ಸಾಹಿತ್ಯ ಪ್ರಚಾರ ಮಾಡಿದ ಪುಣ್ಯ ಮಹಿಳೆ ಗಿರಿಯಮ್ಮ.

ಶ್ರೀರಂಗನಾಥನನ್ನು ಪರಿಪರಿಯಾಗಿ ಅಲಂಕರಿಸಿ, ಆರಾಧಿಸಿ, ತಮ್ಮ ಕಾವ್ಯ ಶೈಲಿಯ ಸೌಂದರ್ಯ,ರಮ್ಯರಮಣೀಯ ಸಾಹಿತ್ಯ ಸೃಷ್ಟಿಸಿದ ಹೆಳವನಕಟ್ಟಿ ಗಿರಿಯಮ್ಮ ಆದರ್ಶನಾರಿಮಣಿಯಾದದ್ದು ಈಗ ಇತಿಹಾಸ ! ಗಿರಿಯಮ್ಮ ರಚಿಸಿದ ಚಂದ್ರಹಾಸ, ಕಾಲೀಯಮರ್ದನ ಕಥೆಗಳು ಈಗಲೂ ಪ್ರಚಲಿತ ವಾಗಿವೆ.

ಗಿರಿಯಮ್ಮ ರಾಣಿಬೆನ್ನೂರಿನಲ್ಲಿ ಭಿಷ್ಟಪ್ಪಗೆ ಪುತ್ರಿಯಾಗಿ ಜನಿಸಿ, ಹರಿಹರ ತಾಲೂಕು ಮಲೆಬೆನ್ನೂರಿನ ತಿಪ್ಪರಸನೊಂದಿಗೆ ವಿವಾಹವಾದಳು. ಅತ್ತೆಯ ಮನೆಯಲ್ಲಿ ಗಿರಿಯಮ್ಮ ಅನೇಕ ಜನರಿಗೆ ಅವರ ಜನ್ಮಾಂತರಗಳು, ಆಗು ಹೋಗುಗಳನ್ನು ಭವಿಷ್ಯದ ರೂಪದಲ್ಲಿ ಹೇಳುತ್ತಿದ್ದುದರಿಂದ ಬಹಳಷ್ಟು ಜನರಿಗೆ ಇವರ ಮೇಲೆ ಅಪಾರ ಗೌರವ ಹುಟ್ಟಿತು. ಈಕೆಯ ಶರೀರದಲ್ಲಿ ಶಂಖ, ಚಕ್ರ ಚಿಹ್ನೆಗಳು ಗೋಚರಿಸುವುದರಿಂದ ಜನರು “ರಾಧಿಕಾ”ಎಂದು ಭಾವಿಸಿದ್ದರು. ಈಕೆಯ ಕರ ಸ್ಪರ್ಶವಾದರೆ ಸಾಕು ತೀವ್ರಜ್ವರ ಭಾದೆಯ ಜನರಿಗೆ ಪರಿಹಾರ ದೊರೆಯುತ್ತಿತ್ತು. ಈಕೆ ಎತ್ತಿಳಿಸಿದ ಮಕ್ಕಳು ಆಯುಷ್ಯವಂತರಾಗಿ, ಆರೋಗ್ಯವಂತರಾಗಿದ್ದರು. ಇಂತಹ ಮಹಿಮೆ ತೋರಿದ ಗಿರಿಯಮ್ಮ, ಅತ್ತೆ ಮನೆಯಲ್ಲಿ ಎಲ್ಲರಿಗೂ ಪ್ರೀತಿಪಾತ್ರಳಾಗಿದ್ದಳು. ಹೆಳವನು ಕುಳಿತಿದ್ದ ಸ್ಥಳ ಹೆಳವನಕಟ್ಟಿಯಾಗಿ ಅವನು ಕಟ್ಟಿಸಿದ ದೇವಾಲಯ ಶ್ರೀರಂಗನಾಥ ದೇವಾಲಯವಾಗಿ (ಶ್ರೀರಂಗನಾಥಾ ಹುತ್ತದಲ್ಲಿ ಪ್ರಸನ್ನನಾಗಿ) ಪ್ರತಿವರ್ಷ ಈತನಿಗೆ ರಥೋತ್ಸವ ಜರುಗಿ, ಪೂಜಿಸಲ್ಪಡುವ ಗುಡಿಯಾಗಿದೆ.

ಕುಮಾರನಹಳ್ಳಿಯ ಹೆಳವ ಕಟ್ಟಿಸಿದ ರಂಗನಾಥ ದೇವಾಲಯ ನಂತರ ಮೈಸೂರು ಅರಸರು ವಿಸ್ತಾರಗೊಳಿಸಿ, ಆಕಾರಗೊಳಿಸಿದರು. ಬೆಟ್ಟಕ್ಕೆ ತಾಕುವ ಕಟ್ಟೆ ಮುಖ್ಯ ದಾರಿಯಲ್ಲಿ ಕಾಣಬಹುದು. ಒಮ್ಮೆ ಗೋಪಾಲದಾಸರು ಉಡುಪಿಗೆ ಹೋಗುವ ಮಾರ್ಗ ಮಧ್ಯದಲ್ಲಿ, ಮಲೆಬೆನ್ನೂರಿಗೆ ಆಗಮಿಸಿದರು. ಗೋಪಾಲದಾಸರನ್ನು ಕಂಡು ಭಕ್ತಿಯಿಂದ ಗಿರಿಯಮ್ಮ ನಮಸ್ಕರಿಸಿ, ತಾನು ಹಾಕಿದ ರಂಗೋಲೀ ತೋರಿಸಿದಳು. ರಂಗವಲ್ಲಿಯಲ್ಲಿ ಶ್ರೀರಂಗನಾಥನನ್ನು ಸಾಕ್ಷಾತ್ಕರಿಸಿಕೊಂಡ ಮಹಿಳೆ ನೀನು ಚಿತ್ರಿಸಿದ ರಂಗೋಲಿ ಅದ್ಭುತ ಅದರ ಮೇಲೆ ನಮ್ಮ ದೇವರ ಪೂಜೆಯೆಂದರು.

ಅವರ ಮಾತು ಕೇಳಿ ವಿಸ್ಮಿತಳಾಗಿ, ದೇವರ ಪೂಜೆಗಾಗಿ ಚಿತ್ರಿಸಿದ ರಂಗೋಲಿ ಎಂದು ಪೂಜೆಗೆ ಅಣಿಮಾಡಿದಳು. ಗೋಪಾಲದಾಸರು ಪೂಜೆಗೆ ಕುಳಿತಾಗ,ಗಿರಿಯಮ್ಮ ವಿಧ ವಿಧವಾದ ಪಕ್ವಾನ್ನ ಮಾಡಿ ನೈವೇದ್ಯಕ್ಕೆ ಸಮರ್ಪಿಸಿದಳು. ದಾಸರು ಪೂಜೆಯಲ್ಲಿ ಆಚಾರ್ಯಮಧ್ವರ ದ್ವಾದಶ ಸ್ತೋತ್ರ ಪಠಿಸಲು ಪ್ರಾರಂಭಿಸಿದಾಗ,ಗಿರಿಯಮ್ಮ ಚಿತ್ರಿಸಿದ ರಂಗೋಲಿಯಲ್ಲಿ ದಾಸರಿಗೆ ಗೋಪಾಲಕೃಷ್ಣನ ದಿವ್ಯ ದರ್ಶನವಾಯಿತು. ಗಿರಿಯಮ್ಮಳಿಗೂ ದಿವ್ಯ ದರ್ಶನವಾಗಿ, ಈರ್ವರೂ ಧನ್ಯತೆ ಪಡೆದರು. ಉಭಯರೂ ಅನೇಕ ಸಮಯದವರೆಗೆ ದರ್ಶನವಿತ್ತ ಮೂರ್ತಿಯನ್ನು , ಆತನ ಲೀಲಾ ವಿನೋದವನ್ನು ಸ್ತುತಿಸುತ್ತಾ, ಕೊಂಡಾಡುತ್ತಾ ತನ್ಮಯರಾಗಿದ್ದ ಆ ಸಂದರ್ಭವ ಅವಿಸ್ಮರಣೀಯ!!! ಗೋಪಾಲದಾಸರು



ತಮಗೆ ದರ್ಶನವಿತ್ತ ಮೂರ್ತಿಯನ್ನು ಗಿರಿಯಮ್ಮಳಿಗೆ ಪ್ರಸಾದ ರೂಪದಲ್ಲಿ ನೀಡಿದರು. ಅಂದಿನಿಂದ ಗಿರಿಯಮ್ಮಳಿಗೆ ಭಗವಂತನ ವಿವಿಧ ಲೀಲಾ ವಿಭೂತಿಗಳ ದರ್ಶನ ಪ್ರಾರಂಭವಾಯಿತು.

ಗಿರಿಯಮ್ಮ ಪ್ರತಿನಿತ್ಯ ಉದಯಕಾಲದಲ್ಲಿ ಎದ್ದು, ಶುದ್ಧಳಾಗಿ ಗೋಪಾಲದಾಸರು ನೀಡಿದ ಮೂರ್ತಿಯನ್ನು ಭಕ್ತಿಯಿಂದ ಪೂಜೆ ಮಾಡಲು ಪ್ರಾರಂಭಿಸಿದಳು. ಮೊಸರು ಕಡೆಯುತ್ತಾ, ಮಂಜುಳ ಸ್ವರದಿಂದ ಹಾಡುತ್ತಿದ್ದಳು. ಒಮ್ಮೆ ನಗುವಳು, ಮತ್ತೊಮ್ಮೆ ಪರವಶಳಾಗುತ್ತಿದ್ದಳು. ಶ್ರೀಕೃಷ್ಣ ಗಿರಿಯಮ್ಮಳ ಭಕ್ತಿಗೆ ಮೆಚ್ಚಿ ವಿವಿಧ ಆಟಗಳನ್ನು ಪ್ರದರ್ಶಿಸಿ, ಒಮ್ಮೆ ಕೃಷ್ಣನಾಗುವನು,ಗೊಲ್ಲನಾಗುವನು, ರಾಧೆಯಾಗುವನು.ಬೇಡಿದಂತೆ ಆಡುವನು, ಆಟವಾಡಿದಂತೆ ನರ್ತಿಸುವನು. ಅದಕ್ಕೆ ತಕ್ಕಂತೆ ಗಿರಿಯಮ್ಮ ಭಕ್ತಿಯಿಂದ ಹಾಡಿದ ದೃಶ್ಯ ಅಪೂರ್ವ ದೃಶ್ಯವಾಗಿತ್ತು!!!

ಪತಿ ತಿಪ್ಪರಸನಿಗೆ ಗಿರಿಯಮ್ಮಳ ಮೇಲೆ ಭಕ್ತಿ ಹೆಚ್ಚಾಯಿತು. ಆಕೆಯು ನೀಡಿದ ಪದಾರ್ಥಗಳು ಪ್ರಸಾದವೆಂದು ಸ್ವೀಕರಿಸಿದ. ಲೋಕದಲ್ಲಿ ಪತಿ ಭಕ್ತಿ ಮಾಡುವ ಸತಿಯರ ಚರಿತ್ರೆಯಿದ್ದರೆ, ಸತಿ ಭಕ್ತಿ ಮಾಡುವ ಪತಿಯ ಉದಾಹರಣೆ ತಿಪ್ಪರಸನದಾಯಿತು.

ಒಮ್ಮೆ ಶ್ರೀರಾಘವೇಂದ್ರ ಸ್ವಾಮಿಗಳ ಪರಂಪರೆಯ ಯತಿಗಳಾದ ಶ್ರೀಸುಮತೀಂದ್ರತೀರ್ಥರು ಮಲೆಬೆನ್ನೂರಿಗೆ ಬಂದು ಶ್ರೀರಂಗನಾಥ ದೇವಾಲಯದಲ್ಲಿ ವಾಸ್ತವ್ಯ ಮಾಡಿದರು. ಅಲ್ಲಿ ಗಿರಿಯಮ್ಮಳ ಬಗ್ಗೆ ಅಸೂಯೆ ಪಡುತ್ತಿದ್ದ ಅಧಿಕಾರಿಗಳು ಯತಿಗಳಿಗೆ ಅವಳ ವಿರುದ್ಧ ಅನೇಕ ದೂರುಗಳನ್ನು ಹೇಳಿದರು. ಗಿರಿಯಮ್ಮ ಸಂಸಾರ ಮಾಡದೆ, ವಿರಾಗಿಯಾಗಿದ್ದಾಳೆ, ಹಾಡು, ನರ್ತನ ಮಾಡುವಳು. ಸ್ತ್ರೀಯರಿಗೆ ಧರ್ಮೋಪದೇಶ ಮಾಡುವಳು. ಈ ಕಾರಣಗಳಿಂದ ಗಿರಿಯಮ್ಮಳಿಗೆ ಮುದ್ರಾಧಾರಣೆ ಮಾಡಕೂಡದು ಎಂದು ಅಧಿಕಾರಿಗಳು ವಿಜ್ಞಾಪಿಸಿದರು.ಆದರೆ ಶ್ರೀ ಸುಮತೀಂದ್ರರು ಗಿರಿಯಮ್ಮಳನ್ನು ಕರೆಸಲು ಆಜ್ಞಾಪಿಸಿದರು.

ಗಿರಿಯಮ್ಮಳನ್ನು ಅಧಿಕಾರಿಗಳು ಕರೆದುಕೊಂಡು ಬಂದಾಗ,ಸಂಕೋಚದಿಂದ ಯತಿಗಳ ಮುಂದೆ,ತೀರ್ಥಕ್ಕೆ ಕೈಚಾಚಿದಳು.ಶ್ರೀಸುಮತೀಂದ್ರತೀರ್ಥರು ಆಕೆಯ ಕೈಯನ್ನು ನೋಡಿ, ಆಶ್ಚರ್ಯದಿಂದ ಇದು ದೇವಕಿಯ ಲಕ್ಷಣ, ಚಕ್ರಪಾಣಿ ಮಗನಾಗಿ ಹುಟ್ಟಬೇಕು, ಕೌಸಲ್ಯೆಯ ಲಕ್ಷಣ,ಯಶೋದೆ ಮಾತೆಯ ಲಕ್ಷಣ ಎಂದು ಉದ್ಗರಿಸಿದರು.ನಿನ್ನಂತಹ ಪುಣ್ಯಾತ್ಮಳ ದರ್ಶನ ನಮಗೆ ದೊರೆಯಿತು. ನಿನ್ನ ಮಹಿಮೆ ತೋರಿಸಮ್ಮಾ ಎಂದು ಯತಿಗಳು ನುಡಿದರು.

ನೀವು ದೊಡ್ಡ ಯತಿಗಳು, ಪಾಮರಳಾದ ನನ್ನ ಗತಿ ಏನಾಗಬೇಕೆಂದು ನಾಚಿ ದೂರ ನಿಂತಳು. ಇವರ ಸಂಭಾಷಣೆ ಕೇಳಿ ಕುಹಕಿಗಳು, ವಾರಗಿತ್ತಿಯರು, ಅಧಿಕಾರಿಗಳ ಸೊಲ್ಲು ಅಲ್ಲೇ ಅಡಗಿಹೋಗಿತ್ತು!!!

ಗಿರಿಯಮ್ಮ ನಿಯಮಿತ ಅಹ್ನಿಕ ಮುಗಿಸದೆ, ಭೋಜನ ಮಾಡುತ್ತಿರಲ್ಲಿ. ರಂಗೋಲಿ ಚಿತ್ರಿಸಿ, ಕುಂಕುಮಾಕ್ಷತೆಗಳಿಂದ ಪೂಜಿಸಿ, ಗೋಪಾಲದಾಸರು ಅನುಗ್ರಹಿಸಿದ್ದ ವೇಣುಗೋಪಾಲ ನನ್ನು ಮಂಡಿಸಿ ಹಾಡಿ ನರ್ತಿಸುತ್ತಿದ್ದಳು. ಒಮ್ಮೊಮ್ಮೆ ಭಕ್ತಿಯಿಂದ ದೇವರ ಮೂರ್ತಿಯನ್ನು ಶಿಶುವಾಗಿ ಮಾಡಿ, ಬಗಲಿನಲ್ಲಿ ಎತ್ತಿಕೊಂಡು, ಇವನೇ ನನ್ನ ರಂಗನಾಥಸ್ವಾಮಿ ಎಂದು ಸ್ವಾಮಿಗಳ ಮುಂದೆ ಕೂಡಿಸಿ, ಮಂಗಳಾಕ್ಷತೆ ಬೇಡುತ್ತಿದ್ದಳು. ಶ್ರೀಸುಮತೀಂದ್ರತೀರ್ಥರು ಆನಂದಭಾಷ್ಪ ಸುರಿಸುತ್ತಾ ಬಾಲಕನನ್ನು ಎತ್ತಿಕೊಂಡು, ಗಿರಿಯಮ್ಮಳಲ್ಲಿ ಯಶೋದೆ, ಕೌಸಲ್ಯೆಯ, ರೂಪ ಕಾಣುತ್ತಿದ್ದರು. ಮರುದಿನ ಮುದ್ರಾಧಾರಣೆ ಮಾಡಲು, ಶ್ರೀಸುಮತೀಂದ್ರತೀರ್ಥರು ಗಿರಿಯಮ್ಮಳ ಎರಡೂ ಕೈಗಳನ್ನು ನೋಡಿದಾಗ,ಅಚ್ಚರಿಪಟ್ಟರು!! ಗಿರಿಯಮ್ಮಳ ಕೈಗಳಲ್ಲಿ ಮೂಡಿರುವ ಶಂಖ,ಚಕ್ರದ ಹಸ್ತ ನೋಡಿ, ನಿನ್ನಂತಹವಳಿಗೆ ಚಕ್ರಾಂಕನ ಮಾಡುವ ಅಧಿಕಾರ ನಮ್ಮದಲ್ಲ. ಶ್ರೀಹರಿಯ ಚಂಕ್ರಾಂಕನ ಆಗಿದೆ ಎಂದು ಯತಿಗಳು ಗುಣಗಾನ ಮಾಡಿದರು.

ಗಿರಿಯಮ್ಮ ಊರಿನಲ್ಲಿ ಮಳೆ ತರಿಸಿದ್ದು, ಕಣ್ಣು ಕೊಟ್ಟ ಕಥೆ, ದಿಬ್ಬನಹಳ್ಳಿ ಪವಾಡ ಅತಿಮಾನುಷ ಘಟನೆಗಳಾದವು. ಗಿರಿಯಮ್ಮ ದಾಸಚತುಷ್ಟರ ಪಂಕ್ತಿಗೆ ಸೇರಿದ ಸಾವಿರಾರು ಕೀರ್ತನೆಗಳನ್ನು, ಕಥೆಗಳನ್ನು ಬರೆದಳು.

ಗಿರಿಯಮ್ಮ ಪುರಂದರದಾಸರಂತೆ ಸರ್ವಸ್ವ ದಾನ ಮಾಡಿ ಜ್ಞಾನ ಪಡೆಯಲಿಲ್ಲ. ವಿಜಯದಾಸರಂತೆ ದೇಶ ದೇಶ ತಿರುಗಿ ಜ್ಞಾನ ಸಂಪಾದಿಸಲಿಲ್ಲ. ಜಗನ್ನಾಥದಾಸರಂತೆ ಗೋಪಾಲ ದಾಸರಿಂದ ಆಯುಷ್ಯ ಪಡೆದು ಜ್ಞಾನ ಸಂಪಾದಿಸಲಿಲ್ಲ.ಯಾರಂತೆಯೂ ಕಷ್ಟ ಪಡೆದ, ಎಲ್ಲರಂತೆ ಜ್ಞಾನ ಪಡೆದು,ಪರಮಾತ್ಮನನ್ನು ಸಾಕ್ಷಾತ್ಕಾರ ಮಾಡಿಕೊಂಡ ಮಹಿಳೆ. ಹೊನ್ನಾಳಿ ಸಮೀಪ,ಕಮ್ಮಾರಗಟ್ಟೆ, ತುಂಗಭದ್ರಾ ನದಿ ತೀರದ ಹತ್ತಿರ ತನ್ನ ಅವತಾರ ಪೂರೈಸಿ, ಗಿರಿಯಮ್ಮ ಮಾರುತಿ ಗುಡಿ ಕಟ್ಟಿಸಿ, ನದಿಯ ಪೂರ್ಣ ಪ್ರವಾಹದಲ್ಲಿ ಅದೃಶ್ಯಳಾದಳು!!! ಶ್ರಾವಣ ಶುದ್ಧ ಪಂಚಮಿ ಗಿರಿಯಮ್ಮಳ ಪುಣ್ಯ ತಿಥಿಯಾಗಿ, ಅಂದು ಮಾರುತಿಗೆ ರಥೋತ್ಸವ ಜರುಗುತ್ತದೆ.





# 108 ವೈಷ್ಣವ ದಿವ್ಯಕ್ಷೇತ್ರಗಳು

## ತಿರುವೆಳ್ಳರೈ (ಶ್ವೇತಗಿರಿ)

ಭಗವಂತನ ಐದು ಸ್ಥಾನಗಳಲ್ಲಿ ಪರ,ವ್ಯೂಹ, ವಿಭವ, ಅಂತರ್ಯಾಮಿ, ಆರ್ಚಾಮೂರ್ತಿ ಎನ್ನುವಂತಹಾ ಐದು ಅವತಾರಗಳಲ್ಲಿ ಭಕ್ತರಿಗಾಗಿ ಭಗವಂತನು ಸಕಲ ದಿವ್ಯದೇಶಗಳಲ್ಲಿ ಅರ್ಚಾಮೂರ್ತಿಯಾಗಿ ಪ್ರಕಾಶಿಸುತ್ತಾ, ಅನುಗ್ರಹಿಸುತ್ತಿದ್ದಾನೆ. ಆಳ್ವಾರರು ತಮ್ಮ ಭಕ್ತಿಯನ್ನು ಸಾರುತ್ತಿದ್ದಾರೆ. ಶ್ರೀರಂಗಂನಿಂದ ಮೊದಲುಗೊಂಡು ಶ್ರೀವೈಕುಂಠದವರೆಗೂ ಭಗವಂತನನ್ನು ಸ್ತುತಿಸಿದಂತಹಾ ಕ್ಷೇತ್ರಗಳನ್ನೇ 108 ದಿವ್ಯದೇಶಗಳೆಂದು ಹೆಸರುವಾಸಿಯಾಗಿದೆ. ಈ 108 ದಿವ್ಯ ದೇಶಗಳಲ್ಲಿ ಒಂದಾದ ತಿರುವೆಳ್ಳರೈ ಎಂಬ ಈ ಕ್ಷೇತ್ರಕ್ಕೆ ಶ್ವೇತಗಿರಿ ಎಂಬ ಹೆಸರನ್ನು ಗಳಿಸಿದೆ. ಶ್ರೀರಂಗಂದಿಂದ ಉತ್ತಮರ್ ಕೋಯಿಲ್‌ನ ಮೂಲಕ ತಿರುಚ್ಚಿ ಉರಯೂರ್ ಬಸ್ ಮಾರ್ಗದಲ್ಲಿ ಹದಿನೈದು ಕಿಲೋಮೀಟರ್ ದೂರದಲ್ಲಿ ಈ ಕ್ಷೇತ್ರ ನೆಲೆಗೊಂಡಿದೆ. ಅದ್ಭುತವಾದ ಪ್ರಕೃತಿ ಸೌಂದರ್ಯದೊಂದಿಗೆ ಈ ದಿವ್ಯದೇಶವು ರಾರಾಜಿಸುತ್ತಿದೆ. ಈ ಕ್ಷೇತ್ರಕ್ಕೆ ಮಳನಾಡು,ಶ್ವೇತಗಿರಿ,ತಿರುವೆಳ್ಳರೈ ಎಂಬ ಅನೇಕ ಹೆಸರುಗಳಿವೆ. ಈ ದೇವಾಲಯ ಮೂರು ಅದ್ಭುತವಾದ ದೊಡ್ಡ ಪ್ರಾಕಾರಗಳೊಂದಿಗೆ ಸುಮಾರು ಹತ್ತು ಎಕರೆಗಳ ಸ್ಥಳದಲ್ಲಿ ಅದೂ ಕಾವೇರಿ ನದಿ ತೀರದ ಸಮೀಪದಲ್ಲಿದೆ.

ಇಲ್ಲಿ ನೆಲೆಸಿರುವಂತಹಾ ಮೂಲ ಮೂರ್ತಿ ಪುಂಡರೀಕಾಕ್ಷನು.ಶಂತಾಮರೈಕಣ್ಣನ್ ಎಂದೂ ಕರೆಯುತ್ತಾರೆ. ಪುಂಡರೀಕಾಕ್ಷನು ಪೂರ್ವದಿಕ್ಕಿಗೆ ಅಭಿಮುಖವಾಗಿ ನಿಂತಿರುವ ಭಂಗಿಯಲ್ಲಿ ದರ್ಶನವನ್ನು ನೀಡುತ್ತಿದ್ದಾನೆ.ಅಮ್ಮನವರನ್ನು ಷಣ್ಬಗವಲ್ಲಿ ಎಂದು ಕರೆಸಿಕೊಳ್ಳುತ್ತಾ ಪ್ರತ್ಯೇಕವಾದ ಸನ್ನಿಧಿಯಲ್ಲಿ ನೆಲೆಸಿದ್ದಾಳೆ. ಪಂಕಜವಲ್ಲಿ ಎಂಬ ಹೆಸರಿನಿಂದಲೂ ಕರೆಯಲ್ಪಡುತ್ತಿದ್ದಾಳೆ. ಈ ದಿವ್ಯ ದೇವಾಲಯದಲ್ಲಿ ದಿವ್ಯಗಂಧಂ, ಕ್ಷೀರಪುಷ್ಕರಿಣಿ, ಕುಶತೀರ್ಥಂ, ಚಕ್ರತೀರ್ಥಂ,ಪುಷ್ಕಲತೀರ್ಥ,ಪದ್ಮತೀರ್ಥ, ವರಾಹ ಮಣಿಕರ್ಣಿಕಾ ಎಂಬ ಏಳು ಪವಿತ್ರವಾದ ತೀರ್ಥಗಳಿವೆ.

### ಸ್ಥಳಪುರಾಣ

ಈ ಕ್ಷೇತ್ರ ಅದ್ಭುತವಾದ ಸ್ಥಳಪುರಾಣವನ್ನು ಹೊಂದಿದೆ. ತ್ರೇತಾಯುಗದಲ್ಲಿ ಶಿಬಿ ಎಂಬ ಚಕ್ರವರ್ತಿ ರಾಜ್ಯವನ್ನು ಆಳುತ್ತಿರಬೇಕಾದರೆ ಒಮ್ಮೆ ಲಂಕಾನಗರಕ್ಕೆ ಹೋಗುತ್ತಾ ಆ ರಾವಣಾಸುರನನ್ನು ತನ್ನ ಅಧೀನದಲ್ಲಿರಿಸಿಕೊಳ್ಳುವುದಕ್ಕೆ ದೊಡ್ಡ ಸೈನ್ಯದೊಂದಿಗೆ ಲಂಕೆಗೆ ಹೋಗುತ್ತಿರುವ ಸಮಯದಲ್ಲಿ ಈ ದಿವ್ಯದೇಶದ ಸಮೀಪದಲ್ಲಿ ಇರುವ ನೀಲಿಕಾ ಎನ್ನುವಂತಹಾ ವನಕ್ಕೆ ಹೋದರು. ಎಲ್ಲರೂ ಅಲ್ಲಿ ತಮ್ಮ ದಾಹವನ್ನು ತೀರಿಸಿಕೊಂಡರು. ಅದೇ ಸಮಯದಲ್ಲಿ ಅಲ್ಲಿ ಕುಂಭವೃಷ್ಟಿಯೂ ಸುರಿದಿತ್ತು ಭೂಮಿಯೂ ತಂಪಾಗಿತ್ತು ಸೈನ್ಯವೆಲ್ಲಾ ಅಲ್ಲಿ ವಿಶ್ರಾಂತಿ ಪಡೆದರು. ಅಂತಹಾ ನೀಲಿಕಾ ವನದಲ್ಲಿ ಇನ್ನೂ ಹಲವು ದಿನಗಳ ಕಾಲ ಇರಬೇಕೆಂದು ಭಾವಿಸುತ್ತಿರುವಂತಹಾ ಸಮಯದಲ್ಲಿ ಬೆಳ್ಳಿಯ ಬೆಟ್ಟವನ್ನು ಹೋಲುವಂತಹಾ ಒಂದು ಬಿಳಿ ವರಾಹವು ಕಂಡು ಬಂತು. ಆ ವರಾಹವನ್ನು ಹಿಡಿದುಕೊಳ್ಳುವುದಕ್ಕೆ ರಾಜ ಅದನ್ನು ಹಿಂಬಾಲಿಸಿದ. ಅದನ್ನು ಗಮನಿಸಿದ ವರಾಹ ಒಂದು ಹುತ್ತದೊಳಗೆ ಹೋಗಿ ಅದೃಶ್ಯವಾಯಿತು.ಆಗ ಅಲ್ಲೇ ತಪಸ್ಸು ಮಾಡುತ್ತಿದ್ದ ಅಮ್ಮನವರನ್ನು ಮತ್ತು ಮಾರ್ಕಂಡೇಯ ಮಹರ್ಷಿಯನ್ನು

ನೋಡಿ ಶಿಬಿ ಚಕ್ರವರ್ತಿ ನಮಸ್ಕರಿಸಿದ. ಆ ಸಮಯದಲ್ಲಿ ನಾನು ಇಲ್ಲೇ ಇದ್ದೇನೆ. ಈ ಹುತ್ತದಲ್ಲೇ ನೆಲೆಸಿರುವುದು ಮಾತ್ರಾ ಅಲ್ಲ, ಮಹಾಲಕ್ಷ್ಮಿಗೇ ನೀಡಿದ ಮಾತನ್ನು ನಡೆಸಿ ಕೊಡುವುದಕ್ಕೆ ನಾನು ಈ ಭೂಲೋಕಕ್ಕೆ ಬಂದೆ. ಆದ್ದರಿಂದ ಈ ಕ್ಷೇತ್ರದಲ್ಲೇ ನಿತ್ಯವಾಸ ಮಾಡಬೇಕೆಂದು ಸಂಕಲ್ಪಿಸಿದ್ದೇನೆ. ನೀನು ಅದನ್ನು ಜಾರಿಗೊಳಿಸು ಎಂದು ಭಗವಂತನು ಅಶರೀರವಾಣಿಯಾಗಿ ಭಗವಂತನು ಅಶರೀರವಾಣಿಯಾಗಿ ನುಡಿದ. ಈಶ್ವೇತವರಾಹ ಸ್ವರೂಪದಲ್ಲಿರುವ ಆತ ಸಾಕ್ಷಾತ್ತು ಶ್ರೀಮನ್ನಾರಾಯಣನೇ ಎಂದು ನಿರ್ಧರಿಸಿ ಮಾರ್ಕಂಡೇಯ ಮಹಷರ್ಷಿಯ ಅನುಗ್ರಹದಿಂದ ಶಿಬಿ ಚಕ್ರವರ್ತಿ ಆ ಭಗವಂತನಿಗೆ ಇನ್ನೊಂದು ದೇವಾಲಯವನ್ನು ನಿರ್ಮಿಸಬೇಕೆಂದು ಸಂಕಲ್ಪಿಸಿದ. ಶಿಬಿ ಚಕ್ರವರ್ತಿಯು ಪಂಕಜವಲ್ಲಿ ನಾಯಕಿ ಸಮೇತನಾದ ಪುಂಡರೀಕಾಕ್ಷನ ದಿವ್ಯ ದೇವಾಲಯವನ್ನು ನಿರ್ಮಿಸಿದ ಇದು ಒಂದು ಐತಿಹ್ಯ. ಮತ್ತೊಂದು ಇತಿಹಾಸದ ಪ್ರಕಾರ,ಒಮ್ಮೆ ಮಾರ್ಕಂಡೇಯ ಮಹರ್ಷಿ, ಉತ್ತರ ದೇಶದಿಂದ ಸುಮಾರು 3,700 ಬ್ರಾಹ್ಮಣರನ್ನು ಕರೆತಂದರು. ಶಿಬಿ ಚಕ್ರವರ್ತಿ ಆ ಬ್ರಾಹ್ಮಣರೆಲ್ಲರನ್ನೂ ಇಲ್ಲಿಗೆ ಕರೆತಂದಿದ್ದೂ ಒಂದು ಐತಿಹ್ಯ, ಆ ಸಮಯದಲ್ಲಿ ಆ ಬ್ರಾಹ್ಮಣರಲ್ಲಿ ಒಬ್ಬ ದಿವಂಗತನಾಗಿ, ಆ ಸಮಯದಲ್ಲಿ ಸಾಕ್ಷಾತ್ತು ಭಗವಂತನೇ ಒಬ್ಬ ಬ್ರಾಹ್ಮಣನಾಗಿ ಪರಿವರ್ತನೆಯನ್ನು ಹೊಂದಿ ಇಲ್ಲಿಗೆ ಬಂದು ನೆಲೆಸಿದ್ದಾನೆಂದು ಇತಿಹಾಸ ಹೇಳುತ್ತಿದೆ. ಈ ಬ್ರಾಹ್ಮಣರೇ ತಿರುವೆಳ್ಳರೈ ವೈಷ್ಣವರೆಂದು ಕರೆಯಲ್ಪಡುತ್ತಿದ್ದಾರೆ. ಆ ಮಹಾಲಕ್ಷ್ಮಿಯ ಪ್ರಾರ್ಥನೆಯ ಮೇರೆಗೆ ಭಗವಂತನು ಅರ್ಚಾವತಾರನಾಗಿ ಈ ದಿವ್ಯ ದೇಶದಲ್ಲಿ ನೆಲೆಸಿದ್ದಾನೆಂದು ಎಲ್ಲರಿಗೂ ಸೇವಾಭಾಗ್ಯವನ್ನುಂಟು ಮಾಡುತ್ತಿದ್ದಾನೆ. ಅಮ್ಮನವರಿಗೆ ಒಂದು ಪ್ರತ್ಯೇಕತೆ ಇದೆ. ಉತ್ಸವ ಕಾಲದಲ್ಲಿ ಮೊದಲ ಬಾರಿಗೆ ಅಮ್ಮನವರು ಮೆರವಣಿಗೆಯಲ್ಲಿ ಬಂದರೆ ಆಕೆಯ ಹಿಂದೆಯೇ ಭಗವಂತನು ಕೂಡಾ ಬರುತ್ತಾನೆ. ತಿರುಕ್ಕುಡನ್ಲೈ ಎಂಬ ದಿವ್ಯದೇಶದಲ್ಲಿ ಕೋಮಲವಲ್ಲಿ ನಾಯಕಿ ಸಮೇತ ಸ್ವಾಮಿ ಹೇಗೆ ನೆಲೆಸಿದ್ದಾರೋ. ಅದೇ ಪ್ರಕಾರ ತಿರುವೆಳ್ಳರೈ ಎಂಬ ದಿವ್ಯ ದೇಶದಲ್ಲಿ ಸ್ವಾಮಿಯೂ ಅದೇ ರೀತಿ ನೆಲೆಸಿದ್ದಾರೆ. ದಕ್ಷಿಣಾಯನ, ಉತ್ತರಾಯಣ ಎಂಬ ಬಾಗಿಲುಗಳು ಇರುವುದು ಇಲ್ಲಿನ ವಿಶೇಷ ಮೂಲ ಮೂರ್ತಿ ಗರ್ಭಗುಡಿಗೆ ಹದಿನೆಂಟು ಮೆಟ್ಟಿಲುಗಳಿವೆಯಂತೆ. ಹಾಗೆಯೇ ಈ ಹದಿನೆಂಟು ಎನ್ನುವುದು ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳಿಗೆ ಒಂದು ಸೂಚನೆಯಂತೆ ಇದೆಯೆಂದು ನಂತರ ನಾಲುಕ್ಕು ಮೆಟ್ಟಿಲುಗಳು ನಾಲಕ್ಕೂ ವೇದಗಳಿಗೆ ಸಮಾನವೆಂದು, ಅದರ ನಂತರ ಐದು ಮೆಟ್ಟಿಲುಗಳು ಪಂಚಭೂತಗಳನ್ನು ಸೂಚಿಸುತ್ತಿವೆ ಎಂದು ಹೇಳುತ್ತಾರೆ. ಧ್ವಜಸ್ತಂಭದ ಮೇಲೆ ಎಂಟು ಮೆಟ್ಟಿಲುಗಳು ಕಂಡು ಬರುತ್ತವೆ. ಅವುಗಳು ಅಷ್ಟಾಕ್ಷರ ಮಹಾಮಂತ್ರಗಳನ್ನು ಪ್ರತಿಪಾದಿಸುತ್ತಿವೆ ಎಂದೂ ಅದರ ನಂತರ ಇಪ್ಪತ್ತನಾಲ್ಕು ಮೆಟ್ಟಿಲುಗಳು ಗಾಯತ್ರಿ ಮಂತ್ರಗಳ ಸಾರವೆಂದು ಹಿರಿಯರು ಹೇಳುತ್ತಾರೆ. ಪುಂಡರೀಕಾಕ್ಷಸ್ವಾಮಿಯ ಆಲಯದ ನಿರ್ಮಾಣಕ್ಕಾಗಿ ಸಾವಿರಾರು ಬ್ರಾಹ್ಮಣರು ಗಂಗಾ, ಯಮುನಾ ನದಿಗಳಿಂದ ಪವಿತ್ರ ತೀರ್ಥವನ್ನು ತಂದು ತಿರುವೆಳ್ಳರೈ ಎಂಬ ದಿವ್ಯ ದೇಶಕ್ಕೆ ತಂದು ಇಲ್ಲೇ ನಿರಂತರವಾಗಿ ನಿವಸಿಸುವಂತೆ ಶಿಬಿ ಚಕ್ರವರ್ತಿ ಏರ್ಪಾಟು ಮಾಡಿದಂತೆ ನಮಗೆ ಚರಿತ್ರೆ ತಿಳಿಸುತ್ತಿದೆ. ಶ್ವೇತವರಾಹ ಮೂರ್ತಿಯಾಗಿ ಆ ಶಿಬಿ ಚರ್ಕವತಿಗೆ ಭಗವಂತನು ದರ್ಶನವನ್ನು ನೀಡಿದನಾದ್ದರಿಂದ ಶ್ವೇತಪುರಿನಾಥಃ ಎಂದು ಶ್ವೇತಪುರಿಕ್ಷೇತ್ರ ಎಂದೂ ಕರೆಯುತ್ತಾರೆ. ಈ ದಿವ್ಯ ಸ್ಥಳದಲ್ಲಿ ಭಗವಂತನು ಶ್ರೀದೇವಿ, ಭೂದೇವಿ, ಸೂರ್ಯ,ಚಂದ್ರ, ಆದಿಶೇಷ ಮೊದಲಾದವರೆಲ್ಲರೂ ಮನುಷ್ಯ ರೂಪದಲ್ಲಿ ಬಂದು ದರ್ಶನವನ್ನು ಪಡೆದರೆಂದು ನಮಗೆ ಚರಿತ್ರೆ ತಿಳಿಸುತ್ತಿದೆ.ಈ ದಿವ್ಯದೇಶವನ್ನು ಪೆರಿಯಾಳ್ವಾರ್,ತಿರುಮಂಗೈಯಾಳ್ವಾರ್ ಇವರೆಲ್ಲರೂ ಮಂಗಳಾ

















ಶಾಸನವನ್ನು ರಚಿಸಿದ್ದಾರೆ. ಹೆಚ್ಚೂ ಕಡಿಮೆ ಇಪ್ಪತ್ತ ನಾಲಕ್ಕು ಪಾಶುರಗಳನ್ನು ರಚಿಸಿದ್ದಾರೆ. ಈ ದಿವ್ಯ ದೇಶದ ಬಗ್ಗೆ ಮಹಾತ್ಮರು ರಚಿಸಿದ ಶ್ಲೋಕವನ್ನು ಹಾಡೋಣ.

ಶ್ವೇತಾದ್ರೌ ವಿಮಲಾಕೃತೀತಿ ಜಗತಿ ಖ್ಯಾತೇ ವಿಮಾನೇ ಶುಭೇ
ಕ್ಷೀರಾಬ್ಧಿಪ್ರಮುಖಪ್ರಸಿದ್ಧಸರಸಾಂ ತೀರೇ ಪುರಸ್ತಾನ್ಮುಖಃ
ವಿಷ್ಣುಃಪಂಕಜನಾಯಿಕಾಸಹಚರಃ ಶ್ರೀಪುಂಡರೀಕಾಕ್ಷಕೋ
ಬ್ರಹ್ಮೇಶಾನಪುರೋಗಮ್ಯೈಃ ಸಹಚರ್ಯೈಃ ಸಾಕ್ಷ್ಮಾತ್ಮೈತಃ ಪದ್ಮಯಾ
ತೀರ್ಥೈಃ ಪುಷ್ಕಲಪದ್ಮ ಚಕ್ರ ಕುಶಕ್ಕೆ ಸ್ಸಂಶೋಭ ಮಾನಸ್ಮಿತೇ
ರಮ್ಯೇ ಶ್ರೀಮಣಿಕರ್ಣಿಕಾಹ್ವಾಯ ವಾರಾಹಾಖ್ಯಾತ ತೀರ್ಥಾಂಚಿತೇ
ಗಂಧ ಕ್ಷೀರಸುದಿವ್ಯ ಪುಷ್ಕರಿಣಿಕಾ ಯುಕ್ತೇ ಸಿತಾದ್ರ್ಯಾಹ್ವಯೇ
ರಾಜಂತಂ ನಗರೇತು ವೆಲ್ಲರ ಪದೇ ಪ್ರಾಗಸ್ಯ ಸಂಸ್ಥಾನಗಮ್ ॥

ಪಂಕಜವಲ್ಲಿ ನಾಯಿಕಾ ಸಮೇತ ಪುಂಡರೀಕಾಕ್ಷನನ್ನು ದರ್ಶಿಸಿ ಸಕಲ ಸೌಭಾಗ್ಯವನ್ನು ಪಡೆಯೋಣ.







ಬಾಲಃ ಪುತ್ರೋನೀತಿವಾಕ್ಯೋಪಚಾರೈಃ
ಕಾರ್ಯೇಕಾರ್ಯೇ ಯತ್ನತಃ ಶಿಕ್ಷಣೀಯಃ ।
ಲೇಖಾಮಗ್ನಾ ಯಾಮಪಾತ್ರೇ ವಿಚಿತ್ರಾ
ನಾಸೌ ನಾಶಂ ಪಾಕಕಾಲೇಽಪಿ ಯಾತಿ ॥

ಮಕ್ಕಳು ಬಾಲ್ಯದಲ್ಲಿರುವಾಗಲೇ ನೀತಿ ಹೇಳಿ, ಶಿಕ್ಷಣ ಕೊಡಬೇಕು. ಮಡಿಕೆ ಹಸಿಯಾಗಿದ್ದಾಗ ಅದರ ಮೇಲೆ ಚಿತ್ರಿಸಿದ ರೇಖೆಗಳು ಮಡಕೆಯನ್ನು ಸುಟ್ಟಾಗಲೂ ಹೋಗುವುದಿಲ್ಲ, ಅಡುಗೆ ಮಾಡುವಾಗಲೂ ಅಳಿಸುವುದಿಲ್ಲ.

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್. ನರಸಿಂಹಾಚಾರ್ಯ
- ಅನುವಾದ :ಶ್ರೀಮತಿ

'ಮೃಗಪಕ್ಷಿ ಶುಕಾದಿನಾಂ ರೂಪಂ ಕೃತ್ವಾ ಪರಾತ್ವರಃ
ಕ್ರೀಡತೇ ರಮಯಾಂ ಸಾರ್ಥಂ ಸೂರಿಭಿಸ್ತತ್ರ ವರ್ತತೇ"

(ಪರಾತ್ವರನು ಮೃಗ,ಪಕ್ಷಿ,ಗಿಳಿ ಮುಂತಾದ ರೂಪಗಳನ್ನು ಧರಿಸಿ ರಮಾದೇವಿಯೊಡನೆ ಕ್ರೀಡಿಸುತ್ತಿದ್ದಾನೆ.(ನಿತ್ಯ) ಸುರರೊಂದಿಗೆ ಈ ಪರ್ವತದಲ್ಲಿ ವಾಸವಾಗಿದ್ದಾನೆ)

ಎಂದು ವಾಮನ ಪುರಾಣದಲ್ಲಿ ಸುಂದರವಾದ ತಿರುಮಲೆಯ ಮೇಲೆ ಹುಟ್ಟಿರುವ ಮೃಗ-ಪಕ್ಷಿಗಳು ಭಗವದ್ರೂಪವಾದುದರಿಂದಲೇ ಅವುಗಳನ್ನು ತಾಮಸ ಗುಣರಾದ ಮನುಷ್ಯರು ಹಿಂಸಿಸಬಾರದು.ಉತ್ಸವಕಾಲದಲ್ಲಿ ದಿವ್ಯಬಲಿ ಯೋಗ್ಯವಾದ ಸಮಯದಲ್ಲಿ ಶ್ರೀನಗರ ಬೀದಿಗಳಲ್ಲಿ ಪಾದರಕ್ಷೆಗಳನ್ನು ಹಾಕಿ ಕೊಳ್ಳಬಾರದು, ವಾಹಗಳನ್ನೇರಬಾರದು ಎಂದು,

"ವೇಂಕಟಾಚಲ ಯಾತ್ರಾಯಾಂ ಪಾದಮೇಕಂ ಮುನೀಶ್ವರಾಃ
ಬ್ರಹ್ಮಹತ್ಯಾದಿಪಾಪಘ್ನಂ ಸಂಸಾರಾರ್ಣವತಾರಕಂ"

(ಓ ಮುನೀಶ್ವರರೇ! ವೇಂಕಟಾಚಲ ಯಾತ್ರೆಯಲ್ಲಿ ಇಟ್ಟ ಒಂದೊಂದು ಹೆಜ್ಜೆಯು ಬ್ರಹ್ಮಹತ್ಯಾದಿ ಪಾಪಗಳನ್ನು ಬಡಿ ದೋಡಿಸುತ್ತದೆ. ಸಂಸಾರ ಸಾಗರವನ್ನು ಹಿಂಗಿಸುತ್ತದೆ.)


ಎಂದು ವಾಮನಪುರಾಣವು ಫಲಿತಗಳನ್ನು ಪ್ರತಿಪಾದಿಸುವಾಗಲೇ ಬ್ರಹ್ಮತ್ಯಾದಿ ಪಾಪನಿವಾರಣೆಗಾಗಿ ಭಗವತ್ಪಾಪ್ತಿಗೆ ಸಾಧಕವಾಗಿ ತಿಳಿಸಿರುವ ಈ ತಿರುಮಲೆ ಯಾತ್ರೆದಲ್ಲಿ ಯಾತ್ರೆಗಾಗಿ ಬರುವ ಅರೋಹಣಾಧಿಕಾರರು ಅನುಚಿತವಾಗಿ ಅದರಲ್ಲೂ ಪ್ರಮುಖವಾಗಿ ತಿರುಮಲೆ ಬೆಟ್ಟವನ್ನೇರುವಾಗ ಪಾದರಕ್ಷೆಗಳನ್ನಾಗಲೀ, ವಾಹನಾದಿಗಳನ್ನಾಗಲೀ ಉಪಯೋಗಿಸಬಾರದು.

"ಚಂಡಾಲಯವನಾದ್ಯೈಶ್ಚ ಪತಿತ್ತೈಃ ಪಾಪಿಭಿರ್ನರೈ ಃ
ನಾಽರೋಢಂ ಶಕ್ಯತೇ ದಿವ್ಯೋಹ್ಯಾಪ್ರಾಕೃತಶಿಲೋಚ್ಚಯಃ"

(ಚಂಡಾಲರು, ಯವನರು, ಪತಿತರು, ಪಾಪಿಗಳು ಆದ ಮಾನವರು, ದಿವ್ಯವಾದ ಅಪ್ರಾಕೃತವಾದ ಈ ಪರ್ವತವನ್ನು ಆರೋಹಿಸಬಾರದು)

ಚಂಡಾಲಯವನಾದ್ಯೈಸ್ತು ವೇದಬಾಹ್ಯೈಶ್ಚ ನಾಸ್ತಿಕೈಃ
ನಾಽರೋಢುಮಪಿ ಯಶ್ಯಕ್ಯಃ ಪಾವನಃ ಪರ್ವತೋತ್ತನಃ

(ಚಂಡಾಲ,ಯವನಾದರು,ವೇದಬಾಹಿರರಾದ ನಾಸ್ತಿಕರು,ಪರಮ ಪವಿತ್ರವಾದ ಯಾವ ಪರ್ವತ್ತೋತ್ತಮವನ್ನು ಆರೋಹಿಸಬಾರದೋ...)



ಎಂದು ವಾಮನ ಪುರಾಣದಲ್ಲಿ ಹೇಳಿರುವಂತೆ, ಚಂಡಾಲಾದಿಗಳು ತಿರುಮಲೆಯ ಬೆಟ್ಟವನ್ನು ಹತ್ತಬಾರದು. ಹೀಗೆ ವಿಶೇಷಾಚಾರಗಳು ತಿರುಮಲೆಯಲ್ಲಿ ಯಾವ ಪ್ರದೇಶದಲ್ಲಿ ಪಸರಿಸಿವೆಯೋ

"ಇತಿ ವೃಷ್ಣಶ್ಯೈವಃ ಪ್ರಾಹ ಸ್ವಾಮಿ ನ್ನಿತ್ಯಚ್ಯುತಂ ವಚಃ
ಸ್ವಾಮಿ ಸ್ತ್ವಯಾ ಸದಾ ಯತ್ರ ಸ್ಥಿಯತೇ ವೇಂಕಟೇಶ್ವರ
ತತ್ರೇವ ದೇವಸ್ಥಾತವ್ಯಂ ಮಯಾ ವೃಷಗಿರೀಶ್ವರ
ಇತಿ ಪೃಷ್ಟಃ ಪುನಃ ಪ್ರಾಹ ನೀಲಮೇಘ ಸಮದ್ಯುತಃ
ಆಕಲ್ಪಂಚ ವಸಾಮಿಹಾ ವೇಂಕಟಾಚಲ ಭೂಧರೇ
ತ್ವಮಪ್ಯತ್ರ ಮೃಡಾನೀಶ ಮಹಾದೇವ ನಸ ಪ್ರಭೋ
ಉಪತ್ಯಕಾಯಾಮಸ್ಯಾದ್ರೇಃ ಶೋಭಿಷ್ಕೇಶದಿಶೇಶ್ವರಃ"

(ಎಂದು ಪ್ರಶ್ನಿಸಲ್ಪಟ್ಟ ಶಿವನು ಸ್ವಾಮಿ! ಎಂದು ಸಂಭೋದಿಸಿ ಅಚ್ಯುತನೊಂದಿಗೆ ಈ ಮಾತುಗಳನ್ನಾಡಿದ್ದಾನೆ. ಓ ಸ್ವಾಮಿ! ವೆಂಕಟೇಶ್ವರಾ! ದೇವಾ! ಎಲ್ಲ ಕಾಲದಲ್ಲೂ ನೀ ಎಲ್ಲಿ ಹೇಗಿರುವೆಯೋ ಹಾಗೆ ನಾನೂ ನಿನ್ನೊಡದಿರತಕ್ಕದ್ದು ಎಂದು ಅನುಮತಿಯನ್ನು ಬೇಡಲು ನೀಲಮೇಘ ಸಮಾನ ಕಾಂತಿಯಿಂದ ಬೆಳಗಿದ್ದಾನೆ. ವೇಂಕಟೇಶ್ವರನು ಮತ್ತೆ ಓ ಪಾರ್ವತಿ ಪತಿಯೇ! ಮಹಾದೇವಾ! ಪ್ರಭೂ! ಈಶ್ವರಾ! ವೇಂಕಟಾಚಲವೆಂಬ ಈ ಬೆಟ್ಟದ ಕೆಳಗಿನ ಪ್ರದೇಶದಲ್ಲಿ ಆಗ್ನೇಯ ಮೂಲೆಯಲ್ಲಿ ವಾಸಿಸತಕ್ಕದ್ದು)

ಎಂದು ವರಾಹಪುರಾಣದ ಎರಡನೇ ಅಧ್ಯಾಯದಲ್ಲಿರುವಂತೆ ತಿರುಮಲೆ ಬೆಟ್ಟದ ಮೇಲಿರುವ ಶ್ರೀವೇಂಕಟಾಚಲ ಪತಿಯು ತನ್ನನ್ನು ಸೇವೆಗೈಯಲು ಬಂದಿರುವ ಬ್ರಹ್ಮಾದಿ ದೇವತೆಗಳಿಗೆ ಬೀಳ್ಕೊಡುವ ಸಮಯದಲ್ಲಿ ರುದ್ರನು ಸ್ವಾಮಿಯನ್ನು ಕುರಿತು ತಮ್ಮ ಸನ್ನಿಧಿಯಲ್ಲೇ ತಮ್ಮ ದಾಸನಾದ ನನ್ನನ್ನು ಇಟ್ಟುಕೊಳ್ಳುವ ಆಜ್ಞೆ ಮಾಡಿ ಎಂದು ಹೇಳಲು, ಬಳಿಕ ಶ್ರೀವೇಂಕಟೇಶ್ವರನು 'ತಿರುಮಲೆಯ ಬೆಟ್ಟದ ತಪ್ಪಲು ಪ್ರದೇಶದಲ್ಲಿ ಸ್ವಲ್ಪ ದೂರದಲ್ಲಿರುವ ಆಗ್ನೇಯ ಮೂಲೆಯಲ್ಲಿ ನಿತ್ಯವಾಸ ಮಾಡು ಎಂದು ಆಣತಿ ಕೊಟ್ಟ ಹಿನ್ನೆಲೆಯಲ್ಲಿ, ಸ್ವಾಮಿ ಸನ್ನಿಧಿಯಲ್ಲೇ (ಸಮೀಪದಲ್ಲೇ) ವಾಸಿಸನುವಾಗಲು ತಪ್ಪಲಿನ ಒಂದು ಯೋಜನಾ ದೂರ ಪ್ರದೇಶದಲ್ಲಿ ಆಗ್ನೇಯ ಮೂಲೆಯಲ್ಲಿರಲು, ಅನುಮತಿ ಕೊಟ್ಟ ಹಿನ್ನೆಲೆಯಲ್ಲಿ. ಆ ಆಗ್ನೇಯ ಮೂಲೆ ಶಿವನ ನಿವಾಸಸ್ಥಳ ಪರ್ಯಂತ 'ಸ್ವಾಮಿ ಸನ್ನಿಧಿ' ಎಂದು ಕರೆಯಲ್ಪಟ್ಟಿತು. ಆದ್ದರಿಂದ,

"ವೇಂಕಾಟಾದ್ರಿಸಂಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ"

(ಈ ಬ್ರಹ್ಮಾಂಡದಲ್ಲಿ ವೇಂಕಟಾದ್ರಿ ಸಮಾನವಾದ ಬೇರೊಂದು ಜಾಗವಿಲ್ಲ) ಎಂದು ಹೇಳಲು,

"ಶ್ರೀಮಾನ್ ಶೇಷಗಿರಿಶ್ಚಾಯಂ ಪಾವನಾನಾಂ ಚ ಪಾವನಃ"

(ಶ್ರೀಮಂತವಾದ ಈ ವೃಷಭಾಚಲವು ಪಾವನವಾದವುಗಳಲ್ಲೆಲ್ಲಾ ಪಾವನವಾದುದು)

ಎಂದು ಈ ದಿವ್ಯ ತಿರುಮಲೆ ಸರ್ವೋತ್ಕೃಷ್ಟವಾಗಿ ಪರಮ ಪಾವನವಾದುದೆಂದು ಪ್ರಖ್ಯಾತಿಯನ್ನು ಪಡೆದಿದೆ.

"ತೀರ್ಥಸ್ಯ ಪರಿತಸ್ತೀರೇ ಪುಣ್ಯೇ ಯೋಜನ ಮಾತ್ರಕೇ,
ತಪಃ ಪರಮಮಾಸ್ಥಾಯ ನ್ಯವಸಮ್ಮನಿಸತ್ತಮಾಃ
ನಿರಂತರಂ ಹರ್ಷಾಯುಕ್ತಾಂ ತತ್ಪ್ರಸಾದಾಭಿಲಾಕ್ಷಿಣಃ"

ಎಂದು ಹಲವರು ಮಹರ್ಷಿಗಳು ಸ್ವಾಮಿ ಪುಷ್ಕರಿಣಿ ಸುತ್ತು ಇರುವ ಒಂದು ಯೋಜನೆ ಪರಿಮಿತ ವಾದ ಪ್ರದೇಶವನ್ನು ಮುಖ್ಯವಾಗಿ ಪರಮಪಾವನವೆಂದು ಪರಿಗಣಿಸಿ ಭಗವತ್ಸನ್ನಿಧಿಯನ್ನು ಅಧ್ಯಯನಕ್ಕಾಗಿ ತಪವನ್ನಾಚರಿಸುವುದಕ್ಕಾಗಿ ನಿತ್ಯ ನಿವಾಸ ಮಾಡುತ್ತಿದ್ದರೆಂದು ಸ್ವರ್ಣಮುಖರಿ ಮಹಾತ್ಮೆಯಲ್ಲಿ ವರ್ಣಿಸಲ್ಪಟ್ಟಿರುವುದಾಗಿರಲು ಪವಿತ್ರವಾದ ಸರೋವರದ ನಾಲ್ಕು ಕಡೆಗೂ ಒಂದು ಗಾವುದ ದೂರದಲ್ಲಿ ಮಾತ್ರ ಈ ಆಚಾರ ನಿಯಮಗಳು ಅನುಷ್ಠಿತಗೊಳ್ಳುತ್ತವೆಂದು ಹೀಗೆ ಪರಮ ಪವಿತ್ರವಾದ ಸ್ಥಳವು ಶ್ರೀವೇಂಕಟಾಚಲಪತಿಗೆ ಸೇರಿದ ದೇವಾಲಯವಾಗಿಯೇ ನಿಖರವಾಗಿ, ಹೀಗೆ ತಿರುಮಲೆಯ ಸ್ಥಳೀಕರು ಅನುಷ್ಠಾನಗೊಳಿಸಬೇಕಾದ ಆಚಾರಗಳನ್ನು ದಿವ್ಯ ಚಿತ್ತದಿಂದ ನಿರ್ಣಯಿಸಿ ಶ್ರೀವೇಂಕಟರಮಣ ತಮ್ಮ ಸನ್ನಿಧಿಯಲ್ಲಿ ಜರಿಗಿಸುವುದಾಗಿ ಸಂಕಲ್ಪಿಸಿ ಅನುಗ್ರಹಿಸಬೇಕೆಂದು ನಿರ್ಧರಿಸಿಕೊಂಡು ತಿರುಮಲನಂಬಿಗೆ ಹೇಳಿದ್ದಾರೆ. ಆ ಶ್ರೀಶೈಲಪೂರ್ಣರು ಇದನ್ನು ಕೇಳಿ ಮನದಲ್ಲಿ ಮೋದಗೊಂಡು ಇಂತಿರುವ ಭಗವದ್ರಾಮಾನುಜರ ಸಂಕಲ್ಪವನ್ನು ಶ್ರೀವೇಂಕಟಾಚಲಪತಿ ಸಫಲ ಮಾಡಬಲ್ಲನೇಯೆಂದು ಆಲೋಚಿಸುತ್ತಾ ನಿದ್ರೆಗೆ ಜಾರಿದ್ದಾರೆ. ಅಂದು ರಾತ್ರಿ ಅವರ ಕನಸಿನಲ್ಲಿ ಶ್ರೀವೇಂಕಟೇಶ್ವರನು ಪ್ರತ್ಯಕ್ಷವಾಗಿ 'ಏನಯ್ಯಾ ನಂಬಿ! ನಾವು ಮೊದಲು ಪಾಂಚಜನ್ಯಗಳನ್ನು ಧರಿಸಲು ಅಭಿಮತರಾಗಿದಂತೆಯೇ ಅವರ ಕಟ್ಟುಪಾಡುಗಳು ನಮಗೂ ಸಮ್ಮತವಾಗಿವೆ' ಎಂದು ಹೇಳಲು, ತಿರುಮಲನಂಬಿಯವರು ಕೇಳಿಸಿಕೊಂಡು ಹರ್ಷಿತರಾಗಿ ಸ್ವಪ್ನ ವೃತ್ತಾಂತವನ್ನೆಲ್ಲಾ ಲೋಕದ ಎಲ್ಲಾ ಪಂಡಿತ ಪಾಮರರಿಗೆ ತಿಳಿಯುವಂತೆ ಅನುಗ್ರಹಿಸಬೇಕೆಂದು ಸ್ವಾಮಿ ಸನ್ನಿಧಿಯಲ್ಲಿ ಭಿನ್ನವೈಸಿಕೊಂಡಿದ್ದಾನೆ. ಆಗ ಶ್ರೀನಿವಾಸ ಸ್ವಾಮಿಯು ಒಬ್ಬ ಭಕ್ತನ ಮೈಮೇಲೆ ಆವಹಿಸಿ ಬಂದು ನಾನು ರಾಮಾವತಾರದಲ್ಲಿ ವಸಿಷ್ಠಾದಿಗಳನ್ನು ಆದರಿಸಿದಂತೆಯೇ ನಮ್ಮ ಸಾರ್ವಭೌಮತ್ವವನ್ನು (ಸರ್ವೋತ್ಕೃಷ್ಟತೆಯನ್ನು) ಶ್ರೀಭಾಷ್ಯ ನಿರ್ಮಾಣದ ಮೂಲಕ ನಿರೂಪಿಸಿದ ಶ್ರೀಭಾಷ್ಯಕಾರರ ನಿಯಮಗಳನ್ನು ಸಹಾ ಆದರಿಸುತ್ತೇನೆ ನಮ್ಮನ್ನು ಕುರಿತು ಈ ಭಗವದ್ರಾಮಾನುಜರು ವಿಧಿಸಿರುವ ಎಲ್ಲಾ ನಿಯಮಗಳನ್ನು ಎಲ್ಲರೂ ತಪ್ಪದೇ ಅನು

ಸರಿಸಬೇಕು ಎಂದು ಆಜ್ಞಾಪಿಸಲು, ನಂತರ ಎಲ್ಲರನ್ನು ಈ ಭಗವದನುಗ್ರಹವನ್ನು ಕೇಳಿ ಸಂತುಷ್ಟರಾಗಿದ್ದಾರೆ. ಆಗ ಶ್ರೀವೇಂಕಟೇಶ್ವರನ ದಿವ್ಯ ಹೃದಯಕ್ಕೆ ಅಂತರಂಗಕ್ಕೆ ಬಿಂಬಾ ಧರನಾದ ಒಬ್ಬ ಅರ್ಚಕರು ಶ್ರೀಶಠಗೋಪವನ್ನೆತ್ತಿ ಎಲ್ಲರ ತಲೆಯ ಮೇಲೆ ಇಡುತ್ತಾ ಶ್ರೇಷ್ಠ ರಾದ ಋಷಿಗಳಿಗೂ ಮಿಗಿಲಾದ ಭಾಗವತ ರಿಂದ ಅನುಷ್ಠಾನಗೊಂಡ ಈ ಸ್ಥಳದ ಆಚರಣೆಗಳು ಶ್ರೀನಿವಾಸ ನಿಗೂ ಪ್ರೀತಿಕರವಾಗಿ ಈ ಆಚಾರ ಮರ್ಯಾದೆಗಳನ್ನು ಯಾರು ಅನುಷ್ಠಾನಗೊಳಿಸುತ್ತಾರೋ ಅವರು ಭಗದ್ರಾಮಾನುಜರಿಗೆ ಆಪ್ತರು, ಆಚರಿಸಿದವರು ಸ್ವಾಮಿಯ ದಿವ್ಯ ಜ್ಞಾನರೂಪವಾದ ವೇದಗಳಿಗೂ ಬಾಹಿರರಾದವರು ಎಂದು ಹೇಳಿದ್ದನ್ನು ಎಲ್ಲರೂ ಅಂಗೀಕರಿಸಿದರು.

ಹೀಗೆ ಭಗವಧಾಜ್ಞಸಿದ್ಧವಾದ ಸದಾಚಾರ ವಿಶೇಷಗಳನ್ನು ಸಕಲ ಜನರೂ ಅನುಷ್ಠಾನಗೊಳಿಸುತ್ತಿರಲು ಶ್ರೀಶೈಲ ಪೂರ್ಣರು ಶಿಷ್ಯರೊಡನೆ ಒಬ್ಬ ಶ್ರೀವೈಷ್ಣವರು ಪ್ರಕೃತಿ ವಶನಾಗಿ ನಮಗೆ ಪರಿಮಳದ್ರೋಹವನ್ನೇಸಗಿದ್ದಾನೆ ಎಂದು ತಿಳಿಸಲು ತಿರುಮಲನಂಬಿ ಕೇಳಿಸಿಕೊಂಡು ಮುಂದಾಗಿ ಈ ದಿವ್ಯವಾದ ಮಾಲೆಗಳಲ್ಲಿ ಒಂದನ್ನು ಯಾರಿಗೂ ಕೊಡಕೂಡದು ಕಾಲಗಾಲದಲ್ಲಿ ಕಲಿ ದೋಷದಿಂದಾಗಿ ಒಳ್ಳೆಯವರು ಸಹಾ ಪಾಪಿಷ್ಟರಾಗಿ ಹುಟ್ಟುವುದರಿಂದ ನನ್ನ ಭಿನ್ನಪವನ್ನು ಸತ್ಯವಾಗಿಸುವಂತೆ ಸಂಕಲ್ಪಿಸಿ ಅನುಗ್ರಹಿಸಬೇಕು ಎನಲು ಸ್ವಾಮಿಯ ಈ ವೃತ್ತಾಂತವನ್ನು ಕೇಳಿ ಆರ್ಚಮುಖಕನಾಗಿ ನಾನು ಅರ್ಚಾವತಾರವನ್ನು ಸ್ವೀಕರಿಸುವುದೇ ಭಕ್ತರ ಅಭೀಷ್ಟೆಗಳನ್ನು ನೆರವೇರಿಸಲಾದುದರಿಂದ ನಿಮಗೆ ಇಷ್ಟವಾಗುವಂತೆ ಇಂದು ಮೊದಲುಗೊಂಡು ನಾನು ಧರಿಸುವ ಹಾರಗಳನ್ನು ಮೊದಲು ಯಾರಿಗಾದರೂ ಕೊಡತಕ್ಕದ್ದು ಎಂದು ಹೇಳಿದನು. ಈ ಸಮಾಚಾರವನ್ನೆಲ್ಲಾ ಶ್ರೀರಾಮಾನುಜಾಚಾರ್ಯರು ಕೇಳಿ ಮನದಲ್ಲೇ ಹರ್ಷಗೊಂಡು ಇದೇ ರೀತಿಯಲ್ಲಿ ಕ್ಷೇತ್ರ ಸಿದ್ಧ ಮಹತ್ಮೆಯುಳ್ಳ ಭಗವದನುಗ್ರಹದಿಂದ ನಡೆಸಿಕೊಂಡು ಬರುವಂತೆ ಕಟ್ಟಳೆ ವಿಧಿಸಿ ಈ ಧರ್ಮಗಳನ್ನು ಭವಿಷ್ಯತ್ಕಾಲಗಳಲ್ಲಿಯೂ ಪರಿಪಾಲನೆ ಮಾಡುವಸಲುವಾಗಿ ..

"ವರ್ಣಿನೋ ನೈಷ್ಠಿಕೀ ಬುದ್ಧಿರ್ವೈರಾಗ್ಯೇ ಯದಿ ದೃಶ್ಯತೇ
ಸಂಕಲ್ಪ ಬುದ್ಧಿಂ ತಾಂ ಧೀರಃ ಕಾಷಾಯಂ ಧಾರಯೇ ತ್ವಟಮಂ"

(ಬ್ರಹ್ಮಚಾರಿಗೆ ನಿಷ್ಠಾಸಕ್ತಿ ಬುದ್ಧಿ ವೈರಾಗ್ಯವಿರುವಂತೆ ಕಾಣಿಸಿಕೊಂಡಲ್ಲಿ ಆ ಬುದ್ಧಿಯು ಚೆನ್ನಾಗಿ ಬೆಳೆಯಲು ಕಷಾಯ ವಸ್ತ್ರಧಾರಣವನ್ನು ಮಾಡಿಸತಕ್ಕದ್ದು).

(ಮುಂದುವರೆಯುತ್ತದೆ.)

## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡು ತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧ ವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾ ತೋರಣ.ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾ ಮಂಡಪ.

### ಶ್ರೀವೇಂಕಟೇಶ್ವರ ಧ್ಯಾನಮಂದಿರ(ಎಸ್.ವಿ.ಮ್ಯೂಜಿಯಂ) :

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.



ಧಾರಾವಾಹಿ

# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

## ಹಿಂದಿನ ಸಂಚಿಕೆಯಿಂದ

ಒಣ್ಣುದಲ್ ಮಾಮ್ಯೆಯೆಳುಪಿಯವಾಮ್ಯೆ ವಿರ್ರೈನ್ದು ನನ್ದೇರ್
ವಣ್ಣುದಲ್ ವೇಣ್ಡುಮ್ ವಲವ! ಕಡಾಗಿನ್‌ರು ತೇನ್ ನವಿನ್‌ರು
ವಿಣ್‌ಮುದಲ್ ನಾಯಗನ್ ನೀಳ್ ಮುಡಿವೆಣ್ ಮುತ್ತು ವಾಶಿಗ್ರೈತ್ತಾಯ್
ಮಣ್‌ಮುದಲ್ ಶೇರ್‌ಪುಟ್ರುಮ್.
ಆರುವಿಶೆಯ್ಯಾನಿರ್ಕ್ಕುಂ ಮಾಮಲೈಕ್ಕೇ ॥೫೦॥

ಈ ತಿರುವಾಚಕವನ್ನು ತಮಿಳುನಾಡಿನ ಜನ ಪವಿತ್ರ, ಶ್ರೇಷ್ಠ ಎನ್ನುವ ಅರ್ಥ ಒಂದರಿಂದಲೇ ಬಳಸುವ ವಿಚಾರ ಅವರು ಇಟ್ಟಿರುವ ಅನೇಕ ಹೆಸರುಗಳಿಂದಲೇ ತಿಳಿಯುತ್ತದೆ. ಆಳ್ವಾರ್ ಪ್ರಬಂಧಗಳ ಪ್ರಾರಂಭವೆಲ್ಲಾ ತಿರುವಾಚಕದಿಂದಲೇ ಪ್ರಾರಂಭವಾಗಿರುವುದನ್ನು ವಾಚಕರು ಈ ವೇಳೆಗಾಗಲೇ ಗಮನಿಸಿರಬಹುದು. 'ತಿರುಮಾಲ್' ಎಂದು ದೇವರನ್ನು ಕರೆಯುತ್ತಾರೆ. 'ತಿರುವೀದಿ' ಎಂದರೆ ಶ್ರೇಷ್ಠವಾದ ರಸ್ತೆ. 'ತಿರುಮಾಆಗೆ' ಎಂದರೆ ಶ್ರೇಷ್ಠವಾದ ಮನೆ. ತಿರುತ್ತೇರ್ ಎಂದು ರಥಕ್ಕೆ ಹೇಳುತ್ತಾರೆ. ಇಲ್ಲೆಲ್ಲಾ ಶ್ರೇಷ್ಠ ಎಂದು ಒಂದು ಅರ್ಥವಾದರೆ ಗೌರವಕ್ಕಾಗಿಯೂ ಹೇಳುವ ವಾಚಕ ಇದು ಎಂದೂ ವಿದಿತಗೊಳ್ಳುತ್ತದೆ. ನಿಮ್ಮ ಮನೆ ಎಲ್ಲಿದೆ? ಎಂದು ಕೇಳಬೇಕಾದರೆ ಸಂಪ್ರದಾಯಸ್ಥ ಶ್ರೀವೈಷ್ಣವರು ದವರುಡೆಯ ತಿರುಮಾಳಿಗ್ರೈ ಎಂಗ್ರೈ (ತಮ್ಮ ತಿರುಮಾಳಿಗೆ (ಮನೆ)ಎಲ್ಲಿ) ಎಂದೇ ಹೇಳುವುದು. ಇದು ಒಂದು ಸಂಸ್ಕೃತಿಯ ರೂಪ, ಗೋವಿಂದನ್ ತಿರುಮಲೈ, ಅಳಗರ್ ತಿರುಮಲೈ ಎಂದು ಬೆಟ್ಟಗಳನ್ನು ಗೌರವದಿಂದಲೇ ಕರೆಯುವುದು. ಸ್ನಾನ ಮಾಡುವ ಕೊಳವನ್ನು ತಿರುಕ್ಕಲ್ಯಾಣಿ ಎನ್ನುವರು. ಅಭಿಷೇಕಕ್ಕೆ ತಿರುಮಜ್ಜನಂ ಎನ್ನುವರು. ಊರುಗಳಿಗೆ ಶ್ರೇಷ್ಠತೆಯನ್ನು ಸೂಚಿಸಲು ತಿರುಪ್ಪದಿ,ತಿರುಕ್ಕೋಟ್ಟಿಯೂರ್, ತಿರುವಾರೂರ್,ತಿರುಚ್ಚಿರಪ್ಪಳ್ಳಿ ತಿರುನಲ್ವೇಲಿ, ತಿರುವಣ್ಣಾಮಲೈ ಎನ್ನುವ ಬಳಕೆ ಕಾಣಬಹುದು.

ಇದೇ ರೀತಿ 'ಪೆರು' ಎನ್ನುವ ಪದದ ಬಳಕೆ ದೊಡ್ಡದು ಎನ್ನುವ ಅರ್ಥದಲ್ಲಿ 'ಪೆರುಂಗುತ್ರೈ, ಪೆರುಮಾನ್, ಪೆರುಮಾಯನ್, 'ಪೆರುಂದೇವಿ' ಮುಂತಾದ ಜಾಗಗಳಲ್ಲಿ ಪ್ರಯೋಗಗೊಳ್ಳುತ್ತದೆ. ಈ ರೀತಿ 'ತಿರು'ವಿಗೂ,'ಪೆರು'ವಿಗೂ ಅರ್ಥಾರ್ಥ ಸಂಬಂಧವಿಲ್ಲದಿರುವಾಗ ಒಂದಕ್ಕೆ ಇನ್ನೊಂದು ಪದ ತಪ್ಪಾಗಿ ಬಳಸಲ್ಪಟ್ಟಿದೆ ಎನ್ನುವ ವಾದವೇ ಸಾಧುವಲ್ಲದ್ದು; ಅರ್ಥವಿಲ್ಲದ್ದು.

ಇನ್ನು ತಿರುಮಲೆ ಎನ್ನುವ ಹೆಸರು ಕ್ರಿ.ಶ. ೧೦೧೩ ರ ಸುಮಾರಿಗೆ ಶಾಸನದಲ್ಲಿ ಬಳಸಲ್ಪಟ್ಟಿದೆ. ಅಲ್ಲಿಯವರೆಗೂ

ಅದೊಂದು ಅಜ್ಞಾತ ಪದ,ಯಾರಿಗೂ ತಿಳಿದೇ ಇರಲಿಲ್ಲ ಎನ್ನುತ್ತಾರೆ. ಶ್ರೀರಾಯರು. ತಿರುಮಲೆ ಎನ್ನುವ ಪದ ರಾಮಾನುಜರ ಕಾಲಕ್ಕಿಂತ ಈಚಿನದು ಎಂದು ಮತ್ತೊಂದು ಜಾಗದಲ್ಲಿ ಹೇಳಿದಂತೆ ನೆನಪು. ಆದರೆ ಬಹಳ ಹಿಂದೆಯೇ ತಿರುಮಲೆ ಎನ್ನುವ ಪದ ರೂಢಿಯಲ್ಲಿರುವುದನ್ನು ಈ ಕೆಳಗಿನ ದೃಷ್ಟಾಂತಗಳಿಂದ ತಿಳಿಯಬಹುದು. ರಾಮಾನುಜರ ಸೋದರ ಮಾವನವರ ಹೆಸರು ತಿರುಮಲೆನಂಬಿ ಎಂಬುದಾಗಿ. ರಾಮಾನುಜರು ಪ್ರಾಯಕ್ಕೆ ಬಂದಾಗ ಈತ ಎಂಬತ್ತು ವರ್ಷ ವಯಸ್ಸಿನ ಹಣ್ಣು ಹಣ್ಣು ಮುದುಕರಾಗಿದ್ದರು. ರಾಮಾನುಜರ ಹಿಂದಿನವರು ಯಾಮುನಾಚಾರ್ಯರ ಶಿಷ್ಯರು ಎಂದಾಗ ಯಾಮುನಾಚಾರ್ಯರಿಗೂ ತಿರುಮಲೆ ಎನ್ನುವ ಪದ ಗೊತ್ತಿದ್ದಿತು ಎನ್ನಬಹುದು.

'ಮೈಸೂರು ಕೈಪಿಡಿ' ಎನ್ನುವ ಪುಸ್ತಕದಲ್ಲಿ ಶ್ರೀರಂಗಪಟ್ಟಣದ ದೇವಸ್ಥಾನವನ್ನು ಕ್ರಿ.ಶ. ೮೯೪ ರಲ್ಲಿ ಗಂಗರಾಜ ಪ್ರತಿ ನಿಧಿ ತಿರುಮಲೈಯ್ಯನೆಂಬುವವನು ನಿರ್ಮಾಣ ಮಾಡಿರುವುದಾಗಿ ಉಲ್ಲೇಖಗೊಂಡಿದೆ ಎಂದಾಗ ತಿರುಮಲೆಯ ಹೆಸರನ್ನು ಜನರು ತಮ್ಮ ಹೆಸರಿಗೆ ಬಳಸಿಕೊಳ್ಳುವ ರೂಢಿ ಆ ಕಾಲಕ್ಕೇ ಬಂದಿತ್ತು ಎಂದರೆ ತಿರುಮಲೆ ಎಂದು ತಿರುಪತಿಯ ಇನ್ನೊಂದು ಹೆಸರು ಲೋಕಕ್ಕೇ ತಿಳಿದಿದ್ದುತು ಎನ್ನುವುದರ ಅರಿವಾಗುತ್ತದೆ. ಆದ್ದರಿಂದ ತಿರುಮಲೆ ಎನ್ನುವ ಪದ ೧೦೧೩ರಿಂದ ಈಚೆಗೆ ವ್ಯಕ್ತಗೊಂಡಿದ್ದು ಎನ್ನುವ ವಾದ ಎಂತಹ ವಿಪರ್ಯಾಸಕಾರಿಯಾದದ್ದು ಎನ್ನುವುದು ಸ್ಪಷ್ಟವಾಗುತ್ತದೆ.

ಮೊದಲಾಳ್ವಾರ್‌ರೇ ತಿರುಮಲೆ ಎಂದು ಕರೆದಿರಬೇಕಾದರೆ ಈ ಹೆಸರಿನ ಈ ಗಿರಿಯ ಪ್ರಾಚೀನತೆ ಬಹು ಹಿಂದಕ್ಕೆ ಸರಿಯುತ್ತ ಹೋಗುತ್ತದೆಯಲ್ಲದೆ ರಾಯರ ಹೇಳಿಕೆಯಂತೆ ವಿಜಯನಗರದ ಕಾಲಕ್ಕೆ ಮುಂದುವರಿಯುತ್ತಾ ಬರುವುದಿಲ್ಲ ವಲ್ಲವೇ?

ಹೀಗೆ ತಿರುಮಲೆ ಅಥವಾ ವೇಂಗಡದ ಪ್ರಾಚೀನತೆ ಬಹಳ ಹಿಂದಕ್ಕೆ ಸರಿಯುತ್ತಾ ಸಾಗುತ್ತದೆ. ಈ ವೇಂಗಡದ ಪ್ರಸ್ತಾಪ ತಮಿಳಿನ ಲಕ್ಷಣ ಗ್ರಂಥವಾದ 'ಶಿರಪ್ಪಾಯಿರಂ" ಇದ್ದು ಅಲ್ಲಿ ವನಂಪರನಾರ್' ಎನ್ನುವ ಕವಿಯು ತಮಿಳು ದೇಶದ ಗಡಿಯನ್ನು ನಿರ್ದೇಶ ಮಾಡುತ್ತಾ ವಿವರಿಸಿದ್ದಾನಂತೆ. ಇವನ ಹೇಳಿಕೆಯ ಪ್ರಕಾರ 'ವಡವೇಂಗಡಂ' 'ತೆನ್‌ಕುಮಾರಿ' ತಮಿಳುನಾಡಿನ ಸೀಮಾರೇಖೆಗಳಂತೆ (ಬಡಗುದಿಕ್ಕಿಗೆ ವೇಂಗಡವೂ, ದಕ್ಷಿಣಕ್ಕೆ ಕನ್ಯಾಕುಮಾರಿಯೂ) ನಮ್ಮ ಕನ್ನಡನಾಡಿಗೆ ಕಾವೇರಿ ಗೋದಾವರಿಗಳು ಕವಿಯಿಂದ ನಿರ್ದೇಶಿಸಲ್ಪಟ್ಟಿರುವ ಗಡಿರೇಖೆಗಳಂತೆ ಅಹನಾನೂರು ಎನ್ನುವ ಪುರಾತನ ಗ್ರಂಥದಲ್ಲಿ :

ಕಟಿಲ್ ಪುನ್ಯೆ ತಿರುನ್ದಡಿಕ್ಕಳ್ವರ್ ಕ್ಕೋಮಾನ್
ಮಳಿಪುಲಂ ವಣಕ್ಕಿಯ ಮಾವಣ್ ಪುಲ್ಲಿ
ವಿಳಿವುಡೇ ವಿರುಚ್ಚೀರ್ ವೇಂಗಡವೆಂದುಮ್
ವರಗುವರಾದಲೋ ಅರಿದ್

ಎಂಬುದಾಗಿಯೂ "ವೆನ್‌ವೇಲ್ ತಿರೈಯಿನ್ ವೇಂಗಡ ನೆಡುವರೈ" ಎಂದೂ ಮತ್ತು ವಿನ್ನೈನವೀಲ್‌ಯಾನ್ನೈ ವೀರರ್ ಪೋರ್ ತೊಂಡೆಯಾರ್ ಇನಮರೈತವರಂಎಟ್ರೂರುನೆಡುಂ ಗೊಟ್ಟು ಓಂಗುವೆಳ್ಳು ರವಿ ವೇಂಗಡತ್ತುಂಬರ್ ಎಂದು ಪ್ರಶಂಸೆ ಮಾಡಲ್ಪಟ್ಟಿದೆ. ಈ ಗ್ರಂಥ ಎರಡನೇ ಶತಮಾನದ ಆದಿ ಕಾಲದ್ದು. "ನಡುಸಂಘು"ವೆನ್ನುವ ತಮಿಳು ಭಾಷೆಯ ಒಂದು ಯುಗಕ್ಕೆ ಸೇರಿದ ಸಾಹಿತ್ಯ.

ಮತ್ತೊಂದು ಎಡೆ ವೇಂಗಡದ ಮೇಲೆ ಅಂದಿನ ಕಾಲಕ್ಕೆ ವೈಭವಯುತವಾಗಿ ನಡೆಯುತ್ತಿದ್ದ ಜಾತ್ರೆಯ ವೈಭವ ಚಿತ್ರವನ್ನು ತಮಿಳು ಗ್ರಂಥ ವರ್ಣಿಸುತ್ತದೆ. ತಿರುವೇಂಗಡವನ್ನು ಇಲ್ಲಿ ಅತೀವ ಪ್ರಶಸ್ತವಾದ ಪರ್ವತವೆನ್ನಲಾಗಿದೆ. ಈ ಕಾಲದ 'ಶಿಲಪ್ಪಧಿಕಾರಂ' ನಲ್ಲಿ ಬರುವ 'ಮಾಂಗಾಟ್ಟು ಮರೈವನ್ ಕೂತ್ತು' ಎನ್ನುವ ಭಾಗ ದಲ್ಲಿ ವೇಂಗಡದ ವರ್ಣನೆ ಈ ರೀತಿ ಇರುವುದಂತೆ ,

ವೀಂಗು ನೀರರುವಿ ವೇಂಗಡ ಮನ್‌ರುಂ
ಓಂಗಿಯರ್ ಮಲಯತ್ತು ಚ್ಚಿ ಮಿಾಮಿಶೈ
ವಿರಿಕದಿರ್ ಜ್ಞಾಯರುಂ ತಿಂಗಳುಂ ವಿರುಂಗಿ
ಇರುಮುರುಂಗೋಂಗಿಯ ವಿಡನಿಲೈ ತಾನತ್ತು
ಮಿನ್ನು ಕೊಡಿಯುಡುತ್ತಿ ವಿಳುಂಗುವಿಟ್ಟಾಂಡು
ನನ್ನಿರಿ ಮೇಘಂ ನಿನ್‌ರಿದು ಪೋಲ
ಪಗೆಯಣಂ ಗಾರಿಯುಂ ಪಾಲ್ ವೆಣ್ ಶಂಗಮುಂ
ತಗೈವೆಯ ತಾಮರೈ ಕೈಯನೇಂದಿ
ನಳಂಗಿಳರ ರಾಮರರ್ ಮಿರ್ರ್ಟಾಂಡು
ಪೊಲಂಪೂವಾಡೈಯರ್ ಪೋಲಿಂದು ತೋನ್‌ರಿಯ
ಶೆಂಗಣ್ ನೆಡಿಯೋನ್ ನಿನ್‌ರಿವಣ್ಣಮುಂ

ಈ ದಿವ್ಯವಾದ ಪದ್ಯದಲ್ಲಿ ವೇಂಗಡದ ವೈಭವ ಪ್ರಾಚೀನತೆ, ಅಲ್ಲಿಯ ದೈವದ ವರ್ಣನೆ, ಅದು ವಿಷ್ಣು ಸ್ವರೂಪಿ ಎಂಬೆಲ್ಲ ವಿಚಾರಗಳೂ ಸುವ್ಯಕ್ತಗೊಂಡಿದೆ.

ಈ ತಿರುವೇಂಗಡವನ್ನು ಆಳ್ವಾರರುಗಳು 'ವಡವೇಂಗಡಂ' ಎಂದು ಬಣ್ಣಿಸಿರುವಾಗ ಅದು ಗಡಿ ನಿರ್ದೇಶಿಸುವ ನಾಮಧೇಯವಲ್ಲ. ಆದರೆ ಈ ವೇಂಗಡವು 'ತೆನ್ ವೇಂಗಡ' ಎನ್ನುವ ತಿರುಮಲೆಯಿಂದ ಭಿನ್ನವಾಗಿರುವುದನ್ನು ಸೂಚಿಸಲು ಈ ರೀತಿ ಹಾಡಿದ್ದಾರೆ.

"ಪೆರ್ಪು ಎನ್‌ರುಂ ಇರುಂ ಶೋಲೈ ವೇಂಗಡಂ ಎನ್‌ರುಂ ಇವ್ವಿರೆಂಡುಂ
ನಿರ್ಪು ಎನ್‌ರುಂ ನೀಮದಿಕ್ಕುಂ ನೀರ್ಮೈಪ್ಪೋಲ್"

ಎಂದು ಮೊದಲಾಳ್ವಾರ್ ಹೇಳಿದ್ದಾರೆ.

(ಮುಂದುವರೆಯುತ್ತದೆ.)





# ಭಾವಾರ್ಥ ಸಹಿತ ಶ್ರೀಭಾರತೀಶ ಕರಾವಲಂಬನ ಸ್ತೋತ್ರ ಶ್ರೀ ಗುರುಭ್ಯೋ ನಮಃ



ಜನ್ಮಾದಿ ದುಃಖ ವಿನಿಮೋಚಕ ಸಾಧು ಸೌಖ್ಯ ಹೇತೋಥ
ತಾಮಸ ಜನಸ್ಯ ತಮಃ ಪ್ರದಾಯಿನ್!
ಕಲ್ಯಾದ್ಯುಪದ್ರವ ನಿರಾಸ ಕೃತಾವತಾರ
ಶ್ರೀಭಾರತೀಶ ಮಮ ದೇಹಿ ಕರಾವಲಂಬಮ್ ॥ 2॥

ಜನ್ಮಾದಿ ದುಃಖಗಳನ್ನು ಪರಿಹರಿಸುವವರಾದ, ಸಜ್ಜನರ ಸೌಖ್ಯಕ್ಕೆ ಸಂತೋಷಕ್ಕೆ ಕಾರಣ ರಾದ ಹಾಗೇ ತಮೋ ಯೋಗ್ಯರಿಗೆ ತಮಸ್ಸನ್ನು ನೀಡುವ ಸಾಮರ್ಥ್ಯವುಳ್ಳ ಕಲಿ ಮೊದಲಾದ ದೈತ್ಯರಿಂದ ಉಂಟಾಗುವ ಉಪದ್ರವ ನಿವಾರಿಸಲು ಅವತಾರ ಮಾಡಿರುವ ಶ್ರೀಭಾರತೀ ಪತಿ ಯಾದ ವಾಯು ದೇವರು ನಮ್ಮನ್ನು ಕಾಪಾಡಲಿ.



..............................



..............................



..............................



..............................



ಇದರಲ್ಲಿ

ಹೋಲಿಕೆ

ಇಲ್ಲದ

ಚಿತ್ರ

ಯಾವುದು

ಮಹಾಲಕ್ಷ್ಮಿ , ಕೃಷ್ಣನ ಸಖಿಯರು, ಆದಿಶೇಷನ ಅವತಾರ ಮತ್ತು ಗಣಪತಿ, ಇವರಿಗೆ ಸಂಬಂಧವಿಲ್ಲದ ಚಿತ್ರವನ್ನು ಕಂಡು ಹಿಡಿಯಿರಿ.

# ಮಕ್ಕಳೇ ಇದು ನಿಮಗಾಗಿ



## ಕ್ವಿಜ್

### ಸೂಚನೆಗಳು

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳಿಗಾಗಿ ಮಾತ್ರವೇ.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳು ಹಿಂದೂವಾಗಿರಬೇಕು.
3. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸ ಪತ್ರಿಕೆಯ ಚಂದಾದಾರರಾಗಿರಬೇಕು.
4. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್,ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
5. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
6. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ಸ್ವೀಕರಿಸಲಾಗುವುದಿಲ್ಲ.
7. ಉತ್ತರ ಬರೆಯುವಾಗ ಅಳಿಸುವುದು, ತಿದ್ದುವುದು ಮಾಡಬಾರದು.
8. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.8.2022
9. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
10. ವಿಜೇತರಾದ ಮಕ್ಕಳ ಹೆಸರನ್ನು ಸೆಪ್ಟೆಂಬರ್ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
11. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
12. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
ತಿ.ತಿ.ದೇ. ಪ್ರಸ್
ಕಾಂಪೌಂಡ್
ಕೆ.ಟಿ. ರಸ್ತೆ.
ತಿರುಪತಿ : 517 507
ಆಂಧ್ರ ಪ್ರದೇಶ್

## ರಸಪ್ರಶ್ನೆಗಳು



**ಉತ್ತರಗಳು**

1. ರಾಮನ ಮದುವೆಯನ್ನು ಎಂದು ಆಚರಿಸುತ್ತೇವೆ? ..........................
2. ಲಕ್ಷ್ಮಣನು ಯಾವ ಅಂಶದಿಂದ ಅವತರಿಸಿದ್ದಾನೆ? ..........................
3. ಆರ್ಚಾಮೂರ್ತಿ ಎಂದರೇನು? ..........................
4. ತಿರುಮಲೆಯಲ್ಲಿ ಭಗವಂತನಿಗೆ ಪೂಜೆ ಸಲ್ಲಿಸಿದ ಮೊಟ್ಟಮೊದಲ ಆಳ್ವಾರರು ಯಾರು? ..........................
5. ದುರ್ಯೋಧನನ ಮತ್ತೊಂದು ಹೆಸರು? ..........................
6. ಧೃತರಾಷ್ಟ್ರನ ಮಂತ್ರಿ ಯಾರು? ..........................
7. ಶ್ರೀ ರಾಮನ ತಾಟಕಿಯನ್ನು ಸಂಹರಿಸಿದ ಪ್ರದೇಶ ? ..........................
8. ಮಹಾಭಾರತದಲ್ಲಿ ದೇವವ್ರತ ಎಂಬುದು ಯಾರ ಹೆಸರು? ..........................
9. ದಶಾವತಾರದಿಂದ ಸತ್ಯ ಅಥವಾ ಕೃತಯುಗದಲ್ಲಿ ವಿಷ್ಣುವಿನ ಎಷ್ಟು ಅವತಾರಗಳು ಕಾಣಿಸಿಕೊಂಡವು? ..................
10. ವಿಷ್ಣುವಿನ ದಶಾವತಾರದ ಮೊದಲ ಅವತಾರ ಯಾವುದು? ..........................
11. ನರಸಿಂಹ ಅವತಾರದಲ್ಲಿ ಭಗವಾನ್ ವಿಷ್ಣುವು ಯಾರನ್ನು ಕೊಲ್ಲುತ್ತಾನೆ? ..........................
12. ಯಾವ ಯುಗದಲ್ಲಿ ಶ್ರೀರಾಮನು ಅಯೋಧ್ಯೆಯಲ್ಲಿ ಜನಿಸಿದನು? ..........................
13. ಸತಿ (ಶಿವನ ಪತ್ನಿ) ಯಾರ ಮಗಳು? ..........................
14. ಗಂಗಾ ನದಿಯನ್ನು ಸ್ವರ್ಗದಿಂದ ಭೂಮಿಗೆ ತಂದವರು ಯಾರು? ..........................
15. ಕೃಷ್ಣ ಯಾವ ಯುಗದಲ್ಲಿ ಜನಿಸಿದನು? ..........................

ಹೆಸರು :
ಚಂದಾ ಸಂಖ್ಯೆ:
ತಂದೆಯ ಹೆಸರು :
ತಾಯಿಯ ಹೆಸರು :

ವಿಳಾಸ :

ದೂರವಾಣಿ ಸಂಖ್ಯೆ:

## ನೀತಿ ಕಥೆ



# ಬೆಳೆದ ಬೆಳೆ ಚಿನ್ನಕ್ಕೂ ಮಿಗಿಲು

- ಡಾ॥ ಪ್ರದೀಪ್ ಕುಮಾರ್ ಹೆಬ್ರಿ

9844018457

ಒಂದೂರು. ಅಲ್ಲೊಬ್ಬ ವ್ಯಾಪಾರಿ. ಆ ಊರಿನಲ್ಲಿ ಅನೇಕ ರೈತರಿದ್ದರು ಕಷ್ಟಪಟ್ಟು ದುಡಿದು ಚೆನ್ನಾದ ಬೆಳೆ ಬೆಳೆಯುತ್ತಿದ್ದರು. ಶ್ರೀಹರಿಯ ಮಹಾಭಕ್ತರಾಗಿದ್ದ ಅವರು ಊರದೈವ ಸ್ವಾಮಿ ಅನಂತ ಪದ್ಮನಾಭ ದೇವರ ಒಕ್ಕಲಾಗಿದ್ದರು. ತಮ್ಮ ಮನೆಯ ಮಕ್ಕಳಿಗೂ ದುಡಿಮೆಯ ಹಿರಿಮೆ ಮತ್ತು ದೈವಭಕ್ತಿಯ ಅಗತ್ಯತೆಯನ್ನು ಅರಹುತ್ತಿದ್ದರು.ಮಕ್ಕಳೂ ಹೆತ್ತವರು ವಿಧೇಯರಾಗಿ ಹಬ್ಬ ಹರಿದಿನ ಗಳನ್ನು ಮನದುಂಬಿ ಆನಂದಿಸುತ್ತಿದ್ದರು.

ರೈತರು ತಾವು ಬೆಳೆದ ಬೆಳೆಗಳನ್ನೆಲ್ಲ ಊರಿನ ಆ ವ್ಯಾಪಾರಿಗೇ ಕೊಡುತ್ತಿದ್ದರು ಮತ್ತು ಉತ್ತಮ ಬೆಲೆ ಪಡೆಯುತ್ತಿದ್ದರು. ತಮ್ಮೆಲ್ಲ ಕಷ್ಟ-ಸುಖಗಳಲ್ಲಿ ಭಾಜನನಾಗುತ್ತಿದ್ದ ಆ ವ್ಯಾಪಾರಿಯಲ್ಲವರಿಗೆ ಉತ್ತಮ ಅನುಬಂಧವಿತ್ತು.

ಒಮ್ಮೆ ಆ ಅಕ್ಕಿ ವ್ಯಾಪಾರಿ ತನ್ನ ಉಗ್ರಾಣದಿಂದ ಅಕ್ಕಿಯ ಮೂಟೆಯೊಂದನ್ನು ಆಳಿನ ಹೆಗಲ ಮೇಲೆ ಹೊರಿಸಿ ತನ್ನ ಅಂಗಡಿಯೆಡೆಗೆ ಹೊರಟಿದ್ದ. ಆಳು ಮುಂದೆ, ವ್ಯಾಪಾರಿ ಹಿಂದೆ ಆಳು ಹೊತ್ತಿದ್ದ ಅಕ್ಕಿ ಮೂಟೆಯಲ್ಲಿ ಚಿಕ್ಕ ತೂತೊಂದಿತ್ತು. ಅದರಿಂದ ಒಂದೊಂದೆ ಅಕ್ಕಿಯ ಕಾಳುಗಳು ಸುರಿಯುತ್ತಿದ್ದವು.ಹಾಗೆ ಸುರಿಯುತ್ತಿದ್ದ ಅಕ್ಕಿಯ ಕಾಳುಗಳನ್ನು ಆಳಿನ ಹಿಂದೆಯೇ ಬರುತ್ತಿದ್ದ ವ್ಯಾಪಾರಿ ಹೆಕ್ಕಿ ಹೆಕ್ಕಿ ತನ್ನ ಚೀಲದಲ್ಲಿ ತುಂಬುತ್ತಿದ್ದ. ಇದನ್ನು ಅವನ ಸ್ನೇಹಿತನೋರ್ವ ಕಂಡ. ವ್ಯಾಪಾರಿಯಲ್ಲಿ, “ಏನಪ್ಪಾ! ದೊಡ್ಡಸಾಹುಕಾರ ನೀನು, ಚೆಲ್ಲುತ್ತಿರುವುದು ಅಕ್ಕಿಯ ಕಾಳು. ಚಿನ್ನದ ಚೂರುಗಳಲ್ಲ. ಆದರೆ ಅವು ಚಿನ್ನದ ಚೂರುಗಳೆಂದು ನೀನು ಭಾವಿಸಿದಂತಿದೆ ಎಂದು ವ್ಯಂಗ್ಯವಾಡಿದ. ಅವನ ಮನದಲ್ಲಿ ಈತ ಮಹಾ ಜಿಪುಣನೆಂಬ ಲೇವಡಿಯಿತ್ತು. ವ್ಯಾಪಾರಿ ಏನೂ ಮಾತಾಡದೆ ಅವನನ್ನು ನೋಡಿ ನಸುನಕ್ಕ.

ಕೆಲವು ದಿನಗಳು ಉರುಳಿದವು. ಆ ವ್ಯಾಪಾರಿ ತನ್ನ ಸ್ನೇಹಿತನನ್ನು ಮನೆಗೆ ಪೂಜೆ ಹಾಗೂ ಪ್ರಸಾದಕ್ಕೆ ಆಹ್ವಾನಿಸಿದ. ಸ್ನೇಹಿತ ಬಂದ. ಆತನನ್ನು ಪ್ರೀತಿಯಿಂದ ಬರಮಾಡಿಕೊಂಡ ವ್ಯಾಪಾರಿ ಪೂಜಾದಿ ಕಾರ್ಯಗಳು ಮುಗಿದಂತೆ ಊಟಕ್ಕೆ ಕರೆದ.



ವ್ಯಾಪಾರಿಯ ಪತ್ನಿ ಬಾಳೆ ಎಲೆ ಹಾಕಿ ಮೊದಲು ಬಂಗಾರದ ಅಕ್ಕಿಯನ್ನು ಬಡಿಸಿ, “ದಯವಿಟ್ಟು ಊಟ ಮಾಡಬೇಕು ” ಎಂದು ವಿನಯದಿಂದ ಕೈಮುಗಿದಳು. ವ್ಯಾಪಾರಿಯ ಸ್ನೇಹಿತ ತಬ್ಬಿ ಚಡಪಡಿಸಿದ. ವ್ಯಾಪಾರಿಯಲ್ಲಿ, “ ಇದೇನಪ್ಪಾ! ಊಟಕ್ಕೆಕೂರಿಸಿ ಬಂಗಾರದ ಅಕ್ಕಿ ಬಡಿಸಿ ಊಟ ಮಾಡು ಅನ್ನುತ್ತೀಯಲ್ಲ” ಎಂದ. ಆಗ ವ್ಯಾಪಾರಿ,” ಮೊನ್ನೆ ನೀನೇ ಕೇಳಿದಿಯಲ್ಲಪ್ಪ! ದೊಡ್ಡ ಸಾಹುಕಾರ ನೀನು. ಬಿದ್ದ ಅಕ್ಕಿ ಕಾಳುಗಳನ್ನು ಚಿನ್ನದ ಚೂರುಗಳೆಂದೇ ನೀನು ಭಾವಿಸಿದಂತಿದೆ ಎಂದು, ಎಷ್ಟು ಚಿನ್ನವಿದ್ದರೆ ಪ್ರಯೋಜನವೇನು? ರೈತ ಬೆವರು ಸುರಿಸಿ ಬೆಳೆಯನ್ನು ಬೆಳೆಯಬೇಕು. ಭೂತಾಯಿ ಕೃಪೆ ಮಾಡಿ ಕರುಣಿಸಬೇಕು. ಆಗ ಮಾತ್ರ ನಮ್ಮ ಬದುಕು! ಹನಿಹನಿ ಸೇರಿಹಳ್ಳ, ತೆನೆತೆನೆ ಸೇರಿ ಬಳ್ಳ ಅಲ್ಲವೇ? ಅನ್ನದ ಬೆಲೆ ಅರಿಯದವನು ಕೃತಘ್ನ. ಅನ್ನದಾತನ ಶ್ರಮಕ್ಕೆ ಬೆಲೆ ಕೊಡದವನೂ ಕೃತಘ್ನ” ಎಂದನು. ಆ ಸ್ನೇಹಿತನ ಕಣ್ಣಾಲಿಗಳು ತೇವವಾದವು. ಅನಂತರ ಆ ವ್ಯಾಪಾರಿಯ ಪತ್ನಿ ಇಬ್ಬರಿಗೂ ಮೃಷ್ಟಾನ್ನ ಬಡಿಸಿ ಉಪಚರಿಸಿದಳು.

**ನೀತಿ: ರೈತನ ಬೆವರಿಗೆ ಬೆಲೆ ಕಟ್ಟಲಾಗದು.**

ಚಿತ್ರಕಥೆ

# ಚೌತಿಯಂದು ಚಂದ್ರನನ್ನು ನೋಡಿದರೆ...!

ಕಥೆ : ತೆಲುಗು ಮೂಲ : ಡಾ॥ ಕೆ. ರವಿಚಂದ್ರನ್
ಅನುವಾದ : ಆರ್.ಕೆ.
ಚಿತ್ರಗಳು : ಟಿ. ಶಿವಾಜಿ






ರುಕ್ಮಿಣಿ! ಈ ಅಪವಾದವನ್ನು ತೊಲಗಿಸಿಕೊಳ್ಳಲು ನಾನು ಹೊರಡುತ್ತಿದ್ದೇನೆ. ಅಲ್ಲಿಯವರೆಗೂ ನೀನು ಗಣೇಶನ ವ್ರತವನ್ನು ಮಾಡುತ್ತಾ ಇರು . ನಾನು ಬೇಗ ಬರುತ್ತೇನೆ.
ಹಾಗೆಯೇ ...ಸ್ವಾಮಿ
ಶ್ರೀ ಕೃಷ್ಣನು ಕಾಡಿನಲ್ಲಿ ಹುಡುಕಾಡುತ್ತಾ ಹೊರಟನು. ಶಮಂತಕಮಣಿಯೂ ಜಾಂಬವಂತನ ಬಳಿ ಇರುವುದಾಗಿ ಗುರುತಿಸಿದನು. ಜಾಂಬವಂತನ ಗುಹೆಗೆ ಸೇರಿದನು....
ಜಾಂಬವಂತ.... ಆ ಮಣಿಯನ್ನು ನನಗೆ ಕೊಡು...
ಕೊಡದಿದ್ದರೆ....
ಯುದ್ಧವು ತಪ್ಪದು...
ಸರಿ ! ಹಾಗಾದರೆ ಯುದ್ಧವೇ ನನಗೂ ಇಷ್ಟ...
ಹಾಗೆಯೇ ...ಸ್ವಾಮಿ!
ಶ್ರೀ ಕೃಷ್ಣನೇ ಅಂದಿನ ಶ್ರೀರಾಮನೆಂದು ಜಾಂಬವಂತನು ಗುರ್ತಿಸಿದನು.
ಮಹಾತ್ಮ! ಮನ್ನಿಸು... ಶಮಂತಕ ಮಣಿಯೊಂದಿಗೆ ನನ್ನ ಪುತ್ರಿಯಾದ ಜಾಂಬವತಿಯನ್ನೂ ಕೂಡ ಸ್ವೀಕರಿಸು....
ಕೊಡದಿದ್ದರೆ...
ಸತ್ರಾಜಿತ್ ! ಇದೋ ನಿನ್ನ ಶಮಂತಕ ಮಣಿ
ಕೃಷ್ಣಾ! ನನ್ನನ್ನು ಕ್ಷಮಿಸು. ಶಮಂತಕ ಮಣಿ ಯೊಂದಿಗೆ ಸತ್ಯಭಾಮೆಯನ್ನು ಸ್ವೀಕರಿಸು...
ಶ್ರೀಕೃಷ್ಣನು ತನ್ನ ಪತ್ನಿಯರೊಂದಿಗೆ ವ್ರತವನ್ನು ಆಚರಿಸಿ ಅಪವಾದದಿಂದ ವಿಮುಕ್ತಿಯನ್ನು ಪಡೆದನು. ವರ್ಷಕ್ಕೊಮ್ಮೆ ಚೌತಿಯಂದು ಯಾರು ಗಣೇಶನ ಪೂಜೆಯನ್ನು ಮಾಡುತ್ತಾರೋ, ಚೌತಿ ಚಂದ್ರನ ನೋಡುವುದಿಲ್ಲವೋ ಅವರಿಗೆ ಅಪವಾದಗಳು ತೊಲಗಿ, ಸುಖಶಾಂತಿ, ಐಶ್ವರ್ಯ ಪಡೆದು, ಶ್ರೀಕೃಷ್ಣನಂತೆ ಸಂತೋಷವಾಗಿರುತ್ತಾರೆ.
ಶುಭಂ

## ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......

ಪಕ್ಕದಲ್ಲಿರುವ ಗೊಂಬೆಯನ್ನು ಬಾಕ್ಸ್‌ನಲ್ಲಿ ಬರಿಯೋಣ...





ಈ ಚಿತ್ರದಲ್ಲಿ ಒಟು 7 ವ್ಯತ್ಯಾಸಗಳಿವೆ.

ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.



## ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

| | | | | | | | |
|---|---|---|---|---|---|---|---|
| ಕ್ಕ | ಬಂ | ವಾ | ರೂ | ರ | ಅ | ಸಾ | ಬಿ |
| ನ | ಅ | ಗಾ | ದ | ಕ್ಕ | ಅ | ಡ | ಗ |

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.




ಇತ್ತೀಚೆಗೆ ಅಮೇರಿಕಾದಲ್ಲಿರುವ ಸಿಯಾಟ್‌ನಲ್ಲಿ ನಿರ್ವಹಿಸಿದ ಶ್ರೀನಿವಾಸ ಕಲ್ಯಾಣ ಮಹೋತ್ಸವದ ದೃಶ್ಯ. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಆಡಳಿತಮಂಡಳಿ ಅಧ್ಯಕ್ಷರು ಶ್ರೀ ವೈ. ವಿ. ಸುಬ್ಬಾರೆಡ್ಡಿಯವರು ಸತಿ ಸಮೇತವಾಗಿ ಪಾಲ್ಗೊಂಡರು.



ಇತ್ತೀಚೆಗೆ ಅಮೇರಿಕಾದಲ್ಲಿರುವ ಸ್ಯಾನ್ ಫ್ರಾನ್ಸಿಸ್ಕೋ ನಲ್ಲಿ ನಿರ್ವಹಿಸಿದ ಶ್ರೀನಿವಾಸ ಕಲ್ಯಾಣ ಮಹೋತ್ಸವದ ದೃಶ್ಯ.
ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಆಡಳಿತಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿಯವರು ಸತಿ ಸಮೇತವಾಗಿ ಪಾಲ್ಗೊಂಡರು.






ಇತ್ತೀಚೆಗೆ ಅಮೇರಿಕಾದಲ್ಲಿರುವ ಸೈಂಟ್‌ಲೂಯಿಸ್,ಡಲ್ಲಾಸ್ ನಗರಗಳಲ್ಲಿ ನಿರ್ವಹಿಸಿದ ಶ್ರೀನಿವಾಸ ಕಲ್ಯಾಣ ಮಹೋತ್ಸವದ ದೃಶ್ಯ.
ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಆಡಳಿತಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿಯವರು ಸತಿ ಸಮೇತವಾಗಿ ಪಾಲ್ಗೊಂಡರು.

SAPTHAGIRI (KANNADA) ILLUSTRATED MONTHLY Published by Tirumala Tirupati Devasthanams Printing on 25-07-2022 and Posting at Tirupati RMS.Regd. with the Registrar of Newspapers for India under RNI. No. APKAN/2021/80589. Postal Regd.No.TRP/156/2021-2023
"Licenced to Post Without Prepayment No. PMGK/RNP/WPP-04(6)/2021-2023" Posting on 20th of Every Month

